17 May 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸುಖ ಮತ್ತು ದುಃಖ ನಾಣ್ಯದ ಎರಡು ಮುಖಗಳು ನಿಜ, ಆದರೆ ಒಂದನ್ನೊಂದು ಕಾಣದಂತಿರುತ್ತವೆ, ಬೆಳಕು ಮತ್ತು ಕತ್ತಲಿನಂತೆ!

-ಸ್ನೇಹಾ ಆನಂದ್

info.varthaman@gmail.com


ಬಸವ, ಅಂಬೇಡ್ಕರ್, ಬಾಬೂಜಿ ಆದರ್ಶಗಳು ಬದುಕಿಗೆ ಆಧಾರಸ್ತಂಭ — ಪುಟ ಸಂ. 2


ಕಾಂಗ್ರೆಸ್ ನಾಯಕರಿಗೆ ಬುರ್ಕಾದ ಅವಶ್ಯಕತೆಯಿದೆ: ಸಿಂಹ — ಪುಟ ಸಂ. 3


ಎಚ್.ಡಿ.ಕೋಟೆ ತಾಲೂಕಿನಲ್ಲಿ ಗಾಳಿ ಮಳೆಯ ರೌದ್ರಾವತಾರ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 173 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಮೆಟ್ರೋ ರೈಲಿನಲ್ಲಿ ವಿಜಯೇಂದ್ರ ಸಂಚಾರ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯ ಕರೆಯನ್ನು ಬೆಂಬಲಿಸುವ ನಿಟ್ಟಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಬೆಂಗಳೂರು ಮೆಟ್ರೋ ರೈಲಿನಲ್ಲಿ ಸಂಚಾರ ಮಾಡಿದರು.

ತಮ್ಮ ಅಧಿಕೃತ ಕಾರು ಮತ್ತು ಬೆಂಗಾವಲು ವಾಹನಗಳನ್ನು ಕಡಿಮೆ ಮಾಡಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯಾದ ಮೆಟ್ರೋ ರೈಲನ್ನು ಬಳಸುವ ನಿರ್ಧಾರ ಮಾಡಿದ್ದಾರೆ. ಪಕ್ಷದ ಕಾರ್ಯಕ್ರಮಗಳಿಗೆ ಹೋಗುವಾಗ ಕಾರು ಬಿಟ್ಟು ಮೆಟ್ರೋದಲ್ಲಿ ಪ್ರಯಾಣ ಮಾಡಿದ್ದಾರೆ. ಇದಕ್ಕಾಗಿ ಅವರು ಮೆಜೆಸ್ಟಿಕ್ ನಿಂದ ಕೆಂಗೇರಿವರೆಗೂ ಮೆಟ್ರೋದಲ್ಲಿ ಪ್ರಯಾಣ ಮಾಡಿ, ಸಾಮಾನ್ಯ ಜನರ ನಡುವೆ ಕುಳಿತು ಪ್ರಯಾಣಿಸಿದ್ದಾರೆ. ಕುಂಬಳಗೂಡಿನ ಕಾರ್ಯಕ್ರಮಕ್ಕೂ ಮೆಟ್ರೋ ಮೂಲಕವೇ ತೆರಳಿದ್ದಾರೆ.

ಸಾರ್ವಜನಿಕ ಸಾರಿಗೆಯನ್ನು ಬಳಸುವ ಮೂಲಕ ಇಂಧನ ಉಳಿಸುವುದಷ್ಟೇ ಅಲ್ಲ, ಟ್ರಾಫಿಕ್ ದಟ್ಟಣೆ




ಕಡಿಮೆ ಮಾಡುವಲ್ಲಿ ಸಹ ಸಹಾಯವಾಗುತ್ತದೆ ಎಂಬ ಸಂದೇಶವನ್ನು ನೀಡಲು ಯತ್ನಿಸುತ್ತಿದ್ದಾರೆ.

ಪ್ರಧಾನಿ ಪೆಟ್ರೋಲ್, ಡೀಸೆಲ್ ಮಿತವ್ಯಯಕ್ಕೆ ಸಲಹೆ ಕೊಟ್ಟಿದ್ದಾರೆ. ಅವರು ಸ್ವತಃ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಂಡಿದ್ದಾರೆ. ಹಾಗಾಗಿ ನಾನು ಕೂಡ ಅವರ ಮಾತಿಗೆ ಸ್ಪಂದಿಸಿ ಮೆಟ್ರೋದಲ್ಲಿ ಪ್ರಯಾಣ ಮಾಡುತ್ತಿದ್ದೇನೆ ಎಂದು ವಿಜಯೇಂದ್ರ ತಿಳಿಸಿದರು.

## ಭೂಪಟದಲ್ಲಿ ಪಾಕಿಸ್ತಾನ ಇರಬೇಕೆ?

**ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಎಚ್ಚರಿಕೆ । ದೆಹಲಿಯಲ್ಲಿ ಸಂವಾದ**

**ನವದೆಹಲಿ:** ಭಯೋತ್ಪಾದಕರಿಗೆ ಆಶ್ರಯ ನೀಡುವುದು, ಭಾರತದ ವಿರುದ್ಧ ಕಾರ್ಯಾಚರಣೆ ನಡೆಸುವುದನ್ನು ಮುಂದುವರಿಸಿದರೆ ವಿಶ್ವದ ಭೂಪಟದಲ್ಲಿ ಪಾಕಿಸ್ತಾನ ಇರಬೇಕೆ ಅಥವಾ ಬೇಡವೇ ಅನ್ನೋದನ್ನು ನಾವು ನಿರ್ಧರಿಸುತ್ತೇವೆ ಎಂದು ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಎಚ್ಚರಿಕೆ ನೀಡಿದ್ದಾರೆ.




ದೆಹಲಿಯಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಆಪರೇಷನ್ ಸಿಂಧೂರ್‌ಗೆ ಕಾರಣವಾದ ಸಂದರ್ಭಗಳು ಮತ್ತೆ ಬಂದರೆ ಭಾರತೀಯ ಸೇನೆಯು ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದು ಪಾಕಿಸ್ತಾನಕ್ಕೆ ತಿಳಿದಿದೆ ಎಂದು ತಿರುಗೇಟು ನೀಡಿದರು.

ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಕಳೆದ ವರ್ಷ ಮೇ 7ರಂದು ಆಪರೇಷನ್ ಸಿಂಧೂರ ಪ್ರಾರಂಭಿಸಲಾಯಿತು. ಭಾರತೀಯ ಪಡೆಗಳು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಅನೇಕ ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ನಿಖರವಾದ ದಾಳಿಗಳನ್ನು ನಡೆಸಿದ್ದವು.

## ರೈಲು, ಬಸ್‌ನಲ್ಲಿ ಓಡಾಡುವೆ!

**ಮೋದಿ ಸಲಹೆ ಪಾಲಿಸಿ ಮಿತವ್ಯಯ: ವಿ.ಸೋಮಣ್ಣ**

**ಬೆಂಗಳೂರು:** ಮಿತವ್ಯಯಕ್ಕೆ ಪ್ರಧಾನಿ ಮೋದಿ ಸಲಹೆಯನ್ನು ಪಾಲಿಸುವುದಾಗಿ ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ತಿಳಿಸಿದರು.



ಬೆಂಗಳೂರಿನಲ್ಲಿ ಶನಿವಾರ ಮಾತಾಡಿದ ವಿ.ಸೋಮಣ್ಣ, ನಾನೂ ರೈಲು, ಬಸ್‌ನಲ್ಲಿ ಓಡಾಡ್ತೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ, ಅನುಕೂಲ ಇದೆಯೋ ಅಲ್ಲೆಲ್ಲ ರೈಲು ಮೂಲಕ ಪ್ರಯಾಣ ಮಾಡ್ತೇನೆ. ಮೈಸೂರು, ಹುಬ್ಬಳ್ಳಿ, ತುಮಕೂರು ಮತ್ತಿತರ ಕಡೆ ರೈಲಿನಲ್ಲೇ ಹೋಗ್ತೇನೆ ಎಂದು ಹೇಳಿದರು.


ಈಗಾಗಲೇ ವಾಹನಗಳ ಬಳಕೆ ಕಡಿಮೆ ಮಾಡಿದ್ದೇವೆ. ಸಿಬ್ಬಂದಿ ಬಳಕೆ ಕಡಿಮೆ ಮಾಡಿದ್ದೇನೆ. ದುಂದು ವೆಚ್ಚ ಏನೂ ಮಾಡಲ್ಲ. ರಾಜ್ಯದಲ್ಲಿ ಸರ್ಕಾರ ಒಂದು ಎಸ್ಕಾರ್ಟ್ ವಾಹನ ಕೊಟ್ಟಿದೆ. ದೆಹಲಿಗೆ ರೈಲಿನಲ್ಲಿ ಹೋಗಲು ಆಗಲ್ಲ. ಫ್ಲೈಟ್ ಅನಿವಾರ್ಯ. ಸ್ಥಳೀಯವಾಗಿ ರೈಲು ಪ್ರಯಾಣಕ್ಕೆ ಆದ್ಯತೆ ಕೊಡ್ತೇನೆ ಎಂದು ತಿಳಿಸಿದರು.

ದುಂದು ವೆಚ್ಚ ಕಡಿಮೆ ಮಾಡಬೇಕು ಜನ. ರೈಲಿನಲ್ಲೇ ಓಡಾಡಿ,

ಪುಟ 2ಕ್ಕೆ

## ರಾಜ್ಯಕ್ಕೆ 1,122 ವೈದ್ಯಕೀಯ ಸೀಟು

**ವೈದ್ಯಕೀಯ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿ: ಡಾ.ಶರಣಪ್ರಕಾಶ ಪಾಟೀಲ್**



**ಬೆಂಗಳೂರು:** ರಾಜ್ಯದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಬಯಸುವವರಿಗೆ ಉತ್ತಮ ಅವಕಾಶ ಲಭಿಸಲಿದೆ. ರಾಜ್ಯಕ್ಕೆ ಹೆಚ್ಚುವರಿ 1,122 ಸೀಟುಗಳು ದೊರೆಯಲಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ತಿಳಿಸಿದರು.

ವಿಕಾಸಸೌಧದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಚಿವರು, ನಮ್ಮ ರಾಜ್ಯ ವೈದ್ಯಕೀಯ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ರಾಜ್ಯಕ್ಕೆ ದೊರೆತಿರುವ ಹೆಚ್ಚುವರಿ ಸೀಟುಗಳು ಕೊಪ್ಪಳ, ಗದಗ, ಚಾಮರಾಜನಗರ, ಕಾರವಾರ, ಹಾವೇರಿ ಸೇರಿ ಇತರೆ ಜಿಲ್ಲೆಗಳಿಗೆ ದೊರೆಯಲಿದೆ ಎಂದು ತಿಳಿಸಿದರು.

ಪದವಿಪೂರ್ವ ಸೀಟುಗಳಿಗೆ ಕೇಂದ್ರ ಸರ್ಕಾರದಿಂದ 495 ಕೋಟಿ ರೂ. ಅನುದಾನ ಸಿಗಲಿದೆ. ಅದೇ ರೀತಿ ಸ್ನಾತಕೋತ್ತರ ವೈದ್ಯಕೀಯ ಸೀಟುಗಳಿಗೆ 541 ಕೋಟಿ ರೂಪಾಯಿ ಅನುದಾನ ಸಿಗಲಿದೆ. ಕೇಂದ್ರ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯು ಮೇ 15ರಂದು ಅಂತಿಮ ಮುದ್ರೆ ಹಾಕಿದೆ. ಒಟ್ಟಾರೆಯಾಗಿ ರಾಜ್ಯಕ್ಕೆ 1,090 ಕೋಟಿ ರೂ. ದೊರೆಯಲಿದೆ ಎಂದು ಅವರು ಹೇಳಿದರು.

ರಾಜ್ಯಕ್ಕೆ ಒಂದು ಸಾವಿರ ಮೆಡಿಕಲ್ ಸೀಟ್ ಒಂದು ರಾಜ್ಯಕ್ಕೆ ಸಿಕ್ಕಿರುವುದು ದಾಖಲೆಯಾಗಿದೆ. ಕರ್ನಾಟಕದ ಸಾಧನೆಗೆ ಇದು ಪೂರಕವಾದ ಸಾಕ್ಷಿಯಾಗಿದೆ ಎಂದರು.

# ಡಿಕೆಶಿ ಸಿಎಂ ಕನಸಿಗೆ ಕಂಟಕ?

**ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆ । ಅಧಿಕಾರ ಹಸ್ತಾಂತರ ಗಡುವು ವಿಸ್ತರಣೆ?**

**ಬೆಂಗಳೂರು:** ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶ ಮತ್ತು ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆ ಫಲಿತಾಂಶದ ನಂತರ ಅಧಿಕಾರ ಹಸ್ತಾಂತರ ಆಗಲಿದೆ ಎಂದು ಕಾದಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮತ್ತೊಂದು ಅಡ್ಡಿ ಎದುರಾಗಿದೆ ಎನ್ನಲಾಗಿದೆ.

ಪಂಚ ರಾಜ್ಯ ಚುನಾವಣೆ ಫಲಿತಾಂಶದ ನಂತರ ಸಂಪುಟ ಪುನರ್ ರಚನೆ ಅಥವಾ ನಾಯಕತ್ವ ಬದಲಾವಣೆಗೆ ಕಾಂಗ್ರೆಸ್ ಹೈಕಮಾಂಡ್ ಅನುಮೋದನೆ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಕಾದಿದ್ದರು. ಆದರೆ ಕರ್ನಾಟಕದ ನಾಲ್ಕು ರಾಜ್ಯಸಭಾ ಮತ್ತು ಏಳು ವಿಧಾನ ಪರಿಷತ್ ಸ್ಥಾನಗಳಿಗೆ ಜೂನ್‌ನಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇರುವುದರಿಂದ ಪಕ್ಷದ ಹೈಕಮಾಂಡ್ ನಿರ್ಧಾರವನ್ನು ಮತ್ತಷ್ಟು ಮುಂದೂಡಬಹುದು ಎಂಬ ಆತಂಕ ಡಿ.ಕೆ.ಶಿವಕುಮಾರ್ ಬೆಂಬಲಿಗರಲ್ಲಿ ಈಗ ಶುರುವಾಗಿದೆ.



ಎಐಸಿಸಿ ಅಧ್ಯಕ್ಷ ಮತ್ತು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ನಾಲ್ಕು ರಾಜ್ಯಸಭಾ ಸದಸ್ಯರ ಅವಧಿ ಜೂನ್ 25, 2026ರಂದು ಕೊನೆಗೊಳ್ಳಲಿದೆ. ದ್ವೈವಾರ್ಷಿಕ ಚುನಾವಣೆಗೆ ಜೂನ್ ಮೊದಲ ವಾರದಲ್ಲಿ ಅಧಿಸೂಚನೆ

ಪುಟ 2ಕ್ಕೆ

### 30ರೊಳಗೆ ಸಂಪುಟ ಪುನರ್ ರಚನೆ: ರಾಯರಡ್ಡಿ

**ಕೊಪ್ಪಳ:** ರಾಜ್ಯದಲ್ಲಿ ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆ ಮೇ 30ರ ಒಳಗೆ ಮಾಡಬಹುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಶೀಘ್ರದಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲಿದ್ದಾರೆ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಈಗಿನ ಅವಧಿ ಪೂರ್ಣಗೊಳ್ಳುವ ತನಕ ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಆಗಿ ಮುಂದುವರಿಯುತ್ತಾರೆ ಎನ್ನುವ ನಂಬಿಕೆ ನನ್ನದು. ಪದೇ ಪದೇ ಮುಖ್ಯಮಂತ್ರಿ ಬದಲಾವಣೆ ಮಾಡುವುದು ಸರಿಯಲ್ಲ. ಸಂಪುಟ ಪುನರ್ ರಚನೆಯಾದರೆ ಉಳಿದ ಎರಡು ವರ್ಷಗಳ ಅವಧಿಯಲ್ಲಿ ಪರಿಣಾಮಕಾರಿಯಾದ ಆಡಳಿತ ಜನರಿಗೆ ನೀಡಬಹುದು. ನಮ್ಮಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು 2028ರಲ್ಲಿಯೂ ಅಧಿಕಾರಕ್ಕೆ ಬರಬಹುದು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿಯೇ ಮುಂಬರುವ ಚುನಾವಣೆ ಎದುರಿಸುತ್ತೇವೆ. ಸಿದ್ದರಾಮಯ್ಯ ಅವರಷ್ಟೇ ಆಡಳಿತದ ಅನುಭವ ಹೊಂದಿರುವ ಮಲ್ಲಿಕಾರ್ಜುನ ಖರ್ಗೆ ಅಂಥವರು ಮುಖ್ಯಮಂತ್ರಿಯಾಗಬೇಕು ಎಂದು ಹೇಳಿದರು. ಸಚಿವ ಸ್ಥಾನ ನೀಡುವಂತೆ ಕೇಳಿದ್ದೀರಾ ಎನ್ನುವ ಪ್ರಶ್ನೆಗೆ, ದೇವರಾಣೆಗೂ ಕೇಳಿಲ್ಲ ಎಂದರು.



ಪ್ರಧಾನಿ ನರೇಂದ್ರ ಮೋದಿ ಯುದ್ಧವನ್ನು ನೆಪವಾಗಿಟ್ಟುಕೊಂಡು ಪೆಟ್ರೋಲ್ ಹಾಗೂ ಡಿಸೇಲ್ ಬೆಲೆ ಹೆಚ್ಚಳ ಮಾಡಿದ್ದಾರೆ. ದೇಶದ ರೂಪಾಯಿ ಮೌಲ್ಯ ಕುಸಿತವಾಗಿದ್ದು ಮೋದಿ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ. ಅವರು ರಾಜೀನಾಮೆ ಕೊಡಬೇಕು. ಆರ್ಥಿಕ ತಜ್ಞರೊಬ್ಬರು ಪ್ರಧಾನಿಯಾಗಬೇಕು ಎಂದು ಆಗ್ರಹಿಸಿದರು.

## ಎ ಖಾತಾ ಅಭಿಯಾನಕ್ಕೆ ಚಾಲನೆ

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ 5 ನಗರ ಪಾಲಿಕೆಗಳ ಆಸ್ತಿ ಮಾಲೀಕರಿಗೆ ಭೂ ದಾಖಲೆಗಳನ್ನು ಸುರಕ್ಷತೆ, ವಂಚನೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ 23 ಲಕ್ಷಕ್ಕೂ ಅಧಿಕ ಆಸ್ತಿ ದಾಖಲೆಗಳನ್ನು ಸ್ಕ್ಯಾನ್ ಹಾಗೂ ಡಿಜಿಟಲೀಕರಣ ಮಾಡಲಾಗಿದೆ. ಅವುಗಳಿಗೆ ಇ-ಖಾತೆಗಳನ್ನು ಸಿದ್ಧಪಡಿಸಿ, ವಿತರಿಸಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ರಾಜ್ಯ ಸರ್ಕಾರವು ಬೆಂಗಳೂರು ನಗರ ಭೂಮಾಲೀಕರ ಹಿತಕ್ಕಾಗಿ ಸರ್ಕಾರದ 6ನೇ ಗ್ಯಾರಂಟಿ ಭೂ ಗ್ಯಾರಂಟಿ ಯೋಜನೆ ಘೋಷಿಸಿದೆ. ಈ ಯೋಜನೆಗೆ ಇಂದಿನಿಂದ ಅಧಿಕೃತ ಚಾಲನೆ ದೊರೆಯಲಿದೆ. ಬಿ ಖಾತಾ ದಿಂದ ಎ ಖಾತಾ ಪರಿವರ್ತನೆಗಾಗಿ ಮಾರ್ಗಸೂಚಿ ಬೆಲೆ ಶೇ. 5 ರ ಬದಲಿಗೆ ಶೇ. 2 ರಷ್ಟು ಮಾತ್ರ ಪಾವತಿಸಲು ಅವಕಾಶ ಕಲ್ಪಿಸಲಾಗಿದ್ದು, ಈ ಯೋಜನೆಯು ಕೇವಲ 100 ದಿನಗಳು ಮಾತ್ರ ಇರಲಿದೆ ಎಂದು ಹೇಳಿದರು.

ಪ್ರತಿ ಕೇಂದ್ರದಲ್ಲಿಯೂ ಸುಮಾರು 100ರಿಂದ 200 ನಾಗರಿಕರಿಗೆ ಸೇವೆ ಒದಗಿಸಲಾಗುತ್ತದೆ. 200ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಂದಲ್ಲಿ, ಅಂತಹವರಿಗೆ ಟೋಕನ್ ನೀಡಿ ಮುಂದಿನ ವಾರ ಅರ್ಜಿ ಸ್ವೀಕರಿಸುವ ವ್ಯವಸ್ಥೆ ಮಾಡಲಾಗುವುದು. ಪ್ರತಿ ಶನಿವಾರ ಸುಮಾರು 5000 ನಾಗರಿಕರಿಂದ ಸೇವೆ ಒದಗಿಸುವ ಗುರಿಯಿದೆ ಎಂದು ಅವರು ಹೇಳಿದರು.

## ಸಾರಿಗೆ ನೌಕರರ ಮುಷ್ಕರ ಫಿಕ್ಸ್

**ಬೆಂಗಳೂರು:** ಸರ್ಕಾರ ಮತ್ತು ಸಾರಿಗೆ ನೌಕರರ ವೇತನ ಹೆಚ್ಚಳ ವಿಚಾರಕ್ಕೆ ಹಗ್ಗಜಗ್ಗಾಟ ಮುಂದುವರೆದಿದೆ. ಮೇ 20ರಂದು ನಡೆಯಲಿರುವ ಅನಿರ್ದಿಷ್ಟಾವಧಿ ಮುಷ್ಕರದ ಜೊತೆಗೆ ಸರ್ಕಾರದ ಸಾಧನಾ ಸಮಾವೇಶಕ್ಕೂ ಹೋರಾಟದ ಬಿಸಿ ಮುಟ್ಟಿಸಲು ನೌಕರರು ಮುಂದಾಗಿದ್ದಾರೆ.

ಸಾರಿಗೆ ನೌಕರರ ಸಂಬಳ ಹೆಚ್ಚಳ ವಿಚಾರವಾಗಿ ಸರ್ಕಾರ ಮತ್ತು ಸಾರಿಗೆ ನೌಕರರ ನಡುವಿನ ಸಮಸ್ಯೆಗೆ ಸದ್ಯಕ್ಕೆ ಬ್ರೇಕ್ ಬೀಳುವ ಲಕ್ಷಣ ಕಾಣ್ತಿಲ್ಲ. ಪಟ್ಟು ಬಿಡದ ನೌಕರರ ಮನವೊಲಿಸೋಕೆ ಸರ್ಕಾರ ಶೇ.12.5 ಸಂಬಳ ಹೆಚ್ಚಳಕ್ಕೆ ತೀರ್ಮಾನಿಸಿ ಆದೇಶ ಮಾಡಿದೆ. ಆದರೆ, ಪಟ್ಟು ಬಿಡದ ನೌಕರರು ಸರ್ಕಾರದ ಆದೇಶವನ್ನು ಒಪ್ಪದೇ ಮುಷ್ಕರ ಮಾಡಲು ಪಟ್ಟು ಹಿಡಿದಿದ್ದಾರೆ. ಇದರ ಜೊತೆಗೆ ಸಾರಿಗೆ ನೌಕರರು ಸರ್ಕಾರದ ಸಾಧನಾ ಸಮಾವೇಶದಲ್ಲೂ ಸರ್ಕಾರದ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದಾರೆ. ಸಾಧನ ಸಮಾವೇಶ ನಡೆಯುವ 19ರಂದು ತುಮಕೂರಿನಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.



## ನೀಟ್ ರದ್ದು: ನಾಲ್ವರು ಆತ್ಮಹತ್ಯೆ

**ನವದೆಹಲಿ:** ಕೇಂದ್ರ ಸರ್ಕಾರ ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯನ್ನು ರದ್ದು ಮಾಡಿದ ಹಿನ್ನೆಲೆಯಲ್ಲಿ ಆಘಾತಕ್ಕೊಳಗಾಗಿ ನಾಲ್ವರು ನೀಟ್ ಆಕಾಂಕ್ಷಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಾಜಸ್ಥಾನದ ಸೀಕರ್ ಮೂಲದ ಪ್ರದೀಪ್ ಮೇಘವಾಲ್, ಉತ್ತರ ಪ್ರದೇಶ ರಿತಿಕ್ ಮಿಶ್ರಾ, ದೆಹಲಿಯ ಆಜಾದ್‌ಪುರದ ಅನಿಷ್ಕಾ ಪಾಂಡೆ ಹಾಗೂ ದಕ್ಷಿಣ ಗೋವಾದ 17 ವರ್ಷದ ಬಾಲಕ ಆತ್ಮಹತ್ಯೆಗೆ ಶರಣಾಗಿದ್ದಾರೆ. ದಕ್ಷಿಣ ಗೋವಾದ ಮಾರ್ಗೋವ್‌ನಲ್ಲಿ ಬಾಲಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಡೆತ್‌ನೋಟ್‌ನಲ್ಲಿ ಶೈಕ್ಷಣಿಕ ಒತ್ತಡವೇ ಕಾರಣ ಎಂದು ಬರೆದಿಟ್ಟಿದ್ದಾನೆ.

## 3ನೇ ಮಗುವಿಗೆ 30 ಸಾವಿರ 4ನೇ ಮಗುವಿಗೆ 40 ಸಾವಿರ

**ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಘೋಷಣೆ**

**ಆಂಧ್ರಪ್ರದೇಶ:** ರಾಜ್ಯದಲ್ಲಿ ಜನಸಂಖ್ಯೆ ಕುಸಿತವನ್ನು ತಡೆಯುವ ಸಲುವಾಗಿ ಮೂರನೇ ಮಗುವಿನ ಜನನಕ್ಕೆ 30 ಸಾವಿರ ಮತ್ತು ನಾಲ್ಕನೇ ಮಗುವಿಗೆ 40 ಸಾವಿರ ಪ್ರೋತ್ಸಾಹ ಧನ ನೀಡುವುದಾಗಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಶನಿವಾರ ಘೋಷಿಸಿದ್ದಾರೆ.

ಶ್ರೀಕಾಕುಳಂನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ ಈ ನಿರ್ಧಾರವನ್ನು ತೆಗೆದುಕೊಂಡಿದೆ. ಒಂದು ತಿಂಗಳೊಳಗೆ ಹೆಚ್ಚಿನ ವಿವರಗಳನ್ನು ಪ್ರಕಟಿಸಲಾಗುವುದು ಎಂದು ಹೇಳಿದರು.



ರಾಜ್ಯದಲ್ಲಿ ಜನಸಂಖ್ಯೆ ಇಳಿಯುತ್ತಿರುವುದನ್ನು ತಡೆಯಲು ನಾವು ಒಂದು ನಿರ್ಧಾರ ಮಾಡಿದ್ದೇವೆ. ಮೂರನೇ ಮಗು ಪಡೆದ ದಂಪತಿಗೆ ಕೂಡಲೇ 30,000, ನಾಲ್ಕನೇ ಮಗುವಿಗೆ 40,000 ಪ್ರೋತ್ಸಾಹ ಧನ ನೀಡಲಿದ್ದೇವೆ ಎಂದು ತಿಳಿಸಿದರು.

ಒಂದೊಮ್ಮೆ, ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಪ್ರತಿಪಾದಿಸಿದ್ದ ಅವರು, ಜನನ ಪ್ರಮಾಣವನ್ನು ಹೆಚ್ಚಿಸಲು ಸಮಾಜವು ಒಟ್ಟಾಗಿ ಕೆಲಸ ಮಾಡುವ ಸಮಯ ಈಗ ಬಂದಿದೆ ಎಂದರು.

ಕೆಲವು ದಂಪತಿ ಒಂದೇ ಒಂದು ಮಗುವನ್ನು ಪಡೆಯುತ್ತಿದ್ದಾರೆ. ಮತ್ತೆ ಕೆಲವರು ಮೊದಲನೇ ಮಗು ಗಂಡಾಗದಿದ್ದರೆ ಮಾತ್ರ ಎರಡನೇ ಮಗುವಿಗೆ ಚಿಂತಿಸುತ್ತಿದ್ದಾರೆ ಎಂದು ನಾಯ್ಡು ತಿಳಿಸಿದ್ದಾರೆ.

ಎರಡನೇ ಮಗುವಿನ ಜನನಕ್ಕೆ 25,000 ಪ್ರೋತ್ಸಾಹ ಧನ ನೀಡುವ ನಾಯ್ಡು ಅವರ ಹಿಂದಿನ ಘೋಷಣೆಯ ಮುಂದುವರಿದ ಭಾಗ ಇದಾಗಿದೆ.

ಪುಟ 2ಕ್ಕೆ

## ಜಿಟಿಡಿ ಕುತಂತ್ರ ರಾಜಕೀಯ ಬಿಡಲಿ

**ತಮ್ಮ ತಪ್ಪು ತಿದ್ದಿಕೊಂಡರೆ ಪಕ್ಷದಲ್ಲೇ ಮುಂದುವರಿಯಲಿ: ಸಾ.ರಾ ಕಿಡಿ**

**ಮೈಸೂರು:** ಶಾಸಕ ಜಿ.ಟಿ.ದೇವೇಗೌಡ ಅವರು ತಮ್ಮ ತಪ್ಪನ್ನು ತಿದ್ದಿಕೊಂಡು ಪಕ್ಷದಲ್ಲೇ ಮುಂದುವರೆಯಲು ನಿರ್ಧರಿಸಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿರುಗೇಟು ನೀಡಿದರು.



ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿ.ಟಿ.ದೇವೇಗೌಡ ಅವರು ಇನ್ನಾದರೂ ಅವಕಾಶವಾದಿ ರಾಜಕೀಯ ಮತ್ತು ಕುತಂತ್ರ ರಾಜಕೀಯವನ್ನು ಬಿಟ್ಟು ಪಕ್ಷ ಕಟ್ಟುವ ಕೆಲಸ ಮಾಡಲಿ ಎಂದು ವಾಗ್ದಾಳಿ ನಡೆಸಿದರು.

ನಮ್ಮ ಪಕ್ಷದ ವರಿಷ್ಠರಿಗೆ ಜಿ.ಟಿ.ದೇವೇಗೌಡ ಅವರ ಮೇಲೆ ಮತ್ತೆ ನಂಬಿಕೆ ಬಂದು ಅವರನ್ನು ಪಕ್ಷದಲ್ಲೇ ಉಳಿಸಿಕೊಳ್ಳಲು ತೀರ್ಮಾನಿಸಿದರೆ ನಮ್ಮ ವಿರೋಧ ಇಲ್ಲ ಎಂದು ಸ್ಪಷ್ಟಪಡಿಸಿದರು.

ಜಿ.ಟಿ.ದೇವೇಗೌಡರಿಂದ ಪಕ್ಷಕ್ಕೆ ಬಹಳ ದೊಡ್ಡ ನಷ್ಟವಾಗಿದೆ. ಅವರು ಪ್ರತಿ ಚುನಾವಣೆಗೆ ಒಂದೊಂದು ರೀತಿಯ ತೀರ್ಮಾನ ಮಾಡುತ್ತಾರೆ. ಪಕ್ಷಕ್ಕಿಂತ ನಮಗೆ ಯಾರೂ ದೊಡ್ಡವರಲ್ಲ. ಪಕ್ಷಕ್ಕೆ ನಿಷ್ಠಾವಂತ ಕಾರ್ಯಕರ್ತರ ಅವಶ್ಯಕತೆ ಇದೆಯೇ ಹೊರತು, ಇಂತಹ ನಾಯಕರ ಅನಿವಾರ್ಯತೆ ಇಲ್ಲ ಎಂದು ಅವರು ಕಟುವಾಗಿ

ಪುಟ 2ಕ್ಕೆ

### ಜಿಟಿಡಿ ತಂತ್ರ ಅರ್ಥವಾಗಿದೆ

ಮೈಸೂರು: ಪಕ್ಷದಿಂದ ನಡೆಸಿದ ಜನರೊಂದಿಗೆ ಜನತಾದಳ ಕಾರ್ಯಕ್ರಮದ ಸಮಾರೋಪವನ್ನು ಭಾನುವಾರ (ಮೇ 16ರಂದು) ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ಭೇಟಿಯಾಗಿ, ಹುಟ್ಟುಹಬ್ಬದ ಶುಭಾಶಯಗಳನ್ನು ಬಹಳ ಮಂಚಿತವಾಗಿಯೇ ತಿಳಿಸಿದ್ದಾರೆ. ಈ ಎಲ್ಲಾ ತಂತ್ರಗಳೂ ನಮಗೆ ಅರ್ಥವಾಗುತ್ತವೆ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಲೇವಡಿ ಮಾಡಿದರು.

# ಮುಂದಿನ ಮುಖ್ಯಮಂತ್ರಿ ಡಿಕೆಶಿ!

**ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರನಿಂದ ಹೋರ್ಡಿಂಗ್ ರಾಜಕೀಯ**

**ಬೆಳಗಾವಿ:** ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರನ್ನು ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸುವ ಹೋರ್ಡಿಂಗ್ ಬೆಳಗಾವಿ ನಗರದ ಹೃದಯಭಾಗದ ಚೆನ್ನಮ್ಮ ವೃತ್ತದಲ್ಲಿ ಕಾಣಿಸಿಕೊಂಡಿದೆ. ಈ ಬೆಳವಣಿಗೆ ರಾಜ್ಯ ರಾಜಕೀಯದಲ್ಲಿ ನಾಯಕತ್ವ ಬದಲಾವಣೆ ಕುರಿತು ಚರ್ಚೆ ಮತ್ತೆ ಆರಂಭವಾಗುವಂತೆ ಮಾಡಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಪುತ್ರ ಮೃಣಾಲ್ ಹೆಬ್ಬಾಳ್ಕರ್ ಅವರು ಡಿ.ಕೆ ಶಿವಕುಮಾರ್ ಜನ್ಮದಿನದ ಶುಭಾಶಯದ ಹೆಸರಿನಲ್ಲಿ ಈ ಬೃಹತ್ ಬ್ಯಾನರ್ ಹಾಕಿಸಿದ್ದಾರೆ. ಆದರೆ ಬ್ಯಾನರ್‌ನಲ್ಲಿ ಮುಂದಿನ ಸಿಎಂ ಡಿಕೆಶಿ ಎಂಬ ವಿಚಾರ ಬಳಕೆಯಾಗಿರುವುದು ಕಾಂಗ್ರೆಸ್ ವಲಯದಲ್ಲಿ ರಾಜಕೀಯ ಚರ್ಚೆಗೆ ಕಾರಣವಾಗಿದೆ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಂದುವರಿಸಬೇಕು ಎಂಬ ಒತ್ತಾಯ ಹಲವು ಕಾಂಗ್ರೆಸ್ ಶಾಸಕರಿಂದ




ಕೇಳಿಬರುತ್ತಿರುವ ಸಮಯದಲ್ಲೇ ಈ ಬೆಳವಣಿಗೆ ಮಹತ್ವ ಪಡೆದುಕೊಂಡಿದೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ಸೂತ್ರವಿದೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ನಿರಂತರವಾಗಿ ಸದ್ದು ಮಾಡುತ್ತಲೇ ಇದೆ. ಆದರೆ, ಪಕ್ಷದ ಹೈಕಮಾಂಡ್ ಈ ಕುರಿತು ಯಾವುದೇ ಅಧಿಕೃತ ಸ್ಪಷ್ಟನೆ ನೀಡಿಲ್ಲ. ಇದೀಗ ಲಕ್ಷ್ಮೀ ಹೆಬ್ಬಾಳ್ಕರ್ ಬಣದಿಂದಲೇ ಡಿಕೆ ಶಿವಕುಮಾರ್

ಪುಟ 2ಕ್ಕೆ

### ಅಭಿಮಾನ ತಡೆಯಲು ಸಾಧ್ಯವೇ?: ಹೆಬ್ಬಾಳ್ಕರ್

**ಉಡುಪಿ:** ಮುಖ್ಯಮಂತ್ರಿ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಆದರೆ ಕಾರ್ಯಕರ್ತರ ಅಭಿಮಾನ ತಡೆಯೋಕೆ ಸಾಧ್ಯವಿಲ್ಲ. ಅವರಿಗೆ ನಾವು ಹೇಳಿ ಬ್ಯಾನರ್ ಹಾಕಿಸಲು ಸಾಧ್ಯಾವೇ? ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶ್ನಿಸಿದರು.



ಉಡುಪಿಯಲ್ಲಿ ಮಾಧ್ಯಮಗಳ ಜೊತೆ ಅವರು ಮಾತನಾಡಿ,

ಪುಟ 2ಕ್ಕೆ

## ರಾಜ್ಯ ಸರ್ಕಾರಕ್ಕೆ ಮೂರು ವರ್ಷ: ಪಕ್ಷಾತೀತ ಸಮಾವೇಶ–ಪರಮೇಶ್ವರ್

**ತುಮಕೂರು:** ರಾಜ್ಯ ಸರ್ಕಾರ ಮೂರನೇ ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಮೇ 19ರಂದು ಸಮಾವೇಶ ಆಯೋಜಿಸಲಾಗಿದೆ. ಸಮಾವೇಶ ಯಶಸ್ವಿಗೆ ಅಧಿಕಾರಿಗಳು ಮುಂದಾಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಸೂಚನೆ ನೀಡಿದರು.


ನಗರದ ಸರ್ಕಾರಿ ಕಾಲೇಜು ಮೈದಾನದಲ್ಲಿ ಶನಿವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಾರ್ಯಕ್ರಮದ ಸಿದ್ಧತೆಗಳ ಕುರಿತು ಮಹತ್ವದ ಸೂಚನೆಗಳನ್ನು ಸಚಿವರು ನೀಡಿದರು.

ಇದು ಸರ್ಕಾರಿ ಕಾರ್ಯಕ್ರಮವಾಗಿದೆ. ಪಕ್ಷಾತೀತವಾಗಿ ನಡೆಯಬೇಕು. ಎಲ್ಲ ಪಕ್ಷಗಳಲ್ಲಿಯೂ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಸರ್ಕಾರದ ಸೌಲಭ್ಯಗಳು ಎಲ್ಲರಿಗೂ ಸಮಾನವಾಗಿ ಸಿಗಬೇಕು ಎಂದು ಅವರು ತಿಳಿಸಿದರು.

ಫಲಾನುಭವಿಗಳನ್ನು ಯಾವುದೇ ಗೊಂದಲವಿಲ್ಲದೆ ಸರಿಯಾಗಿ ಕರೆತರಬೇಕು. ಅವರಿಗೆ ಹಕ್ಕುಪತ್ರಗಳು ಹಾಗೂ ಸೌಲಭ್ಯಗಳು ಸುಗಮವಾಗಿ ದೊರೆಯುವಂತೆ ನೋಡಿಕೊಳ್ಳಬೇಕು. ಇದು ನಿಯೋಜಿತ ಅಧಿಕಾರಿಗಳ ಪ್ರಮುಖ ಜವಾಬ್ದಾರಿ ಎಂದು ಹೇಳಿದರು.

ಸಾರಿಗೆ ಮುಷ್ಕರದ ಸಮಸ್ಯೆ ಕುರಿತು ಸಂಘಟನೆ ಮುಖಂಡರೊಂದಿಗೆ ಮಾತುಕತೆ ನಡೆಸಲಾಗಿದೆ. ಅವರು ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡಿದ್ದಾರೆ. ಯಾವುದೇ ರೀತಿಯ ಸಮಸ್ಯೆ ಎದುರಾಗುವುದಿಲ್ಲ ಎಂದು ಸಚಿವರು ತಿಳಿಸಿದರು.

ಫಲಾನುಭವಿಗಳನ್ನು ಕರೆತರುವಾಗ ಅವರಿಗೆ ಉಪಹಾರ ವ್ಯವಸ್ಥೆ ಮಾಡಬೇಕು.



ಪುಟ 2ಕ್ಕೆ

# ಬಸವ, ಅಂಬೇಡ್ಕರ್, ಬಾಬೂಜಿ ಆದರ್ಶಗಳು ಸಾರ್ಥಕ ಬದುಕಿಗೆ ಆಧಾರಸ್ತಂಭ

ಚಾಮರಾಜನಗರ, ಸಮಾನತೆಗಾಗಿ ಶ್ರಮಿಸಿದ ಜಗಜ್ಯೋತಿ ಬಸವೇಶ್ವರರು, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರವರು ಹಾಗೂ ಹಸಿರುಕ್ರಾಂತಿಯ ಹರಿಕಾರ ಡಾ.ಬಾಬುಜಗಜೀವನರಾಂ ಅವರು ತತ್ವಗಳು, ಮೌಲ್ಯಗಳು ಸಾರ್ಥಕ ಬದುಕಿಗೆ ಆಧಾರಸ್ತಂಭ'ಗಳಾಗಿವೆ ಎಂದು ಜಿಲ್ಲಾಧಿಕಾರಿ. ಶ್ರೀರೂಪ ಹೇಳಿದರು.

ನಗರದ ರೋಟರಿ ಭವನದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕ ಹಾಗೂ ರೋಟರಿ ಸಂಸ್ಥೆಯ ಸಹಕಾರದಲ್ಲಿ ನಡೆದ ಜಗಜ್ಯೋತಿ ಬಸವೇಶ್ವರರು, ಡಾ.ಬಿ.ಆರ್.ಅಂಬೇಡ್ಕರ್ ರವರ ಹಾಗೂ ಮಾಜಿ.ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಅವರ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಸವೇಶ್ವರರು, ಡಾ.ಬಿ.ಆರ್.ಅಂಬೇಡ್ಕರ್, ಡಾ.ಬಾಬುಜಗಜೀವನರಾಂ ಮೂವರು ಮಹಾನ್ ಮಾನವಾತಾವಾದಿಗಳಾಗಿದ್ದು, ಸಮಾಜಕ್ಕೆ, ದೇಶಕ್ಕೆ ತಮ್ಮದೆಯಾದ ಕೊಡುಗೆಗಳನ್ನು ನೀಡಿದ್ದಾರೆ. ಬಸವೇಶ್ವರರು 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ ಸರ್ವರಿಗೂ ಅವಕಾಶ ಕಲ್ಪಿಸಿಕೊಡುವ ಮೂಲಕ



ಸಮಾನತೆಗಾಗಿ ಶ್ರಮಿಸಿದರು. ಅದೇ ರೀತಿಯಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಬಾಲ್ಯದಲ್ಲಿ ತುಂಬಾ ಸಂಕಷ್ಟದಲ್ಲಿ ವಿದ್ಯಾಭ್ಯಾಸ ಮಾಡಿ ದೇಶ, ವಿದೇಶಗಳಲ್ಲಿ ವ್ಯಾಸಂಗ ಮಾಡಿ. ಅಪಾರ ವಿದ್ವತ್ ಗಳಸಿ ಸಂವಿಧಾನ ಬರೆದು ದೇಶದಲ್ಲಿ ವಾಸ ಮಾಡುವ ಪ್ರತಿ ನಾಗರಿಕನೂ ಸಮಾನತೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಎಂದರು.

ಭಾರತ ಮಾಜಿ ಉಪಪ್ರಧಾನಿ, ಹಸಿರುಕ್ರಾಂತಿಯ ಹರಿಕಾರರಾದ ಡಾ.ಬಾಬುಜಗಜೀವನರಾಂ ಅವರು ಶೋಷಿತರ ಪರಧ್ವನಿಯಾಗಿ ಭಾರತ ಸರ್ಕಾರದಲ್ಲಿ ಅತಿ ಸುದೀರ್ಘ ಕಾಲ ಸಚಿವರಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಹೊಂದಿದ್ದಾರೆ ಎಂದರು. ಈ ಮೂವರು ಮಹನೀಯರ ತತ್ತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಡಿವೈಎಸ್ ಪಿ ಸ್ನೇಹರಾಜ್ ಮಾತನಾಡಿ ಚಿಕ್ಕಚಿಕ್ಕ ವಿಷಯಗಳಿಗೆ ಪ್ರಾಣ ಕಳೆದುಕೊಳ್ಳುವುದು, ಮನೆಬಿಟ್ಟು ಹೋಗುವುದು, ಪೋಷಕರಿಗೆ ಬ್ಲಾಕ್‌ಮೇಲ್ ಮಾಡುವಂತದ್ದು, ಚಿಕ್ಕಮಕ್ಕಳಲ್ಲಿ ತುಂಬಾ ಕಾಣಿಸುತ್ತದೆ. ಅದನ್ನು ಬಿಟ್ಟು ಮಕ್ಕಳೇ ಎಲ್ಲರೂ ಮುಂದಕ್ಕೆ ಬರಬೇಕಾದರೆ ವಿದ್ಯಾರ್ಥಿಗಳ ಜೀವನದಲ್ಲಿ ಎಂತಹವೇ ಕಷ್ಟವೇ ಬರಲಿ ಅದನ್ನು ಮೆಟ್ಟಿನಿಲ್ಲುವ ಧೈರ್ಯವನ್ನು ಬೆಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

### ಸನ್ಮಾನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಎಸ್.ರಾಜು, ಮುಖ್ಯ ಶಿಕ್ಷಕ ಕೆ.ಎನ್.ಪ್ರಮೋದ್ ಚಂದನ್ , ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಗುರುಲಿಂಗಮ್ಮ, ಕರ್ನಾಟಕ ಕನ್ನಡ ಜಾಗೃತಿ ವೇದಿಕೆ ಅಧ್ಯಕ್ಷ ಚಾ.ಸಿ.ಸಿದ್ದರಾಜು ಅವರನ್ನು ಸನ್ಮಾನಿಸಲಾಯಿತು.

### ಪ್ರತಿಭಾ ಪುರಸ್ಕಾರ

ಎಸ್‌ಎಸ್‌ಎಲ್ ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ರಾಜಕುಮಾರ್ ಪುಷ್ಪಾರ್ಚನೆ ಮಾಡಿ ಮಾತನಾಡಿ, ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ತುಂಬಾ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿದೆ. ಆಗಾಗಿ ವಿದ್ಯಾರ್ಥಿಗಳು ಮೊಬೈಲ್ ಬಳಕೆಯಿಂದ ದೂರವಿರಬೇಕು ಮಹನೀಯರ ಸಂದೇಶಗಳನ್ನು ತಿಳಿದುಕೊಂಡು ಚೆನ್ನಾಗಿ ಓದುವ ಮೂಲಕ ನಿಮ್ಮ ಪೋಷಕರಿಗೆ ಒಳ್ಳೆಯ ಹೆಸರು ತಂದು ಕೊಡುವ ಕೆಲಸವನ್ನು ಮಾಡಬೇಕು ಎಂದರು. ಕನ್ನಡ ಮಹಾಸಭಾದ ಚಾ.ರಂ.ಶ್ರೀನಿವಾಸಗೌಡ ಪ್ರಸ್ತಾವಿಕವಾಗಿ ಮಾತನಾಡಿ, ಅಖಿಲ ಕರ್ನಾಟಕ ಕನ್ನಡ ಮಹಾಸಭಾವು ಕನ್ನಡ ನಾಡು, ನುಡಿ,ಜಲ ಸಂರಕ್ಷಣೆಗಾಗಿ ಹೋರಾಟ ಮಾಡುವ ಜೊತೆಗೆ ರಾಷ್ಟ್ರನಾಯಕರು, ಮಹನೀಯರ ಜಯಂತಿಗಳು, ಪ್ರತಿಭಾ ಪುರಸ್ಕಾರಗಳನ್ನು ನಿರಂತರವಾಗಿ ಮಾಡಿಕೊಂಡು ಬರಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ನಗರಸಭೆ ಪೌರಾಯುಕ್ತ ಪರಶುರಾಮ ಎಂ.ಛಲವಾದಿ, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ವಕೀಲ ನಾಗಾರ್ಜುನ ಪೃಥ್ವಿ, ಮಹಾಸಭಾದ ಜಿಲ್ಲಾಧ್ಯಕ್ಷ ಲೋಕೇಶ್ ಹೊಮ್ಮ, ಸಹ ಕಾರ್ಯದರ್ಶಿ ಪಣ್ಯದಹುಂಡಿ ರಾಜು,ನಿಜಧ್ವನಿಗೋವಿಂದರಾಜು, ಶ್ರೀಗಂಧ ಕನ್ನಡ ಯುವ ವೇದಿಕೆ ಅಧ್ಯಕ್ಷ ರವಿಚಂದ್ರಪ್ರಸಾದ್ ಕಹಳೆ, ರಾಚಪ್ಪ, ಮುತ್ತಿಗೆ ಗೋವಿಂದರಾಜು, ಮಹೇಶ್ ಗೌಡ ಇತರರು ಹಾಜರಿದ್ದರು.

**ಮೊದಲ ಪುಟದಿಂದ**

## ಅಭಿಮಾನ ತಡೆಯಲು ಸಾಧ್ಯವೇ?:

ಬೆಳಗಾವಿಯಲ್ಲಿ ಅವರ ಹಾಗೂ ಪುತ್ರನ ಫೋಟೋ ಜೊತೆ ಡಿಕೆಶಿ ಮುಂದಿನ ಸಿಎಂ ಬ್ಯಾನರ್ ರಾರಾಜಿಸಿದ್ದರ ಬಗ್ಗೆ ಪ್ರತಿಕ್ರಿಯಿಸಿ, ನಾನು ಹೇಳಿ ಬ್ಯಾನರ್ ಹಾಕಿಸಲು ಸಾಧ್ಯಾವೇ? ಕಾರ್ಯಕರ್ತರ ಅಭಿಮಾನ ತಡೆಯಲು ಸಾಧ್ಯವಿಲ್ಲ. ಕಾರ್ಯಕರ್ತರು ಅಭಿಮಾನದಿಂದ ಬ್ಯಾನರ್ ಹಾಕುತ್ತಾರೆ ಎಂದು ತಿಳಿಸಿದರು.

## ಮುಂದಿನ ಮುಖ್ಯಮಂತ್ರಿ ಡಿಕೆಶಿ!

ಅವರನ್ನು ಮುಂದಿನ ಸಿಎಂ ಎಂದು ಬಹಿರಂಗವಾಗಿ ಬಿಂಬಿಸಿರುವುದು ಹಲವು ಚರ್ಚೆಗಳಿಗೆ ಎಡೆ ಮಾಡಿಕೊಟ್ಟಿದೆ.

## ರೈಲು, ಬಸ್‌ನಲ್ಲಿ ಓಡಾಡುವೆ!

ಕಾರುಗಳಲ್ಲಿ ಬೇಡ ಅಂತ ಹೇಳೋ ಅಗತ್ಯ ಇಲ್ಲ. ಆದರೆ, ಜನ ದುಂದುವೆಚ್ಚ ಕಡಿಮೆ ಮಾಡಿಕೊಳ್ಳಲಿ ಸಾಕು. ರಾಜ್ಯ ಸರ್ಕಾರ ದರ ಏರಿಕೆ ಮಾಡಿ ಜನರ ಮೇಲೆ ದೊಡ್ಡ ಹೊರೆಯನ್ನೇ ಹೊರೆಸಿದೆ. ಹೀಗಾಗಿ, ರಾಜ್ಯ ಸರ್ಕಾರಕ್ಕೆ ಕೇಂದ್ರದ ಬಗ್ಗೆ ಮಾತಾಡೋ ನೈತಿಕತೆ ಇಲ್ಲ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಬೊಕ್ಕಸ ಖಾಲಿ ಮಾಡಿದೆ. 8.24 ಲಕ್ಷ ಕೋಟಿ ಸಾಲ ಮಾಡಲಾಗಿದೆ ಎಂದು ವಾಗ್ದಾಳಿ ನಡೆಸಿದರು.

## ಜಿಟಿಡಿ ಕುತಂತ್ರ ರಾಜಕೀಯ ಬಿಡಲಿ

ಪ್ರತಿಕ್ರಿಯಿಸಿದರು.

ಜೆಡಿಎಸ್ ಪಕ್ಷ ಜಿ.ಟಿ.ದೇವೇಗೌಡರಿಗೆ ಎಲ್ಲಾ ರೀತಿಯ ಅಧಿಕಾರ ಕೊಟ್ಟಿತ್ತು. ಆದರೆ ಅವರು ಪಕ್ಷಕ್ಕೆ ಮೋಸ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಈ ಭಾಗದಲ್ಲಿ ಸಾಮೂಹಿಕ ನಾಯಕತ್ವ ಕಟ್ಟಿಕೊಂಡಿದ್ದೇವೆ ಎಂದು ಹೇಳಿದರು.

ನಗರದಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಿಟಿಡಿ ಒಂದೊಂದು ಚುನಾವಣೆಯಲ್ಲೂ ಒಂದೊಂದು ತೀರ್ಮಾನ ಮಾಡುತ್ತಾರೆ. ಅವರ ನಿರ್ಧಾರಗಳಿಂದ ನಮ್ಮ ಕಾರ್ಯಕರ್ತರಿಗೆ ಅಘಾತವಾಗಿದೆ ಎಂದು ದೂರಿದರು.

## ರಾಜ್ಯ ಸರ್ಕಾರಕ್ಕೆ ಮೂರು ವರ್ಷ: ಪಕ್ಷಾತೀತ ಸಮಾವೇಶ–ಪರಮೇಶ್ವರ್

ಎಲ್ಲ ಬಸ್ಸುಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಜೊತೆಗೆ ವೈದ್ಯಕೀಯ ಸೌಲಭ್ಯಗಳ ಕುರಿತು ಅಗತ್ಯ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಪರಮೇಶ್ವರ್ ಸೂಚನೆ ನೀಡಿದರು.

# ಉದ್ಯಾನ ನಿರ್ವಹಣೆ ವರ್ಗಾವಣೆ

## ನಗರಸಭೆಗೆ ಮನವಿ ಮಾಡಿದ್ದ ಸ್ವಾಭಿಮಾನಿ ಸೇವಾ ಸಮಿತಿ: ಸಮಿತಿಯ ನಿರ್ಧಾರಕ್ಕೆ ಮೆಚ್ಚುಗೆ

ರಾಮನಗರ: ನಗರದ ಅರ್ಕಾವತಿ ಬಡಾವಣೆಯಲ್ಲಿರುವ ಉದ್ಯಾನವನದ ನಿರ್ವಹಣೆಯ ಜವಾಬ್ದಾರಿ ತೆಗೆದುಕೊಳ್ಳಲು ಇಚ್ಚಿಸಿದ ಸ್ವಾಭಿಮಾನಿ ಸೇವಾ ಸಮಿತಿಗೆ ಸ್ಥಳೀಯ ನಗರಸಭೆ ಒಪ್ಪಿಗೆ ಸೂಚಿಸಿದ್ದು, ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮತ್ತು ಆಯುಕ್ತ ಡಾ.ಜಯಣ್ಣ ಸಮಿತಿಯ ಪದಾಧಿಕಾರಿಗಳಿಗೆ ನಿರ್ವಹಣೆಯ ಹೊಣೆಯನ್ನು ಹಸ್ತಾಂತರಿಸಿದ್ದಾರೆ.

ಸಮಿತಿಯ ಅಧ್ಯಕ್ಷ ಗವಿಯಪ್ಪ ಮತ್ತು ಪದಾಧಿಕಾರಿಗಳಿಗೆ ಉದ್ಯಾನವನ ನಿರ್ವಹಣೆ ಹೊಣೆಯನ್ನು ಸ್ವೀಕರಿಸಿದರು.

### ಯುಜಿಡಿ ಸಂಪರ್ಕಕ್ಕೆ ಬೇಕು 200 ಕೋಟಿ – ಕೆ.ಶೇಷಾದ್ರಿ

ಈ ವೇಳೆ ಮಾತನಾಡಿದ ನಗರಸಭಾಧ್ಯಕ್ಷ ಕೆ.ಶೇ?ಾದ್ರಿ, ನಗರದಲ್ಲಿ ನಿರ್ಮಾಣಗೊಂಡಿರುವ ಬಹುತೇಕ ಅನಧಿಕೃತ ಬಡಾವಣೆಗಳು ರಸ್ತೆ, ಚರಂಡಿ, ಉದ್ಯಾನವನ ಸೇರಿದಂತೆ ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿವೆ. ಅಲ್ಲದೆ, ನಗರದಲ್ಲಿ ಶೇಕಡ 52ರ?ುು ಭಾಗದಲ್ಲಿ ಯುಜಿಡಿ ಸಂಪರ್ಕವೇ ಇಲ್ಲ ಎಂದರು. ನಗರದ ಎಲ್ಲಾ ಭಾಗಕ್ಕೂ ಯುಜಿಡಿ ಸಂಪರ್ಕ ಕಲ್ಪಿಸಲು ಸುಮಾರು 200 ಕೋಟಿ ಬೇಕಾಗುತ್ತದೆ. ನಾನು ಅಧ್ಯಕ್ಷನಾದಾಗಿನಿಂದಲೂ ನಮ್ಮ ಜಿಲ್ಲೆಯವರೇ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡುತ್ತಲೇ ಬಂದಿದ್ದೇನೆ. ಅವರು ಅನುದಾನ ನೀಡುವುದಾಗಿ ಭರವಸೆ ನೀಡುತ್ತಲೇ ಬಂದಿದ್ದಾರೆ. ಅವರು ಮುಖ್ಯಮಂತ್ರಿಯಾದರೆ ಯುಜಿಡಿ ಸೇರಿದಂತೆ ಹಲವು ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಅನುದಾನ ಬರುತ್ತದೆ. ಅಲ್ಲಿವರೆಗೆ ಕಾಯಬೇಕಿದೆ ಎಂದು ಹೇಳಿದರು.



### ಸ್ವಾಭಿಮಾನಿ ಸಮಿತಿ ಬಗ್ಗೆ ಆಯುಕ್ತರ ಶ್ಲಾಘನೆ

ಆಯುಕ್ತ ಡಾ.ಜಯಣ್ಣ ಮಾತನಾಡಿ, ಉದ್ಯಾನ ನಿರ್ವಹಣೆಗೆ ಸ್ವಯಂ ಪ್ರೇರಣೆಯಿಂದ ಸ್ವಾಭಿಮಾನಿ ಸೇವಾ ಸಮಿತಿ ಮುಂದೆ ಬಂದಿರುವುದು ಶ್ಲಾಘನೀಯ. ಒಳ್ಳೆಯ ಸಾಂಪ್ರದಾಯಕ್ಕೆ ಸಾಕ್ಷಿಯಾಗಿದ್ದೀರಿ. ನಗರದಲ್ಲಿ ಖಾಸಗಿ ನಿರ್ವಹಣೆಗೆ ವಹಿಸಿರುವ ಎರಡನೇ ಉದ್ಯಾನ ಇದಾಗಿದೆ. ಈಗಾಗಲೇ ಕುವೆಂಪು ಉದ್ಯಾನವನ್ನು ಸ್ಥಳೀಯರಿಗೆ ವಹಿಸಲಾಗಿದೆ. ಇದು ಪ್ರೇರಣದಾಯಕ ಕೆಲಸ ಎಂದರು. ಸಮಿತಿ ಅಧ್ಯಕ್ಷ ಎಸ್. ಗವಿಯಪ್ಪ ಮಾತನಾಡಿ, ನಗರಸಭೆಯು ಸಮಿತಿ ಮೇಲೆ ನಂಬಿಕೆ ಇಟ್ಟು ಉದ್ಯಾನ ನಿರ್ವಹಣೆಯ ಜವಾಬ್ದಾರಿ ಕೊಟ್ಟಿದೆ. ಉದ್ಯಾನವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿ ನಂಬಿಕೆ ಉಳಿಸಿಕೊಳ್ಳುತ್ತೇವೆ ಎಂದು ಹೇಳಿದರು.

ನಗರಸಭೆಗೆ ಬಂದಿದ್ದ ಎನ್ ಜಿಟಿಯ 33 ಕೋಟಿ ಅನುದಾನದಲ್ಲಿ ವಾರ್ಡ್–1 ಮತ್ತು 2ರಲ್ಲಿ ಯುಜಿಡಿಗೆ ಯೋಜನೆ ರೂಪಿಸಲಾಗಿದೆ. ಅನುದಾನ ಆಧರಿಸಿ ಮುಂದೆಯೂ ಹಂತ ಹಂತವಾಗಿ ವಿಸ್ತರಿಸಲಾಗುವುದು. ಈ ಮೊದಲು ನಗರಸಭೆಯಲ್ಲಿ ಸುಮಾರು 6 ಕೋಟಿ ತೆರಿಗೆ ಸಂಗ್ರಹವಾಗುತ್ತಿತ್ತು. ನಾನು ಅಧ್ಯಕ್ಷನಾದ ಬಳಿಕ ಅದನ್ನು 10 ಕೋಟಿ ರು.ಗೆ ಏರಿಕೆಯಾಗಿದೆ. ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡೇ ಮಾದರಿ ನಗರ ನಿರ್ಮಾಣಕ್ಕೆ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಅನು?ಾನಗೊಳಿಸಿದ್ದೇವೆ ಎಂದು ಕೆ.ಶೇ?ಾದ್ರಿ ತಿಳಿಸಿದರು.

ನಗರಸಭೆ ಸದಸ್ಯ ಕೆ. ರಮೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್, ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಿವಕುಮಾರಸ್ವಾಮಿ, ಮುಖಂಡರಾದ ಆನಂದ್, ಆರ್. ನಾಗರಾಜು, ಚಂದ್ರು ಮಾತನಾಡಿದರು.

ನಗರಸಭಾ ಸದಸ್ಯೆ ಜಯಲಕ್ಷ್ಮಮ್ಮ, ಡಾ.ನಯಾಜ್ ಅಹಮದ್, ಚಿಕ್ಕೇನಹಳ್ಳಿ ನಾಗರಾಜ್, ಸಮಿತಿ ಸಂಸ್ಥಾಪಕ ಅಧ್ಯಕ್ಷ ಸಿ. ಸಿದ್ದರಾಜು, ಉಪಾಧ್ಯಕ್ಷ ಪುಟ್ಟಸ್ವಾಮಿ, ಖಜಾಂಚಿ ಶಿವಣ್ಣ, ಸದಸ್ಯರಾದ ಕೆಂಗಲ್ ವಿನಯಕುಮಾರ್,

ಬಸವರಾಜು, ಮರಿಸ್ವಾಮಿ, ಆರ್. ನಾಗರಾಜು, ಲಕ್ಷ್ಮಿ ಕುಮಾರ್, ನಾಗವೀರಯ್ಯ, ಶಿವಲಿಂಗಯ್ಯ, ರಾಮು, ವೆಂಕಟೇಶ್, ಹೋಬಯ್ಯ, ಸುರೇಂದ್ರ ಕುಮಾರ್, ಜವರಯ್ಯ, ಗಂಗಾಧರ್, ಪುರು?ೋತ್ತಮ್, ಜೈಪ್ರಕಾಶ್, ಮಿಲಿಟರಿ ವೆಂಕಟೇಶ್, ಸಿದ್ದಪ್ಪಾಜಿ ಮತ್ತಿತರರು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ

**ಮೀನುಗಾರಿಕೆ ಇಲಾಖೆ**

**ಮೀನುಗಾರಿಕೆ ಸಹಾಯಕ ನಿರ್ದೇಶಕರುರವರ ಕಛೇರಿ, ನಂಜನಗೂಡು ತಾಲ್ಲೂಕು ಪಂಚಾಯಿತಿ ಆವರಣ, ಮೈಸೂರು ಗುಂಡ್ಲಪೇಟೆ ರಸ್ತೆ, ನಂಜನಗೂಡು–571301**

**ಮೀನುಗಾರಿಕೆ ಇಲಾಖೆ, ನಂಜನಗೂಡು ತಾಲ್ಲೂಕು**

ಸಂಖ್ಯೆ:ಮೀಸನಿನಗೂ/ಹಗುಪ/3/2026–27 ದಿ: 13.05.2026

**ಕೆರೆಗಳ ಮೀನು ಪಾಶುವಾರು ಹಕ್ಕಿನ ನೇರಗುತ್ತಿಗೆ ವಿಲೇವಾರಿ ಪ್ರಕಟಣೆ**

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರಗುತ್ತಿಗೆ ಮುಖಾಂತರ 2026–27ನೇ ಸಾಲಿನಿಂದ 2030–31ನೇ ಸಾಲಿನವರೆಗೆ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಸರ್ಕಾರದ ನಿಯಮಾನುಸಾರ ಅರ್ಹ ಮೀನುಗಾರರ ಸಹಕಾರ ಸಂಘ ಹಾಗೂ ರೈತ ಮೀನುಗಾರ ಉತ್ಪಾದಕರ ಸಂಸ್ಥೆ (FFPO)ಗೆ ಈ ಕೆಳಕಂಡ ಜಲಸಂಪನ್ಮೂಲಗಳ ನೇರಗುತ್ತಿಗೆ ನೀಡಲಾಗುವುದು.

**1. ಮಾಬ್ಬಳ್ಳಿ ಕೆರೆ 2. ಕಸುವಿನಹಳ್ಳಿ ವಳಗೆರೆ ಕೆರೆ 3. ಕಿರುಗುಂದ ಕೆರೆ**

ಸದರಿ ಜಲಸಂಪನ್ಮೂಲದ ಮೀನುಪಾಶುವಾರು ಹಕ್ಕನ್ನು ಪಡೆಯಲಿಚ್ಚಿಸುವ ಅರ್ಹ ಮೀನುಗಾರರ ಸಹಕಾರ ಸಂಘ ಹಾಗೂ ರೈತ ಮೀನುಗಾರ ಉತ್ಪಾದಕರ ಸಂಸ್ಥೆ ಮಾತ್ರ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ದಿ: 02.06.2026 ರೊಳಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಗುತ್ತಿಗೆ ಪಡೆಯಲು ಸಲ್ಲಿಸಬೇಕಾದ ಅರ್ಜಿ, ಷರತ್ತು/ನಿಬಂಧನೆಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು.

**ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು ನಂಜನಗೂಡು ತಾಲ್ಲೂಕು**

DIPR/DDMYS/183/KSMCA/139/2026-27


**ಮೊದಲ ಪುಟದಿಂದ**

## ಡಿಕೆಶಿ ಸಿಎಂ ಕನಸಿಗೆ ಕಂಟಕ?

ಪ್ರಕಟಿಸುವ ಸಾಧ್ಯತೆಯಿದೆ. ಕಾಂಗ್ರೆಸ್ ನಾಲ್ಕು ಸ್ಥಾನಗಳಲ್ಲಿ ಮೂರು ಸ್ಥಾನಗಳನ್ನು ಗೆಲ್ಲಬಹುದು. ಆದ್ದರಿಂದ ಈ ಸಮೀಕ್ಷೆಗಳು ನಿರ್ಣಾಯಕವಾಗಿವೆ ಎನ್ನಲಾಗಿದೆ.

ಕಾಂಗ್ರೆಸ್ ಸರ್ಕಾರವು ಮೇ 20ಕ್ಕೆ ಮೂರು ವರ್ಷಗಳ ಅಧಿಕಾರವನ್ನು ಪೂರ್ಣಗೊಳಿಸುತ್ತದೆ. ಇದರ ಒಳಗಾಗಿ ಅಧಿಕಾರ ಹಸ್ತಾಂತರದ ಸಾಧ್ಯತೆ ಇಲ್ಲ. ಆದರೆ ಆನಂತರವಾದರೂ ಸಿಎಂ ಕುರ್ಚಿ ಸಿಗಲಿದೆಯಾ ಎಂದು ಡಿಕೆಶಿ ಕಾದು ಕುಳಿತಿದ್ದಾರೆ.

ಮತ್ತೊಂದೆಡೆ, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ ಎಂದು ಸಿಎಂ ಬೆಂಬಲಿಗರು ಹೇಳುತ್ತಾರೆ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸುವ ಅಪಾಯ ಎದುರಿಸಲು ಬಯಸುವುದಿಲ್ಲ. ಹೀಗಾಗಿ ಒಂದೊಂದು ಕಾರಣ ಹೇಳುತ್ತಾ ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಮುಂದೂಡಲಾಗುತ್ತಿದೆ ಎನ್ನಲಾಗಿದೆ.

## 3ನೇ ಮಗುವಿಗೆ 30 ಸಾವಿರ, 4ನೇ ಮಗುವಿಗೆ 40 ಸಾವಿರ

ಎರಡನೇ ಮಗುವನ್ನು ಹೊಂದುವ ದಂಪತಿಗೆ 25,000 ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಸಿಎಂ ನಾಯ್ಡು ಕಳೆದ ಮಾರ್ಚ್ 5ರಂದು ವಿಧಾನಸಭೆಯಲ್ಲಿ ಘೋಷಿಸಿದ್ದರು. ಆರೋಗ್ಯ ಸಚಿವ ಸತ್ಯ ಕುಮಾರ್ ಯಾದವ್ ಅವರು, ಸರ್ಕಾರವು ಮೂರನೇ ಮಗು ಮತ್ತು ಅದಕ್ಕಿಂತ ಹೆಚ್ಚಿನ ಮಕ್ಕಳನ್ನ ಹೊಂದುವ ದಂಪತಿಗೂ ಪ್ರೋತ್ಸಾಹ ಧನ ವಿಸ್ತರಿಸಲು ನಿರ್ಧರಿಸಿದೆ ಎಂದಿದ್ದರು.

# ಇಂದು ಜನರೊಂದಿಗೆ ಜನತಾದಳ ಸಮಾರೋಪ

ಮೈಸೂರು: ಇಂದು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ನಡೆಯುತ್ತಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ಬೋಗಾದಿ ರಿಂಗ್ ರಸ್ತೆಯಿಂದ ಬೋರ್ಗೇಶ್ವರ ದೇವಾಲಯದವರೆಗೆ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿಯವರ ಮೆರವಣಿಗೆ ನಡೆಯಲಿದೆ. ಸಮಾವೇಶದಲ್ಲಿ ಚಾಮರಾಜನಗರ, ಮೈಸೂರು, ಮಂಡ್ಯ, ಸುತ್ತ ಮುತ್ತಲ ಕ್ಷೇತ್ರದಿಂದ ಸುಮಾರು 35 ರಿಂದ 40 ಸಾವಿರ ಜನರು ಭಾಗವಹಿಸಲಿದ್ದಾರೆ. ಭಾನುವಾರ ನಡೆಯುವ ಕಾರ್ಯಕ್ರಮದ ಮೂಲಕ ರಾಜ್ಯಕ್ಕೆ ಒಂದು ಸಂದೇಶ ಹೋಗಲಿದ್ದು, ಜೆಡಿಎಸ್ ಪಕ್ಷ ಎಲ್ಲಿದೆ ಎಂದು ಕೇಳುತ್ತಿದ್ದವರಿಗೆ ಉತ್ತರ ಸಿಗಲಿದೆ ಎಂದರು.

ಮಾಜಿ ಸಚಿವ ಸಾ.ರಾ. ಮಹೇಶ್ ಮಾತನಾಡಿ, ಮೈಸೂರು ಜಿಲ್ಲೆಯ ಜೆಡಿಎಸ್ ಕಾರ್ಯಕ್ರಮವನ್ನು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಾಡಬೇಕು ಹಾಗೂ ಖುದ್ದು ಕುಮಾರಸ್ವಾಮಿ ಈ ಕಾರ್ಯಕ್ರಮಕ್ಕೆ ಬರಬೇಕು ಎಂದು ಕೇಳಿಕೊಂಡಿದ್ದೆವು. ಈ ಹಿನ್ನೆಲೆ ಸಮಾವೇಶಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬರುತ್ತಿದ್ದಾರೆ. ಈ ಕಾರ್ಯಕ್ರಮ ಯಶಸ್ವಿ ಮಾಡಲು ಎಲ್ಲರೂ ಪಣ ತೊಟ್ಟಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷ ಸದೃಢವಾಗಬೇಕು ಎಂದರು.

ಸಾಮೂಹಿಕ ನಾಯಕತ್ವದ ಸಂಘಟನೆ: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನ ಶಾಸಕ ಜಿ.ಟಿ ದೇವೇಗೌಡ ಭೇಟಿಯಾಗಿ ಶುಭಕೋರಿದ ವಿಚಾರ ಮತ್ತು 2028ಕ್ಕೆ ಜೆಡಿಎಸ್ ನಿಂದಲೇ ಸ್ಪರ್ಧೆ ಎಂಬ ಹೇಳಿಕೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿ, ವರಿಷ್ಠರ ಬಳಿ ಜಿ.ಟಿ.ದೇವೇಗೌಡರು ನಂಬಿಕೆ ಉಳಿಸಿಕೊಂಡರೆ ನಮ್ಮ ಅಭ್ಯಂತರವಿಲ್ಲ. ಅವರ ತಪ್ಪನ್ನು ತಿದ್ದಿಕೊಂಡು ಪಕ್ಷದಲ್ಲೇ ಉಳಿದರೂ ನಮ್ಮ ಅಭ್ಯಂತರವಿಲ್ಲ. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ದೇವೇಗೌಡರು, ರಾಜ್ಯ ನಾಯಕರು ಕುಮಾರಸ್ವಾಮಿ. ಹಾಗೆಯೇ



ಮೈಸೂರು ಜಿಲ್ಲೆಗೆ ಜಿ.ಟಿ.ದೇವೇಗೌಡ ಏಕೈಕ ನಾಯಕರು ಅಂತ ಎಲ್ಲರೂ ಹೇಳುತ್ತಿದ್ದರು. ಆದರೆ, ಉಪ ಚುನಾವಣೆಯಲ್ಲಿ ಒಂದು ರೀತಿ, ವಿಧಾನಸಭೆಯಲ್ಲಿ ಒಂದು ರೀತಿ, ಮಹಾನಗರಪಾಲಿಕೆಯಲ್ಲಿ ಒಂದು ತೀರ್ಮಾನ, ಡಿಸಿಸಿ ಬ್ಯಾಂಕ್ ಮತ್ತು ಸಹಕಾರ ಯೂನಿಯನ್ ನಲ್ಲಿ ಒಂದು ತೀರ್ಮಾನ ಮಾಡಿಕೊಂಡು ಬಂದಿದ್ದಾರೆ. ಅವರ ಈ ನಡೆಯೇ ಎಲ್ಲರಿಗೂ ಬೇಸರ ತರಿಸಿದೆ. ಇದು ಪಕ್ಷದ ಮುಖಂಡರರು ಮತ್ತು ಕಾರ್ಯಕರ್ತರಿಗೆ ನೋವನ್ನುಂಟು ಮಾಡಿದೆ. ಇದೀಗ ಅವರ ತೀರ್ಮಾನದಿಂದ ಕಾರ್ಯಕರ್ತರಿಗೆ ಅಘಾತವಾಗಿದೆ ಎಂದರು.

ದೇವೇಗೌಡರ ಭೇಟಿ ಸಂದರ್ಭ ಒಬ್ಬೇ ಒಬ್ಬ ಚಾಮುಂಡೇಶ್ವರಿ ಕ್ಷೇತ್ರದ ಮುಖಂಡರು ಜತೆಯಲ್ಲಿ ಇರಲಿಲ್ಲ. ಬೇರೆ ಬೇರೆ ಕ್ಷೇತ್ರದ ಮುಖಂಡರನ್ನು ಕರೆದುಕೊಂಡು ಹೋಗಿದ್ದಾರೆ. ಜಿ.ಟಿ. ದೇವೇಗೌಡರಿಂದ ನಮ್ಮ ಪಕ್ಷಕ್ಕೆ ಬಹಳ ನಷ್ಟವಾಗಿದೆ. ನಮ್ಮ ಜತೆ ಜಿಟಿಡಿ ಇಲ್ಲ ಅಂತ ಎಚ್.ಡಿ. ಕುಮಾರಸ್ವಾಮಿ ಈಗಾಗಲೇ ಹೇಳಿದ್ದಾರೆ. ಈ ರೀತಿಯ ತಂತ್ರಗಾರಿಕೆ, ಅವಕಾಶವಾದಿ ರಾಜಕಾರಣವನ್ನು ಜಿಟಿಡಿ ಬಿಡಬೇಕು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಕೆ.ಮಹದೇವು, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಜೆಡಿಎಸ್ ನಗರಾಧ್ಯಕ್ಷ ಎಸ್.ಬಿ.ಎಂ. ಮಂಜು, ಬೆಳವಾಡಿ ಶಿವಮೂರ್ತಿ, ಗಂಗಾಧರ್‌ಗೌಡ, ಚಂದ್ರಶೇಖರ್, ವಿಜಯನಗರ ಮಂಜು, ವರುಣ ಅಭಿಷೇಕ್, ಜಿಪಂ ಮಾಜಿ ಸದಸ್ಯ ಸೋಮು ಇನ್ನಿತರರು ಉಪಸ್ಥಿತರಿದ್ದರು.

### ಬುನಾದಿ ಸಾಕ್ಷರತೆ ಸಂಖ್ಯಾಜ್ಞಾನದ ಸಾಮರ್ಥ್ಯದಿಂದ

# ಎಸ್‌ಎಸ್‌ಎಲ್‌ಸಿ ಫಲಿತಾಂಶದ ಮೇಲೆ ಸಕಾರಾತ್ಮಕ ಪರಿಣಾಮ

ಚಾಮರಾಜನಗರ, ಪ್ರಾಥಮಿಕ ಹಂತದಲ್ಲಿಯೇ ಮಕ್ಕಳು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ (ಎಫ್‌ಎಲ್‌ಎನ್) ಸಾಮರ್ಥ್ಯಗಳನ್ನು ಸಾಧಿಸಿದರೆ, ಎಸ್‌ಎಸ್‌ಎಲ್ಸಿ ಫಲಿತಾಂಶದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಅಭಿಪ್ರಾಯಪಟ್ಟರು.

ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಷನ್ನ ಜಿಲ್ಲಾ ಸಂಸ್ಥೆ ಸಹಯೋಗದಲ್ಲಿ ಚಾಮರಾಜನಗರ ಜಿಲ್ಲಾ ಮತ್ತು ತಾಲ್ಲೂಕು ಹಂತದ ಅನು??ಠನಾಧಿಕಾರಿಗಳಿಗೆ ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಹಮ್ಮಿಕೊಳ್ಳಲಾಗಿರುವ ಎರಡು ದಿನಗಳ ಶೈಕ್ಷಣಿಕ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

2025–26ರ ಶೈಕ್ಷಣಿಕ ವರ್ಷದಲ್ಲಿ ಫಲಿತಾಂಶವು ಶೇಕಡ 91ರಷ್ಟು ಬಂದಿರುವುದು ಸಂತೋಷವಾಗಿದೆ. ಇದಕ್ಕೆ ಕಾರಣರಾದ ಜಿಲ್ಲೆಯ ಶಿಕ್ಷಕರಿಗೆ ಅಭಿನಂದನೆಗಳು. ಶಿಕ್ಷಕಿಯೊಬ್ಬರು ತಮ್ಮ ಮನೆಯಲ್ಲಿ



ಸಾವು ಸಂಭವಿಸಿದ್ದರೂ ಮಕ್ಕಳಿಗೆ ಅನ್ಯಾಯವಾಗಬಾರದೆಂಬ ಕಾರಣಕ್ಕೆ ಶಾಲೆಗೆ ಬಂದು ಮಕ್ಕಳಿಗೆ ಗಣಿತ ಪಾಠ ಮಾಡಿದ್ದಾರೆ. ಇದು ಶಿಕ್ಷಕರ ಬದ್ಧತೆ ತೋರುತ್ತದೆ ಎಂದರು.

ಸರ್ಕಾರವು ಪ್ರತಿ ವರ್ಷ ಸರ್ಕಾರಿ ಶಾಲೆಗೆ ಬರುವ ಪ್ರತಿ ಮಗುವಿನ ಮೇಲೆ ಸುಮಾರು 22,000 ರೂ.ಗಳನ್ನು ವಿನಿಯೋಗಿಸುತ್ತಿದೆ. ನಾವು ಈ ವರ್ಷ ಒಂದು ಕ್ರಿಯಾ ಯೋಜನೆಯನ್ನು ಹಾಕಿಕೊಂಡು ಮಕ್ಕಳ ಫಲಿತಾಂಶ ಪ್ರಗತಿ ಸಾಧಿಸಲು ಕಾರ್ಯ ಪ್ರವೃತ್ತವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಮ್ ಜೀ ಫೌಂಡೇಷನ್ ಜಂಟಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಸಂತಸದ ಸಂಗತಿ. 2026–27ನೇ ಸಾಲಿಗೆ ಶೇಕಡ 95ಕ್ಕೂ ಹೆಚ್ಚು ಫಲಿತಾಂಶ ಸಾಧಿಸುವ ಗುರಿಯನ್ನು ಹೊಂದಲಾಗಿದೆ ಎಂದು ಜಿಲ್ಲಾ ಪಂಚಾಯತ್ ಸಿಇಒ ಮೋನಾ ರೋತ್ ಅವರು ತಿಳಿಸಿದರು.

ಡಯಟ್ ಪ್ರಾಂಶುಪಾಲರಾದ ಕಾಶಿನಾಥ್ ಮಾತನಾಡಿ ಶಿಕ್ಷಣದ ಕುರಿತು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಹೆಚ್ಚು ಆಸಕ್ತಿ ಮತ್ತು ಕಾಳಜಿ ಇದೆ. ಜೊತೆಗೆ ಈ ನಿಟ್ಟಿನಲ್ಲಿ ಅವರ ಕಾರ್ಯವೈಖರಿ ಉತ್ತಮವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಎಸ್. ಚಂದ್ರಪಾಟೀಲ್ ಅವರು ಮಾತನಾಡಿ ಸರ್ಕಾರಿ ಶಾಲೆಯ ಮಕ್ಕಳ ಶಿಕ್ಷಣ ಪ್ರಗತಿ ನಮ್ಮ ಜವಾಬ್ದಾರಿಯಾಗಿದೆ. ಹೀಗಾಗಿ ಅವರ ಉನ್ನತಿಗಾಗಿ ನಾವು ಶ್ರಮಿಸಬೇಕಾಗಿದೆ. ಈ ನಿಟ್ಟಿನಲ್ಲಿ ಚಾಮರಾಜನಗರ ಜಿಲ್ಲೆಯ ಶೈಕ್ಷಣಿಕ ಸುಧಾರಣೆಗಾಗಿ ನಡೆಯುವ ಈ ಎರಡು ದಿನಗಳ ಕಾರ್ಯಾಗಾರವು ಹೆಚ್ಚು ಪುಷ್ಠಿ ನೀಡಲಿದೆ ಎಂದರು. ಪ್ರಸಕ್ತ ವರ್ಷದ ಎಸ್‌ಎಸ್‌ಎಲ್ಸಿ ಫಲಿತಾಂಶ ವಿಶ್ಲೇಷಣೆ ಮಾಡುವುದರ ಜೊತೆಗೆ ಮುಂದಿನ ವರ್ಷದ ಶೈಕ್ಷಣಿಕ ಕ್ರಿಯಾ ಯೋಜನೆಯನ್ನು ತಯಾರಿಸಿಕೊಳ್ಳುವುದು ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿದೆ. ಇದರಲ್ಲಿ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಸೇರಿದಂತೆ ಜಿಲ್ಲೆಯ 120ಕ್ಕೂ ಹೆಚ್ಚು ಅನುಪಾಲನಾಧಿಕಾರಿಗಳು ಭಾಗವಹಿಸಿದ್ದಾರೆ. ಜಿಲ್ಲಾ ಹಂತದಲ್ಲಿ ಡಯಟ್ನ ಎಲ್ಲಾ ಹಿರಿಯ–ಕಿರಿಯ ಉಪನ್ಯಾಸಕರು, ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಉಪ ಯೋಜನಾ ಸಮನ್ವಯಾಧಿಕಾರಿಗಳು, ಎಲ್ಲಾ ತಾಲ್ಲೂಕುಗಳ ಬಿ.ಇ.ಒ, ಬಿ.ಆರ್.ಸಿ, ಇ.ಸಿ.ಒ, ಬಿ.ಆರ್.ಪಿ ಹಾಗೂ ಸಿ.ಆರ್.ಪಿ. ಯವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದಾರೆ.

# ಚಾ.ನಗರ ವಿವಿಧ ಬಡಾವಣೆಗಳಿಗೆ ಕೆ.ವೆಂಕಟೇಶ್ ಭೇಟಿ



ಚಾಮರಾಜನಗರ, ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕುಡಿಯುವ ನೀರಿನ ಸಂಬಂಧ ಚಾಮರಾಜನಗರ ಪಟ್ಟಣದ ವಿವಿಧ ವಾರ್ಡ್‌ಗಳಿಗೆ ಇಂದು ಭೇಟಿ ನೀಡಿ ಸಾರ್ವಜನಿಕರಿಂದ ಸಮಸ್ಯೆ, ಅಹವಾಲುಗಳನ್ನು ಸ್ವೀಕರಿಸಿದರು.

ಬೆಳಿಗ್ಗೆಯೇ ಚಾಮರಾಜನಗರಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಹಾಗೂ ಅಧಿಕಾರಿಗಳೊಂದಿಗೆ ಪಟ್ಟಣದ 1ನೇ ವಾರ್ಡಿನ ಸೋಮವಾರಪೇಟೆ ಹಾಗೂ 2ನೇ ವಾರ್ಡಿನ ಗಾಳೀಪುರ ಬಡಾವಣೆಗಳಿಗೆ ಭೇಟಿಕೊಟ್ಟು ಕುಡಿಯುವ ನೀರಿನ ಪೂರೈಕೆ ಕುರಿತು ಜನರ ಕುಂದುಕೊರತೆಗಳನ್ನು ಆಲಿಸಿದರು.

ಮೊದಲಿಗೆ ಒಂದನೇ ವಾರ್ಡಿನ ಸೋಮವಾರ ಪೇಟೆ ಬಡಾವಣೆಯ ಹೊರಭಾಗದಲ್ಲಿರುವ ಹಂದಿ ಜೋಗಿ ಕಾಲೋನಿಗೆ ಸಚಿವರು ಭೇಟಿ ನೀಡಿದರು. ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿದೆಯೇ, ಏನಾದರೂ ಸಮಸ್ಯೆ ಇದೆಯೇ ಎಂದು ಸಚಿವರು ಅಲ್ಲಿನ ನಿವಾಸಿಗಳನ್ನು ವಿಚಾರಿಸಿದರು.

ಕುಡಿಯುವ ನೀರು ನಿಯಮಿತವಾಗಿ ಪೂರೈಕೆಯಾಗುತ್ತಿಲ್ಲ. ನಗರಸಭೆಯಿಂದ ಟ್ಯಾಂಕರ್ ಮೂಲಕ ಆಗಾಗ್ಗೆ ನೀರು ಕೊಡುತ್ತಿದ್ದಾರೆ. ಅದು ಸಾಕಾಗುತ್ತಿಲ್ಲ, ಅಲ್ಲದೆ ಖಾಸಗಿಯವರು ನಾವು ವಾಸಿಸುತ್ತಿರುವ ಜಾಗವನ್ನು ತೆರವುಗೊಳಿಸುವಂತೆ ಒತ್ತಡ ಹೇರುತ್ತಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕಾಗಿದೆ, ನಮಗೆ ಮನೆಗಳ ಅವಶ್ಯವಿದೆ ಎಂದು ಮನವರಿಕೆ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಜನರಿಗೆ ಆದ್ಯತೆ ಮೇರೆಗೆ ಕುಡಿಯುವ ನೀರು ಒದಗಿಸಬೇಕು. ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅಗತ್ಯವಿದ್ದರೆ ಟ್ಯಾಂಕರ್ ಮೂಲಕ ಸಮರ್ಪಕವಾಗಿ ನೀರು ಪೂರೈಕೆ ಮಾಡುವಂತೆ ಸ್ಥಳದಲ್ಲಿಯೇ ಇದ್ದ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಕುಡಿಯುವ ನೀರಿನ ಸಮಸ್ಯೆ ಎದುರಾದಲ್ಲಿ ತಕ್ಷಣವೇ ಸ್ಪಂದಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಹಂದಿಜೋಗಿ ಸಮುದಾಯದ ಜನರಿಗೆ ಮನೆಗಳನ್ನು ನೀಡಲು ಉತ್ತುವಳ್ಳಿ ಗ್ರಾಮದಲ್ಲಿ ಜಾಗ ಗುರುತಿಸಲಾಗಿದೆ. ಇಲ್ಲಿನ ನಿವಾಸಿಗಳನ್ನು ಸದ್ಯದಲ್ಲಿಯೇ ನಿಗದಿತ ಜಾಗಕ್ಕೆ ಸ್ಥಳಾಂತರ ಮಾಡಲು ಕ್ರಮ ವಹಿಸಲಾಗುತ್ತದೆ ಎಂದು ಸಚಿವರಿಗೆ ತಿಳಿಸಿದರು. ಬಳಿಕ ಸೋಮವಾರಪೇಟೆ ಹಾಗೂ ಗಾಳೀಪುರ ಬಡಾವಣೆಗೆ ಆಗಮಿಸಿದ ಉಸ್ತುವಾರಿ ಸಚಿವರು ಅಲ್ಲಿಯೂ ಕುಡಿಯುವ ನೀರು ಸಮಸ್ಯೆ ಕುರಿತು ಜನರೊಂದಿಗೆ ಮಾತನಾಡಿ ಅಹವಾಲುಗಳನ್ನು ಆಲಿಸಿದರು. ಕುಡಿಯುವ ನೀರು ಮೂರು ದಿನಗಳಿಗೊಮ್ಮೆ ಸರಬರಾಜು ಆಗುತ್ತಿದೆ. ಹೆಚ್ಚುವರಿ ಬೋರ್‌ವೆಲ್ ಕೊರೆಸಬೇಕು, ಕಸ ಸಂಗ್ರಹಣೆ ವಾಹನ ವಾರಕ್ಕೊಮ್ಮೆಯಾದರೂ ಬರಬೇಕು, ಚರಂಡಿಗಳು ಸ್ವಚ್ಛತೆಯಿಲ್ಲದೆ ದುರ್ವಾಸನೆಯಿಂದ ಕೂಡಿವೆ. ಅದನ್ನು ಸರಿಪಡಿಸುವಂತೆ ನಿವಾಸಿಗಳು ಮನವಿ ಮಾಡಿದರು.

ಜನ-ಜಾನುವಾರುಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಅಧಿಕಾರಿಗಳು ಮುಂದಾಗಬೇಕು. ಕುಡಿಯುವ ನೀರಿನ ಸಮಸ್ಯೆ, ದೂರುಗಳು ಜನರಿಂದ ಬಾರದಂತೆ ಸೂಕ್ತ ಕ್ರಮ ವಹಿಸಬೇಕು. ಬಡಾವಣೆಗಳು ಸ್ವಚ್ಛತೆಗೆ ಗಮನ ಹರಿಸುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿ ಶ್ರೀರೂಪ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾದ ವೆಂಕಟೇಶ್, ನಗರಸಭೆ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್ ಇದ್ದರು.

# ವಿದ್ಯಾರ್ಥಿಗಳು ಏಕಾಗ್ರತೆಯಿಂದ ಓದಿ ಉನ್ನತ ಗುರಿ ಸಾಧಿಸಬೇಕು

**ಉಪವಿಭಾಗಾಧಿಕಾರಿ ಕೆ.ಆರ್. ಶ್ರೀನಿವಾಸ್**



ಕೆ.ಆರ್. ಪೇಟೆ: ವಿದ್ಯಾರ್ಥಿಗಳು ಏಕಾಗ್ರತೆ, ನಿರಂತರ ಕಲಿಕೆ ಮತ್ತು ಆತ್ಮವಿಶ್ವಾಸದಿಂದ ಸವಾಲುಗಳನ್ನು ಎದುರಿಸಿ ಜೀವನದಲ್ಲಿ ಉನ್ನತ ಗುರಿ ತಲುಪಬೇಕು ಎಂದು ಪಾಂಡವಪುರ ಉಪವಿಭಾಗಾಧಿಕಾರಿ ಕೆ.ಆರ್. ಶ್ರೀನಿವಾಸ್ ಕರೆ ನೀಡಿದರು. ಅವರು ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ, ಕ್ರೀಡಾ ಸೇರಿದಂತೆ ವಿವಿಧ ಘಟಕಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ತಮ್ಮ ವೈಯಕ್ತಿಕ ಬದುಕಿನ ಯಶೋಗಾಥೆಯನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡ ಅವರು, "ನಾನೊಬ್ಬ ಸಾಮಾನ್ಯ ರೈತನ ಮಗನಾಗಿದ್ದು, ಬಡತನದ ನಡುವೆಯೂ ಛಲಬಿಡದೆ ಶ್ರಮವಹಿಸಿ ಎರಡನೇ ಪ್ರಯತ್ನದಲ್ಲಿ ಕೆಎಎಸ್ ಪರೀಕ್ಷೆ ತೇರ್ಗಡೆಯಾಗಿ ಇಂದು ಈ ಹಂತಕ್ಕೆ ತಲುಪಿದ್ದೇನೆ. ವಿದ್ಯಾರ್ಥಿಗಳು ಮೊಬೈಲ್ ವ್ಯಾಮೋಹದಿಂದ ಹೊರಬಂದು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು" ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಶಾಸಕ ಹೆಚ್.ಟಿ. ಮಂಜು ಅವರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಸಮಾಜಮುಖಿಯಾಗಿ ಬದುಕಲು ಕರೆ ನೀಡಿದರು. ಇದೇ ವೇಳೆ ಜಿಲ್ಲೆಯಲ್ಲಿ ಚರ್ಚೆಯಲ್ಲಿರುವ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಕುರಿತು ಸ್ಪಷ್ಟನೆ ನೀಡಿದ ಶಾಸಕರು, "ಕೆ.ಆರ್. ಪೇಟೆಯಲ್ಲಿ ಇಂತಹ ಯಾವುದೇ ಕೃತ್ಯ ನಡೆದಿಲ್ಲ. ತಾಲೂಕು ಆಸ್ಪತ್ರೆಯ ಸ್ಕ್ಯಾನಿಂಗ್ ಯಂತ್ರ ಕೆಟ್ಟಿರುವುದರಿಂದ ವೈದ್ಯರು ಖಾಸಗಿ ಆಸ್ಪತ್ರೆಗೆ ಶಿಫಾರಸು ಮಾಡಿದ್ದಾರೆಯೇ ವಿನಃ ಭ್ರೂಣ ಹತ್ಯೆಗೆ ಅಲ್ಲ. ಈ ಕುರಿತು ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದ್ದು, ಹೆಣ್ಣು ಭ್ರೂಣ ಹತ್ಯೆ ನಾಗರಿಕ ಸಮಾಜಕ್ಕೆ ಶಾಪವಾಗಿದೆ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆಯಾಗಲಿ" ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ಅನುರಾಧ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮುಂಬರುವ ಪರೀಕ್ಷೆಗಳಲ್ಲಿ ಕಾಲೇಜು ಶೇ. 100ರಷ್ಟು ಉತ್ತಮ ಫಲಿತಾಂಶ ದಾಖಲಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಸಂಚಾಲಕರಾದ ಸಿ.ಎಸ್. ಕೆಂಡಗಣ್ಣಗೌಡ, ಡಾ. ಹೆಚ್.ಆರ್. ಶ್ಯಾಮ್, ಮಾದೇವಸ್ವಾಮಿ, ಜಿ.ಮಧು, ಶಿವಸ್ವಾಮಿ, ನಫೀಸಾ ನಾಯಕವಾಡಿ ಹಾಗೂ ಡಾ. ಪ್ರತಿಮಾ ಉಪಸ್ಥಿತರಿದ್ದು ವರದಿ ಮಂಡಿಸಿದರು. ವಿದ್ಯಾರ್ಥಿನಿಯರ ಸಾಂಸ್ಕೃತಿಕ ಪ್ರದರ್ಶನಗಳು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದವು.

## ಮಕ್ಕಳ ಮರಳಿಗೆ ಶಾಲೆಗೆ ಸೇರಿಸುವ ಬೆಳಕು ಸಂಸ್ಥೆ

ಮೈಸೂರು: ಬಡತನ ಮೊದಲಾದ ಕಾರಣಗಳಿಂದ ಮಕ್ಕಳು ಶಾಲೆ ಬಿಡುವ ಪ್ರಕರಣಗಳು ಹೆಚ್ಚುತ್ತಿದ್ದು, ವಿವಿಧ ಸಂಘ ಸಂಸ್ಥೆಗಳು ಸರ್ಕಾರದ ಜೊತೆ ಕೈಜೋಡಿಸುವ ಮೂಲಕ ಈ ಮಕ್ಕಳು ಪುನಃ ಶಾಲೆ ಸೇರುವ ಹಾಗೆ ಮಾಡಬೇಕೆಂದು ನಿವೃತ್ತ ಪ್ರಾಚಾರ್ಯ ಪ್ರೊ. ಗಂಗಾರಾಮ ಚಂಡಾಲ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತಮ್ಮ ಅಧ್ಯಕ್ಷತೆಯ ಬೆಳಕು ಸಮಾಜ ಎಂಬ ಸಂಸ್ಥೆ ಈಗಾಗಲೇ ಮಂಡ್ಯ ಭಾಗದಲ್ಲಿ ಕೆಲಸ ಮಾಡುತ್ತ, ಶ್ರೀರಂಗಪಟ್ಟಣ ತಾಲ್ಲೂಕಿನ ಒಡೆಯಾಂಡಹಳ್ಳಿಯಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸುವ ಕೆಲಸ ಮಾಡುತ್ತಿದೆ. ಇದೇ ನಿಟ್ಟಿನಲ್ಲಿ ವ್ಯಾಪ್ತಿ ವಿಸ್ತರಿಸಿ, ಇತರೆಡೆಯೂ ಶಾಲೆ ಬಿಡಿಸಿದ ಪೋಷಕರ ಮನವೊಲಿಸುವ ಕೆಲಸ ನಡೆದಿದೆ. ಈ ನಿಟ್ಟಿನಲ್ಲಿ ಇತರೆ ಸಂಘ ಸಂಸ್ಥೆಗಳೂ ಮುಂದಾಗಬೇಕೆಂದು ಸಲಹೆ ನೀಡಿದರು.

## ಮಳೆಗೆ ಫಸಲು ನೆಲಸಮ

ಗುಂಡ್ಲುಪೇಟೆ: ತಾಲ್ಲೂಕಿನ ವಿವಿಧೆಡೆ ಶುಕ್ರವಾರ ರಾತ್ರಿಸುರಿದ ಬಿರುಗಾಳಿ ಮಳೆಗೆ ಬಾಳೆ ಫಸಲು ನೆಲಸಮವಾಗಿದ್ದು ತೆಂಗಿನ ಗಿಡಗಳು ಮುರಿದುಹೋಗಿರುವ ಘಟನೆ ನಡೆದಿದೆ.

ತಾಲ್ಲೂಕಿನ ಹಾಲಹಳ್ಳಿ ಗ್ರಾಮದ ಸರ್ವೆ ನಂಬರ್ 170 ಮತ್ತು 160/1 ರಲ್ಲಿ ರೈತ ಮನೋಜ್ ಕುಮಾರ್ ಎಂಬುವವರಿಗೆ ಸೇರಿದ ಮೂರು ಸಾವಿರ ಬಾಳೆ ಹಾಗೂ ಮೂವತ್ತಕ್ಕೂ ಹೆಚ್ಚು ನಾಲ್ಕು ವರ್ಷದ ತೆಂಗಿನ ಗಿಡಗಳು ನೆಲಕಚ್ಚಿದ್ದು ರೈತ ಮೋಹನ್ ಕುಮಾರ್ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ತಾಲ್ಲೂಕು ಆಡಳಿತ ಹಾಗೂ ತೋಟಗಾರಿಕೆ ಇಲಾಖೆ ಜಮೀನಿಗೆ ಭೇಟಿನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡಬೇಕು ಸಾಲಮಾಡಿ ಬೆಳೆದ ಬಾಳೆ ಗಿಡಗಳು ತೆಂಗಿನ ಸಸಿ ಹಾನಿಯಾಗಿದ್ದು ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

# ರಾಜ್ಯ ಕಾಂಗ್ರೆಸ್ ನಾಯಕರಿಗೆ ಬುರ್ಖಾದ ಅವಶ್ಯಕತೆ ಇದೆ


**ಮಾಜಿ ಸಂಸದ ಪ್ರತಾಪಸಿಂಹ ವ್ಯಂಗ್ಯ | ಕೈ ನಾಯಕರ ವಿರುದ್ಧ ಕಿಡಿ**

ಮೈಸೂರು: ರಾಜ್ಯದ ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತ ವೈಖರಿ ಹಾಗೂ ಇತ್ತೀಚಿನ ನಿರ್ಧಾರಗಳ ವಿರುದ್ಧ ಮಾಜಿ ಸಂಸದ ಪ್ರತಾಪಸಿಂಹ ಅವರು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮುಸ್ಲಿಂ ಹೆಣ್ಣುಮಕ್ಕಳಿಗೆ ಹಿಜಾಬ್ ಅವಶ್ಯಕತೆ ಇದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಕಳೆದ ಮೂರು ವರ್ಷಗಳಿಂದ ಯಾವುದೇ ಅಭಿವೃದ್ಧಿ ಕೆಲಸ ಮಾಡದ ಕಾಂಗ್ರೆಸ್ ನಾಯಕರಿಗೆ ಜನರಿಗೆ ಮುಖ ತೋರಿಸಲಾಗದೆ ಖಂಡಿತವಾಗಿಯೂ ಬುರ್ಖಾದ ಅವಶ್ಯಕತೆ ಇದೆ ಎಂದು ಅವರು ಮೈಸೂರಿನಲ್ಲಿ ಮಾಧ್ಯಮಗಳ ಮುಂದೆ ತೀಕ್ಷ್ಣವಾಗಿ ವ್ಯಂಗ್ಯವಾಡಿದ್ದಾರೆ.

### ಶಾಲಾ ಸಮವಸ್ತ್ರದ ಮೂಲ ಆಶಯಕ್ಕೆ ಕೊಡಲಿ ಪೆಟ್ಟು

ಶಾಲೆಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವ ಕುರಿತು ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಧೋರಣೆಯನ್ನು ಖಂಡಿಸಿದ ಪ್ರತಾಪಸಿಂಹ, ಸಮಾಜವಾದಿ ಹಿನ್ನೆಲೆಯಿಂದ ಬಂದಿರುವ ಮುಖ್ಯಮಂತ್ರಿಗಳಿಗೆ ಇತಿಹಾಸದ ಕನಿಷ್ಠ ಜ್ಞಾನವೂ ಇಲ್ಲವೇ ಎಂದು ಪ್ರಶ್ನಿಸಿದರು. ಶಾಲೆಗಳಲ್ಲಿ ಮಕ್ಕಳ ನಡುವೆ ಯಾವುದೇ ಭೇದಭಾವ ಬಾರದೆ ಎಲ್ಲರೂ ಒಂದೇ ಎಂಬ ಸಮಾನತೆಯ ಭಾವನೆ ಮೂಡಲಿ ಎಂಬ ಸದುದ್ದೇಶದಿಂದ ಸಮವಸ್ತ್ರ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಆದರೆ ಕಾಂಗ್ರೆಸ್ ಸರ್ಕಾರ ಮತಬ್ಯಾಂಕ್ ರಾಜಕಾರಣಕ್ಕಾಗಿ ಆ ಮೂಲ ಆಶಯಕ್ಕೆ ಕೊಡಲಿ ಪೆಟ್ಟು ನೀಡುತ್ತಿದೆ. ಮುಸಲ್ಮಾನ ಯುವಕರಿಗೆ ಟೋಪಿ ಧರಿಸಲು, ಗಡ್ಡ ಬಿಟ್ಟುಕೊಂಡು ಬರಲು ಪರೋಕ್ಷವಾಗಿ ಅವಕಾಶ ನೀಡುವ ಸರ್ಕಾರ, ಹಿಂದೂಗಳ ಕೇಸರಿ ಶಾಲನ್ನು ಮಾತ್ರ ವಿರೋಧಿಸುತ್ತದೆ. ಇಂತಹ ಚಿಲ್ಲರೆ ರಾಜಕಾರಣದ ಮೂಲಕ ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುವುದನ್ನು ನಿಲ್ಲಿಸದಿದ್ದರೆ, ಮುಂದಿನ ಎರಡೇ ವರ್ಷಗಳಲ್ಲಿ ಜನರೇ ಇವರಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.




### ನೀಟ್ ಅಕ್ರಮ ಮುಚ್ಚಿಡದ ಕೇಂದ್ರ ಸರ್ಕಾರ

ಇದೇ ವೇಳೆ ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿರುವ ನೀಟ್ ಪರೀಕ್ಷೆ ಅಕ್ರಮ ಮತ್ತು ಪರೀಕ್ಷೆ ರದ್ದು ವಿಚಾರವಾಗಿ ಮಾತನಾಡಿದ ಅವರು, ಪ್ರಶ್ನೆ ಪತ್ರಿಕೆ ಸೋರಿಕೆ ಎನ್ನುವುದು ಒಟ್ಟಾರೆ ಶಿಕ್ಷಣ ವ್ಯವಸ್ಥೆಗೆ ಅಂಟಿದ ದೊಡ್ಡ ಪಿಡುಗಾಗಿದೆ. ಇದನ್ನು ತಡೆಯಲು ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದೆ. ಕೇಂದ್ರ ಸರ್ಕಾರವು ಈ ಕರ್ಮಕಾಂಡವನ್ನು ಎಲ್ಲೂ ಮುಚ್ಚಿಡುವ ಪ್ರಯತ್ನ ಮಾಡಿಲ್ಲ, ಬದಲಿಗೆ ಹಗರಣವನ್ನು ತಾನೇ ಬಟ್ಟಬಯಲು ಮಾಡಿ ವ್ಯವಸ್ಥೆಯನ್ನು ಸರಿಪಡಿಸಲು ಮುಂದಾಗಿದೆ. ರಾಜ್ಯದ ಕೆಪಿಎಸ್ಸಿ ಹಗರಣಗಳಂತೆ ಅಕ್ರಮ ನಡೆದರೂ ನೇಮಕಾತಿ ಪತ್ರ ನೀಡುವ ಬೇಜವಾಬ್ದಾರಿತನವನ್ನು ಕೇಂದ್ರ ಪ್ರದರ್ಶಿಸಿಲ್ಲ. ಬದಲಿಗೆ ಪ್ರತಿಭಾವಂತ ಮತ್ತು ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ಯಾವುದೇ ಅನ್ಯಾಯವಾಗಬಾರದು ಎಂಬ ಧೀಮಂತ ದೃಷ್ಟಿಯಿಂದ ಪರೀಕ್ಷೆಯನ್ನು ರದ್ದುಗೊಳಿಸುವ ದಿಟ್ಟ ನಿರ್ಧಾರ ಮಾಡಿದೆ ಎಂದು ಕೇಂದ್ರದ ಕ್ರಮವನ್ನು ಸಮರ್ಥಿಸಿಕೊಂಡರು.

### ಮುಖ್ಯಮಂತ್ರಿಗಳಿಗೆ ಅರ್ಥಶಾಸ್ತ್ರದ ಜ್ಞಾನವಿಲ್ಲ

ದೇಶದಲ್ಲಿ ಇಂಧನ ಉಳಿತಾಯದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ ಸಲಹೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಮಾಜಿ ಸಂಸದರು, ಸಿದ್ದರಾಮಯ್ಯ ಅವರು ವಿಶ್ವದ ಅತಿ ದೊಡ್ಡ ಅರ್ಥಶಾಸ್ತ್ರಜ್ಞರಂತೆ ಆಡುತ್ತಿದ್ದಾರೆ. ಆದರೆ ವಾಸ್ತವದಲ್ಲಿ ರಾಜ್ಯದಲ್ಲಿ ಹುಟ್ಟುವ ಪ್ರತಿ ಮಗುವಿನ ಮೇಲೆಯೂ ಸಾಲದ ಹೊರೆ ಹೊರಿಸಿರುವ ಅವರಿಗೆ ಅರ್ಥಶಾಸ್ತ್ರವಾಗಲಿ, ಗಣಿತವಾಗಲಿ ಸರಿಯಾಗಿ ಅರ್ಥವಾದಂತಿಲ್ಲ. ಜಾಗತಿಕ ಯುದ್ಧಗಳ ಹಿನ್ನೆಲೆಯಲ್ಲಿ ದೇಶದ ಹಿತದೃಷ್ಟಿಯಿಂದ ಪ್ರಧಾನಿಗಳು ಇಂಧನ ಉಳಿತಾಯದ ಅತ್ಯುತ್ತಮ ಸಲಹೆ ನೀಡಿದ್ದಾರೆ. ಜ್ಞಾನವಿರುವವರು ಇದನ್ನು ಸ್ವಾಗತಿಸಿದ್ದಾರೆ. ಆದರೆ ಸಿದ್ದರಾಮಯ್ಯ ಅವರು ಮೋದಿಯವರಿಗೆ ಅರ್ಥವ್ಯವಸ್ಥೆಯ ಪಾಠ ಮಾಡಲು ಹೋಗುವ ಬದಲು ತಮ್ಮ ಆಡಳಿತದ ಕಡೆ ಗಮನ ಹರಿಸಲಿ ಎಂದು ಲೇವಡಿ ಮಾಡಿದರು.

# ವಿಶ್ವಕರ್ಮ ಸಮುದಾಯದ ಮಕ್ಕಳಿಗೆ ಪುರಸ್ಕಾರಕ್ಕೆ ಅರ್ಜಿ



ಮೈಸೂರು: ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಶೇ. 75 ಕ್ಕಿಂತ ಹೆಚ್ಚು ಅಂಕ ಪಡೆದ ವಿಶ್ವಕರ್ಮ ಸಮುದಾಯದ ಮಕ್ಕಳನ್ನು ವಿಶ್ವಕರ್ಮ ಜಾಗೃತಿ ವೇದಿಕೆ ವತಿಯಿಂದ ಸನ್ಮಾನಿಸಲಾಗುತ್ತಿದೆ. ಹೀಗಾಗಿ ಅರ್ಹರು ಅಜಿ ಸಲ್ಲಿಸಬೇಕೆಂದು ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸರ್ದಾರ್ ವಲ್ಲಭಬಾಯಿ ಪಟೇಲ್ ನಗರ, ಪೊಲೀಸ್ ಬಡಾವಣೆಯ ಎರಡನೇ ಹಂತ 80 ಅಡಿ ರಸ್ತೆ, ನಂ. 512 ಸಂಖ್ಯೆ ವೇದಿಕೆ ವಿಳಾಸಕ್ಕೆ ಅಂಚೆ ಮೂಲಕವೇ ಜೂ. 15 ರೊಳಗೆ ತಲುಪುವಂತೆ ಸಮುದಾಯದವರೆಂಬ ಪ್ರಮಾಣಪತ್ರ, ಪೋಷಕರು ಹಾಗೂ ವಿದ್ಯಾರ್ಥಿಯ ಆಧಾರ್, ಮೂಲ ಅಂಕಪಟ್ಟಿ, ಅದಿರದಿದ್ದಲ್ಲಿ ದೃಢೀಕೃತ ಪ್ರತಿ, ಪಾಸ್‌ಪೋರ್ಟ್ ಸೈಜ್‌ನ ಒಂದು ಫೋಟೋ, ಸಂಪರ್ಕ ದೂರವಾಣಿ ಸಂಖ್ಯೆ ಕಳುಹಿಸಬೇಕೆಂದರು. ಇನ್ನಿತರ ಪದಾಧಿಕಾರಿಗಳಾದ ಶ್ರೀಲಕ್ಷ್ಮಿ, ಟಿ.ಎ.ಸಿದ್ದರಾಜು, ಸಿದ್ದೇಶ್, ಮಾವಳ್ಳಿ ಲೋಕೇಶ್, ರಾಜು ಇದ್ದರು.

## ಇಂದು ನೇರ ಸಂದರ್ಶನ

ಗುಂಡ್ಲುಪೇಟೆ ಪಟ್ಟಣದ ಎಜಿಕೆ ಸಭಾಂಗಣದಲ್ಲಿ ಇಂದು ಅಂತರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆ ವತಿಯಿಂದ ಉದ್ಯೋಗ ನೇಮಕಾತಿ ಮತ್ತು ನೇರ ಸಂದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು

ನಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಸಂಸ್ಥೆಯ ಮುಖ್ಯಸ್ಥ ಮಧು ಯುವಕರು ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವ ಮೂಲಕ ಗುಂಡ್ಲುಪೇಟೆಯನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದರು ಅಂತರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆಯ ಅಧ್ಯಕ್ಷರಾದ ಡಾ ಬಿ ಎನ್ ಅಜಯ್ ಕುಮಾರ್ ರವರು ಸಂಸ್ಥೆಯ ಸಿಬ್ಬಂದಿಗಳಿಗೆ ಚೆಕ್ ವಿತರಣೆ ಮಾಡಿ ವಿವಿಧ ಕ್ಷೇತ್ರಗಳಿಂದ ಬಂದಿದ್ದ ಉದ್ಯೋಗ ಆಕಾಂಕ್ಷಿಗಳಿಗೆ ಅವಕಾಶಗಳನ್ನು ಕುರಿತು ಮಾಹಿತಿ ನೀಡಿ ಸ್ಥಳೀಯ ಯುವ ಜನತೆಗೆ ಹೊಸ ಆಶಾ ಭಾವನೆಯನ್ನು ಹಾಗೂ ಉದ್ಯೋಗದ ದಿಕ್ಕಿನತ್ತ ಹೊಸ ಹೆಜ್ಜೆಯನ್ನು ನೀಡಲಾಗಿದೆ ಎಂದರು

# ಇಂದಿನಿಂದ ಅಡ್ವೆಂಚರ್ ಬೈಕ್ ಯಾತ್ರೆ



ಮೈಸೂರು: ತಾವು ಕೈಗೊಳ್ಳಲಿರುವ ಮೈಸೂರು ಟು ಲಂಡನ್ ಕೆಟಿಎಂ ಅಡ್ವೆಂಚರ್ 390 ಬೈಕ್ ಯಾತ್ರೆಗೆ ಮೇ 17 ರ ಬೆಳಗ್ಗೆ 7.30ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ ಎಂದು ಉದ್ಯಮಿ ನಾಗಾರ್ಜುನ ಅನಂತ ಭಗವಾನ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಫೆಲೋಷಿಪ್ ಬಿಯಾಂಡ್ ಬಾರ್ಡರ್ ಶೀರ್ಷಿಕೆ ಅಡಿಯಲ್ಲಿ ನಗರದಲ್ಲಿ ಆರಂಭವಾಗುವ ಈ ಯಾತ್ರೆ 60 ದಿನಗಳ ಅವಧಿಯದ್ದಾಗಿದ್ದು, ಸುಮಾರು 20 ಸಾವಿರ ಕಿ.ಮೀ ಕ್ರಮಿಸಲಿದ್ದೇನೆ. ಇದು ಜನರನ್ನು, ಸಂಸ್ಕೃತಿಗಳನ್ನು, ಸ್ನೇಹವನ್ನು ಬೆಸೆಯುವ ಉದ್ದೇಶ ಹೊಂದಿದೆ. ನೇಪಾಳ, ಟಿಬೆಟ್‌ಗಳ ಮೂಲಕ, ಬಳಿಕ, ಚೀನಾ, ರಷ್ಯಾ ನಂತರ ಇನ್ನಿತರ ದೇಶಗಳನ್ನು ಹಾದು ಹೋಗಿ ಕೊನೆಗೆ ಲಂಡನ್ ತಲುಪುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಒಂದು ವರ್ಷ ಸಿದ್ಧತೆ ಮಾಡಿಕೊಂಡಿದ್ದೇನೆ. ಈ ಮೂಲಕ ದೇಶ ವಿದೇಶಗಳ ಬೈಕ್ ಪ್ರೇಮಿಗಳು,, ಸಾಹಸ ಯಾತ್ರಿಕರು ಹಾಗೂ ಪ್ರವಾಸಕ್ತರ ಗಮನ ಸೆಳೆಯುವ ಉದ್ದೇಶವೂ ಇದೆ ಎಂದರು. ಶರತ್ ರಾಮಚಂದ್ರ, ಸಂತೋಷ್ ಬಾಬು, ಕಾಂತರಾಜ್, ಅಶ್ವಿನ್ ಕಶ್ಯಪ್ ಇದ್ದರು.

# ಶ್ರೀ ಬಸವ ಭೂಷಣ ಪ್ರಶಸ್ತಿ ಪ್ರಧಾನ



ಮೈಸೂರು: ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಬಸವ ಜಯಂತಿ ಗುರುವಂದನಾ ಕಾರ್ಯಕ್ರಮದ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಶ್ರೀ ಬಸವ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಲ್ಲರಾಜೇಅರಸ್(ಸಾಹಿತ್ಯ), ಎಲ್.ಶಿವಲಿಂಗಪ್ಪ (ಕಲೆ), ಡಾ.ಎಸ್.ಪಿ.ಯೋಗಣ್ಣ(ವೈದ್ಯಕೀಯ), ಎಚ್.ವಿ.ಮುರುಳೀಧರ(ಶಿಕ್ಷಣ), ಡಾ.ಆರ್.ಶ್ರೀಷಾ ಭಟ್(ಸಮಾಜಸೇವೆ), ರಾಜುಕಾರ್ಯ(ಮಾದ್ಯಮ), ಕೆ.ಬಿ.ಶಂಕರೇಗೌಡ(ಉದ್ಯಮ), ಬಿ.ಓಂಕಾರ್ ಪ್ರಸಾದ್(ಉದ್ಯಮ) ಪ್ರಶಸ್ತಿ ಸ್ವೀಕರಿಸಿದರು.

ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಕುದೇರು ಮಠದಲ್ಲಿ ಕಿರಿಯ ಶ್ರೀ ಇಮ್ಮಡಿ ಗುರುಲಿಂಗಸ್ವಾಮೀಜಿ ಸಾನಿದ್ಯದೊಂದಿಗೆ ಸಂಧ್ಯಾ ಸುರಕ್ಷ ಟ್ರಸ್ಟ್ ಅಧ್ಯಕ್ಷ ಡಾ.ಬಿ.ಆರ್.ನಟರಾಜ ಜೋಯ್ಸ್, ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣವಹಿಸಿದ್ದರು. ವಿದ್ವಾಂಸರಾದ ಡಾ. ಕೆ.ಲೀಲಾಪ್ರಕಾಶ್, ರಾಜ್ಯ ಸರ್ಕಾರಿ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಸಮರಾವ್, ಲಯನ್ ಟಿ.ಸುರೇಶ್, ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

## ಪತ್ರಿಕಾ ಪ್ರವಾಸ ವಾಹನಕ್ಕೆ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಚಾಲನೆ

ಚಾಮರಾಜನಗರ ಜಿಲ್ಲೆಗೆ ನೀಡಲಾಗಿರುವ ನೂತನ ಪತ್ರಿಕಾ ಪ್ರವಾಸ ವಾಹನಕ್ಕೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಅವರು ನಗರದ ಪ್ರವಾಸಿ ಮಂದಿರ ಆವರಣದಲ್ಲಿಂದು ಚಾಲನೆ ನೀಡಿದರು.

ಎಂ.ಎಸ್.ಐ.ಎಲ್.ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷರಾದ ಪಿ.ಮರಿಸ್ವಾಮಿ,ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಕಧಿಕಾರಿ ಮೋನಾ ರೋತ್,ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ,ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್ ಹಾಜರಿದ್ದರು.




**ಸಿಇಓ ಯತೀಶ್.ಆರ್ ಸೂಚನೆ**

# ಕುಡಿಯುವ ನೀರು ಸರಬರಾಜಿಗೆ ಕ್ರಮ ವಹಿಸುವಂತೆ ಸೂಚನೆ

ಬೆಂಗಳೂರು: ಪ್ರತಿ ಮನೆಗೂ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರು ಪೂರೈಸುವ ಜಲ ಜೀವನ ಮಿಷನ್ ಯೋಜನೆ ಅನುಷ್ಠಾನ ಕಾರ್ಯವನ್ನು ಜಿಲ್ಲೆಯಲ್ಲಿ ತ್ವರಿತವಾಗಿ ಪೂರ್ಣಗೊಳಿಸಬೇಕು ಹಾಗೂ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ಬೆಂಗಳೂರ ನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳಾದ ಯತೀಶ್.ಆರ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಕರೆಯಲಾಗಿದ್ದ ಜಲ ಜೀವನ ಮಿಷನ್ ಯೋಜನೆ ಕಾಮಗಾರಿಗಳ ಸಮಗ್ರ ಅನುಷ್ಠಾನಕ್ಕಾಗಿ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಕೈಗೊಂಡಿರುವ ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಯು ಗುಣಮಟ್ಟದಿಂದ ಕೂಡಿರಬೇಕು, ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿಗಳು ನಡೆಯುತ್ತಿರುವ ಸ್ಥಳಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದರು .



ಜಿಲ್ಲೆಯಲ್ಲಿರುವ ಎಲ್ಲಾ ಕುಡಿಯುವ ನೀರಿನ ಮೂಲಗಳು, ಕೊಳವೆಬಾವಿಗಳು, ಪಂಪ್ ಸೆಟ್‌ಗಳು ಹಾಗೂ ಓವರ್ ಹೆಡ್ ಟ್ಯಾಂಕ್ ಗಳನ್ನು ನಿಯಮಿತವಾಗಿ ಪರಿಶೀಲಿಸಿ, ಯಾವುದೇ ಸಮಸ್ಯೆಗಳು ಉಂಟಾಗದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ತಿಳಿಸಲಾಗಿದ್ದು, ಅಗತ್ಯವಿರುವ ಕಡೆಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಸೇರಿದಂತೆ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಕೊಳವೆಬಾವಿಗಳಲ್ಲಿ ಇಳುವರಿ ಕಡಿಮೆಯಾದ ತಕ್ಷಣವೇ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧಿಕಾರಿಗಳಿಗೆ ವಿಶೇಷ ಸೂಚನೆಯನ್ನು ನೀಡಲಾಗಿದೆ. ಅದರಂತೆ ಕೊಳವೆಬಾವಿಗಳನ್ನು ಮರು ಆಳಗೊಳಿಸುವುದು ಹಾಗೂ ಹೆಚ್ಚುವರಿ ಪೈಪ್‌ಗಳನ್ನು ಅಳವಡಿಸಬೇಕು ಎಂದರು. ಅಗತ್ಯವಿರುವ ಕಡೆಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಹಾಗೂ ಪಂಪ್ ಮತ್ತು ಮೋಟಾರ್‌ಗಳು ಕೆಟ್ಟು ಹೋದಲ್ಲಿ ತಕ್ಷಣವೇ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಇದಲ್ಲದೆ, ಪ್ರತೀ ಸೋಮವಾರ ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿ ಕುಡಿಯುವ ನೀರು ಸರಬರಾಜಿನ ಸ್ಥಿತಿಗತಿ ಹಾಗೂ ಸಮಸ್ಯೆಗಳ ಕುರಿತು ಸಮಗ್ರವಾಗಿ ಪರಿಶೀಲನೆ ಮತ್ತು ಚರ್ಚೆ ನಡೆಸಲಾಗುತ್ತಿದೆ. ಅದೇ ರೀತಿ ತಾಲ್ಲೂಕು ಹಂತದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಮನ್ವಯ ಸಭೆಗಳನ್ನು ನಡೆಸಿ, ಕುಡಿಯುವ ನೀರು ಸರಬರಾಜು ಸಮಸ್ಯೆಗಳ ಕುರಿತು ಕ್ರಮ ಕೈಗೊಂಡ ಬಗ್ಗೆ ನಡವಳಿ ಸಿದ್ದಪಡಿಸಿ ಜಿಲ್ಲಾ ಪಂಚಾಯತ್ ಗೆ ನಿಯಮಿತವಾಗಿ ಸಲ್ಲಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಮಂಜುನಾಥ ಎಚ್. ಎನ್, ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದರು.

# ಡಿಕೆಶಿ ಹುಟ್ಟುಹಬ್ಬ: ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ವಿಶೇಷ ಪೂಜೆ

ರಾಮನಗರ: ಕನಕಪುರ ಶಾಸಕ, ಕೆಪಿಸಿಸಿ ಅಧ್ಯಕ್ಷ, ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹುಟ್ಟು ಹಬ್ಬವನ್ನು ಕಾಂಗ್ರೆಸ್ ಮುಖಂಡರನ್ನು ನಗರದ ಶಕ್ತಿದೇವತೆ ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸುವುದರ ಮೂಲಕ ಆಚರಿಸಿದರು. ಇದೇ ವೇಳೆ ಡಿಕೆಶಿಗೆ ಮುಖ್ಯಮಂತ್ರಿ ಸ್ಥಾನ ಸಿಗಲಿ ಎಂದು ಪ್ರಾರ್ಥಿಸಿದರು.

ಡಿಕೆಶಿ ಅವರ ಹುಟ್ಟುಹಬ್ಬದ ಅಂಗವಾಗಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ಅಭಿಷೇಕ, ಅರ್ಚನೆ ಮುಂತಾದ ಸೇವೆಗಳನ್ನು ನೆರವೇರಿಸಿ ತಮ್ಮ ನಾಯಕ ಶ್ರೇಯಸ್ಸಿಗೆ ಪ್ರಾರ್ಥಿಸಿ, ಸಿಹಿ ವಿತರಿಸಿ ಸಂತಸ ವ್ಯಕ್ತಪಡಿಸಿದರು.



### ದಕ್ಷ ನಾಯಕ ಡಿಕೆಶಿ – ಕೆ.ರಾಜು

ಈ ವೇಳೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು ಮಾತನಾಡಿ, ರಾಜ್ಯ ಮತ್ತು ದೇಶದ ಇತರೆಡೆ ಕಾಂಗ್ರೆಸ್ ಪಕ್ಷಕ್ಕೆ ಸಂಕಷ್ಟ ಎದುರಾದಾಗೆಲ್ಲ, ಡಿ.ಕೆ.ಶಿವಕುಮಾರ್ ಪಕ್ಷಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಅವರೊಬ್ಬ ದಕ್ಷ ನಾಯಕ. ಪಕ್ಷದ ಸಂಘಟನೆಗೆ ಹಗಲಿರುಳು ಶ್ರಮಿಸುತ್ತಾ, ಎಲ್ಲರ ಸಹಕಾರದಲ್ಲಿ ರಾಜ್ಯಾದ್ಯಂತ ಸದೃಡವಾಗಿ ಪಕ್ಷವನ್ನು ಕಟ್ಟುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ. ಹಲವು ವರ್ಷಗಳ ಸೇವೆಗೆ ರಾಜ್ಯದ ಮುಖ್ಯಮಂತ್ರಿ ಸ್ಥಾನ ನೀಡಿ ಅವರಿಗೆ ಗೌರವ ಕೊಡುವ ಜವಬ್ದಾರಿ ಸಹ ಪಕ್ಷದ ವರಿಷ್ಠರ ಮೇಲಿದೆ ಎಂದರು. ಡಿಕೆಶಿ ಸಿಎಂ ಸ್ಥಾನ ಸಿಗಬೇಕೆಂಬುದು, ನಮ್ಮ ಮತ್ತು ಪಕ್ಷದ ಕಾರ್ಯಕರ್ತರ ಆಶಯವಾಗಿದೆ. ಅವರಿಗೆ ಮತ್ತಷ್ಟು ಶಕ್ತಿಯನ್ನು ಚಾಮುಂಡೇಶ್ವರಿ ತುಂಬಲಿ ಎಂದು ಪ್ರಾರ್ಥಿಸಿರುವುದಾಗಿ ಹೇಳಿದರು.

## ಡಿಕೆಶಿಗೆ ಮುಖ್ಯಮಂತ್ರಿ ಸ್ಥಾನ ಸಿಗಲಿ: ಎ.ಬಿ.ಚೇತನ್ ಕುಮಾರ್

ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ಪ್ರಾರ್ಥನೆ ಸಲ್ಲಿಸಿದ ಬಳಿಕ ಮಾತನಾಡಿದ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಡಿ.ಕೆ.ಶಿವಕುಮಾರ್ ಈ ಜಿಲ್ಲೆಯ ಮಗ, ಅವರ ಹುಟ್ಟು ಹಬ್ಬದ ಅಂಗವಾಗಿ ತಾಯಿ ಚಾಮುಂಡೇಶ್ವರಿ ದೇವಿಗೆ ಅಭಿಷೇಕ, ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದ್ದೇವೆ.

ಕಳೆದ 40 ವರ್ಷಗಳಿಂದ ಸತತವಾಗಿ ಡಿ.ಕೆ.ಶಿವಕುಮಾರ್ ಅವರು ಶಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿವಿಧ ಖಾತೆಗಳ ಸಚಿವರಾಗಿ, ಕೆಪಿಸಿಸಿ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಸಂಘಟನೆಯ ಜೊತೆಗೆ ಉಪಮುಖ್ಯಮಂತ್ರಿಗಳಾಗಿ ಮಾದರಿಯಾಗಬಲ್ಲ ಜನಪರ ಆಡಳಿತ ನೀಡುತ್ತಿದ್ದಾರೆ. ಜನರ ಮನಸ್ಸಿನಲ್ಲಿ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಅಭಿಮಾನವಿದೆ. ಅವರ ಶ್ರಮಕ್ಕೆ, ಸಂಘಟನೆಗೆ ತಕ್ಕದಾಗಿ ರಾಜ್ಯದ ಮುಖ್ಯಮಂತ್ರಿ ಸ್ಥಾನ ಸಿಗಬೇಕು. ಇದು ಸಾಧ್ಯವಾಗುವಂತೆ ತಮ್ಮ ನಾಯಕನ್ನು ಹರಸುವಮತೆ ಅವರ ಹುಟ್ಟು ಹಬ್ಬದ ದಿನ ಚಾಮುಂಡೇಶ್ವರಿ ದೇವಿಯಲ್ಲಿ ಪ್ರಾರ್ಥಿಸಿರುವುದಾಗಿ ತಿಳಿಸಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಹೆಚ್.ರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿಎನ್ ಆರ್ ವೆಂಕಟೇಶ್, ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಗುರುಪ್ರಸಾದ್, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಸದಸ್ಯರಾದ ಬೈರೇಗೌಡ, ನಾಗಮ್ಮ, ಯುವ ಕಾಂಗ್ರೆಸ್ ಅಧ್ಯಕ್ಷ ಭೂಷಣ್, ಮುಖಂಡರಾದ ಬಾಬು, ಜಯಣ್ಣ, ಪಾರ್ಥಣ್ಣ, ಪುಟ್ಟರಾಜು, ರೈಡ್ ನಾಗರಾಜು, ಅನಿತಾಅರವಿಂದ್, ಪುಟ್ಟಣ್ಣ, ನರಸಿಂಹಯ್ಯ, ನವೀನ್, ಚೇತನ್, ಪ್ರಾಣೇಶ್, ರಘು, ದೇವರಾಜು, ಚಿಕ್ಕೇಗೌಡ, ಪ್ರಸನ್ನ, ಶಿವಲಿಂಗಯ್ಯ, ವಸಂತ, ಹೇಮಂತ್, ಶೋಭಾ ಸೇರಿದಂತೆ ನೂರಾರು ಮುಖಂಡರುಗಳು ಪೂಜೆಯಲ್ಲಿ ಭಾಗವಹಿಸಿದ್ದರು.

## ವಿಶ್ವಕರ್ಮ ಸಮುದಾಯದ ಮಕ್ಕಳಿಗೆ ಪುರಸ್ಕಾರಕ್ಕೆ ಅರ್ಜಿ



ಮೈಸೂರು: ಕಳೆದ ಸಾಲಿನ ಎಸ್ಎಸ್ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಶೇ. 75 ಕ್ಕಿಂತ ಹೆಚ್ಚು ಅಂಕ ಪಡೆದ ವಿಶ್ವಕರ್ಮ ಸಮುದಾಯದ ಮಕ್ಕಳನ್ನು ವಿಶ್ವಕರ್ಮ ಜಾಗೃತಿ ವೇದಿಕೆ ವತಿಯಿಂದ ಸನ್ಮಾನಿಸಲಾಗುತ್ತಿದೆ. ಹೀಗಾಗಿ ಅರ್ಹರು ಅಜಿ ಸಲ್ಲಿಸಬೇಕೆಂದು ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸರ್ದಾರ್ ವಲ್ಲಭಬಾಯಿ ಪಟೇಲ್ ನಗರ, ಪೊಲೀಸ್ ಬಡಾವಣೆಯ ಎರಡನೇ ಹಂತ 80 ಅಡಿ ರಸ್ತೆ, ನಂ. 512 ಸಂಖ್ಯೆ ವೇದಿಕೆ ವಿಳಾಸಕ್ಕೆ ಅಂಚೆ ಮೂಲಕವೇ ಜೂ. 15 ರೊಳಗೆ ತಲುಪುವಂತೆ ಸಮುದಾಯದವರೆಂಬ ಪ್ರಮಾಣಪತ್ರ, ಪೋಷಕರು ಹಾಗೂ ವಿದ್ಯಾರ್ಥಿಯ ಆಧಾರ್, ಮೂಲ ಅಂಕಪಟ್ಟಿ, ಅದಿರದಿದ್ದಲ್ಲಿ ದೃಢೀಕೃತ ಪ್ರತಿ, ಪಾಸ್‌ಪೋರ್ಟ್ ಸೈಜ್‌ನ ಒಂದು ಫೋಟೋ, ಸಂಪರ್ಕ ದೂರವಾಣಿ ಸಂಖ್ಯೆ ಕಳುಹಿಸಬೇಕೆಂದರು. ಇನ್ನಿತರ ಪದಾಧಿಕಾರಿಗಳಾದ ಶ್ರೀಲಕ್ಷ್ಮಿ, ಟಿ.ಎ.ಸಿದ್ದರಾಜು, ಸಿದ್ದೇಶ್, ಮಾವಳ್ಳಿ ಲೋಕೇಶ್, ರಾಜು ಇದ್ದರು.

## ಎನ್‌ಸಿಸಿ ಸಂಯುಕ್ತ ವಾರ್ಷಿಕ ತರಬೇತಿ ಶಿಬಿರ ಸಮಾರೋಪ




ಮೈಸೂರು: 13 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಗ್ರೂಪ್ ಮುಖ್ಯ ಕಚೇರಿ ಎನ್‌ಸಿಸಿ ಸಂಯುಕ್ತ ವಾರ್ಷಿಕ ತರಬೇತಿ ಶಿಬಿರ (ಸಿಎಟಿಸಿ) ದೊಡ್ಡಕಾನ್ಯದ ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ 2026ರ ಮೇ 6 ರಿಂದ 15ರವರೆಗೆ ಶಿಬಿರಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಸಂಜೀವ ಯಮನಪ್ಪ ಕೊಡತೆ ಮತ್ತು ಉಪ ಶಿಬಿರಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಅರುಣ್ ಪ್ರಕಾಶ್ ಮೌರ್ಯ ನೇತೃತ್ವದಲ್ಲಿ ನಡೆಯಿತು.

ಮೇ6ರಂದು ಆರಂಭವಾದ ಶಿಬಿರವನ್ನು ದೊಡ್ಡಕಾನ್ಯದ ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯ ಪ್ರಾಂಶುಪಾಲ ಪಿ.ಮಧು ಕುಮಾರ್ ಉದ್ಘಾಟಿಸಿದರು. ಎಸ್‌ಡಿ, ಎಸ್‌ಡಬ್ಲ್ಯೂ, ಜೆಡಿ, ಜೆಡಬ್ಲ್ಯೂ, ಐಡಿಎಸ್‌ಎಸ್‌ಸಿ ಮತ್ತು ನೌಕಾ ಘಟಕದ ಕೆಡೆಟ್‌ಗಳು ಸೇರಿದಂತೆ ಒಟ್ಟು 635 ಕೆಡೆಟ್‌ಗಳು, ಪಿಐ ಸಿಬ್ಬಂದಿ ಮತ್ತು ಜಿಸಿಐ ಜೊತೆಗೆ ಶಿಬಿರದಲ್ಲಿ ಭಾಗವಹಿಸಿದರು. ವಿವಿಧ ಶಾಲಾ–ಕಾಲೇಜುಗಳ ಎಎನ್‌ಓಗಳಾದ ಮಲ್ಲೇಶ, ಸುರೇಶ್ ಕುಮಾರ್, ರವಿಕುಮಾರ್, ವೆಂಕಟೇಶ್, ಮಮತಾ ಪ್ರಸಾದ್, ಸಂತೋಷ್ ಮತ್ತು ಸುಮೆರಾ ಬಾನು ಅವರು ಶಿಬಿರದ ತರಬೇತಿ ಮತ್ತು ಆಡಳಿತದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಗ್ರೂಪ್ ಕಮಾಂಡರ್ ಕರ್ನಲ್ ರೋಹಿತ್ ಠಾಕೂರ್ 2026ರ ಮೇ 11 ರಂದು ಶಿಬಿರ ಸ್ಥಳಕ್ಕೆ ಭೇಟಿ ನೀಡಿ ಕೆಡೆಟ್‌ಗಳ ಉತ್ಸಾಹ ಮತ್ತು ಉನ್ನತ ಮಟ್ಟದ ತರಬೇತಿಯನ್ನು ಶ್ಲಾಘಿಸಿದರು. ಶಿಬಿರದಲ್ಲಿ ಒದಗಿಸಲಾದ ಉತ್ತಮ ಗುಣಮಟ್ಟದ ಆಹಾರ ಮತ್ತು ನೈರ್ಮಲ್ಯವನ್ನು ಅವರು ಮೆಚ್ಚಿದರು. ಅವರು ಕೆಡೆಟ್‌ಗಳನ್ನುದ್ದೇಶಿಸಿ ಮಾತನಾಡಿ, ಪ್ರಶ್ನೋತ್ತರ ಅವಧಿ ನಡೆಸಿ ಯುವ ಮನಸ್ಸುಗಳಲ್ಲಿನ ಸಂಶಯಗಳನ್ನು ನಿವಾರಿಸಿದರು. ಎ, ಬಿ ಮತ್ತು ಸಿ ಪ್ರಮಾಣಪತ್ರ ಪಠ್ಯಕ್ರಮದ ಭಾಗವಾಗಿ ಡ್ರಿಲ್, ಶಸ್ತ್ರಾಸ್ತ್ರ ನಿರ್ವಹಣೆ, ಫೈರಿಂಗ್, ಫೀಲ್ಡ್ ಕ್ರಾಫ್ಟ್ ಮತ್ತು ಬ್ಯಾಟಲ್ ಕ್ರಾಫ್ಟ್, ನಕ್ಷೆ ಓದುವಿಕೆ, ಟೆಂಟ್ ಹಾಕುವಿಕೆ ಮತ್ತು ಇತರೆ ಮಿಲಿಟರಿ ವಿಷಯಗಳಲ್ಲಿ ತರಬೇತಿ ನೀಡಲಾಯಿತು. ಸಮಾರಂಭದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಗಿಡಕ್ಕೆ ನೀರು ಹಾಕುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಿದರು. ಸಹಾಯಕ ಆಯುಕ್ತ ಮತ್ತು ಉಪ ವಿಭಾಗಾಧಿಕಾರಿ ಅಶಪ್ಪ, ಆಯುರ್ವೇದಿಕ್ ವೈದ್ಯರಾದ ಡಾ.ಗೀತಾ ಸೈದಾಪುರ ಇತರರು ಇದ್ದರು.

# ಗಾಳಿ–ಮಳೆಯ ರೌದ್ರಾವತಾರ

## ಎಚ್.ಡಿ.ಕೋಟೆ ತಾಲೂಕಿನಲ್ಲಿ ತಾಯಿ–ಮಗುವಿಗೆ ಗಾಯ, ವ್ಯಾಪಕ ಆಸ್ತಿಪಾಸ್ತಿ ನಷ್ಟ

(ಶಿವಕುಮಾರ ತುಂಬಸೋಗೆ)


ಎಚ್.ಡಿ.ಕೋಟೆ: ತಾಲೂಕಿನಲ್ಲಿ ಶುಕ್ರವಾರ ಮಧ್ಯರಾತ್ರಿ ಸುರಿದ ಭಾರಿ ಗಾಳಿ ಮಳೆಗೆ ವ್ಯಾಪಕ ಅವಘಡಗಳು ಸಂಭವಿಸಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ರಾತ್ರಿ ಸುಮಾರು 1 ಗಂಟೆಯ ವೇಳೆಗೆ ಆರ್ಭಟಿಸಿದ ಬಿರು ಗಾಳಿಗೆ ಹಲವು ಮನೆಗಳ ಮೇಲ್ಛಾವಣಿಗಳು ಹಾರಿ ಹೋಗಿದ್ದರೆ, ನೂರಾರು ಎಕರೆ ತೋಟಗಾರಿಕಾ ಬೆಳೆಗಳು ನೆಲಕಚ್ಚಿ ರೈತರಿಗೆ ಭಾರಿ ನಷ್ಟ ಉಂಟಾಗಿದೆ.

ಮನೆಗಳ ಮೇಲ್ಛಾವಣಿ ಹಾರಾಟ; ಧಾನ್ಯಗಳು ನೀರುಪಾಲು, ಬಾಣಂತಿ–ಮಗುವಿಗೆ ಗಾಯ

ಮಳೆಯ ಮುನ್ಸೂಚನೆಯೊಂದಿಗೆ ಬೀಸಿದ ಭಾರಿ ಬಿರುಗಾಳಿಗೆ ತೊರವಳ್ಳಿ ಗ್ರಾಮದ ಕೆಂಪನಾಯಕರ ಮನೆಯ ಮೇಲ್ಛಾವಣಿ ಸಂಪೂರ್ಣ ಹಾರಿ ಹೋಗಿದೆ. ಮಂಗಳೂರು ಹೆಂಚುಗಳು ಒಡೆದು ಬಿದ್ದಿದ್ದರಿಂದ ಮನೆಯೊಳಗೆ ಮಳೆನೀರು ನುಗ್ಗಿದ್ದು, ಶೇಖರಿಸಿಟ್ಟಿದ್ದ ರಾಗಿ, ತೊಗರಿ ಸೇರಿದಂತೆ ಇತರೆ ಧಾನ್ಯಗಳು ಸಂಪೂರ್ಣವಾಗಿ ನೆನೆದು ಹಾಳಾಗಿವೆ. ಮನೆಯಲ್ಲಿದ್ದವರು ಧಾನ್ಯಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಹರಸಾಹಸ ಪಡಬೇಕಾಯಿತು.

ಇದೇ ರೀತಿ ಹ್ಯಾಂಡ್ ಪೋಸ್ಟ್ ಪಟ್ಟಣದ ಮಹಾದೇವಮ್ಮ ಎಂಬುವವರ ಮನೆಯ ಮೇಲ್ಛಾವಣಿ ಹಾರಿದ ಪರಿಣಾಮ, ಮನೆಯಲ್ಲಿದ್ದ ಬಾಣಂತಿ ಮತ್ತು ನವಜಾತ ಮಗುವಿಗೆ ಗಾಯಗಳಾಗಿವೆ. ಸದ್ಯ






ಗಾಯಾಳುಗಳನ್ನು ಕೋಟೆಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಪುರಸಭೆ ಮುಖ್ಯಾಧಿಕಾರಿ ಪಿ. ಸುರೇಶ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ. ಇನ್ನು ದೇವಲಾಪುರ ಗ್ರಾಮದ ಮಂಗಳಮ್ಮ ಹಾಗೂ ಅಂಕನಾಥಪುರದ ಪವಿತ್ರಾ ಅವರ ಮನೆಗಳೂ ಸಹ ಗಾಳಿ ಮಳೆಗೆ ಸಿಲುಕಿ ಜಖಂಗೊಂಡಿವೆ. ತೊರವಳ್ಳಿ ಗ್ರಾಮದ ಮಹದೇವಮ್ಮ ಭೈರನಾಯಕರ ಮನೆಯೂ ಶಿಥಿಲಗೊಂಡಿದ್ದು, ಅಲ್ಲಲ್ಲಿ ಹಾನಿಗೊಳಗಾಗಿದೆ.

### ಇಟ್ನ ಗ್ರಾಮದಲ್ಲಿ ಭಾರಿ ಹಾನಿ; ನೂರಾರು ಎಕರೆ ಬಾಳೆ, ತೆಂಗು ನಾಶ

ಸರಗೂರು ಸಮೀಪದ ಇಟ್ನ ಗ್ರಾಮದಲ್ಲಿ ಮಳೆಯ ಆರ್ಭಟಕ್ಕೆ ತೋಟಗಾರಿಕಾ ಬೆಳೆಗಳು ಸಂಪೂರ್ಣ ನಾಶವಾಗಿವೆ. ಗ್ರಾಮದ ಮರಿನಾಯ್ಕರ ಜಮೀನಿನ ಒಂದು ಎಕರೆ ಬಾಳೆ ಹಾಗೂ ರಾಮನಾಯಕರ ಜಮೀನಿನಲ್ಲಿದ್ದ ಒಂದು ಎಕರೆ ತೆಂಗಿನ ಮರಗಳು ಉರುಳಿಬಿದ್ದಿವೆ. ಇದೇ ಗ್ರಾಮದ ರೈತ ಚನ್ನನಾಯಕರು ಶ್ರಮಪಟ್ಟು ಬೆಳೆದಿದ್ದ ಐದು ಎಕರೆ ಬಾಳೆ ಬೆಳೆ ಸಂಪೂರ್ಣ ನೆಲಕಚ್ಚಿದ್ದು, ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ. ಗ್ರಾಮದ ರವಿಸ್ವಾಮಿ ಹಾಗೂ ದೊಡ್ಡಯ್ಯ ಅವರ ಮನೆಗಳ ಮೇಲ್ಛಾವಣಿ ಹಾರಿಹೋಗಿದ್ದು, ಚಿಕ್ಕಮ್ಮ ಎಂಬುವವರ ಮನೆಯ ಸಮೀಪವಿದ್ದ ತೆಂಗಿನ ಮರ ನೇರವಾಗಿ ಮನೆ ಮೇಲೆಯೇ ಬಿದ್ದಿದೆ. ಅದೃಷ್ಟ ವಶಾತ್ ಮನೆಯಲ್ಲಿದ್ದವರೆಲ್ಲರೂ ಪ್ರಾಣಾಪಾಯ ದಿಂದ ಪಾರಾಗಿದ್ದಾರೆ. ತಾಲೂಕಿನ ಹೂವಿನಕೊಳೆ ಗ್ರಾಮದ ರೈತ ಪ್ರತಾಪ್ ಅವರ ಜಮೀನಿನ ನೇಂದ್ರ ಬಾಳೆ,



ಹಲಿಕುರ ಗ್ರಾಮದ ತಮ್ಮಯ್ಯನಾಯಕರ ಎರಡು ಎಕರೆ ಬೆಳೆ ಹಾಗೂ ಬಸಾಪುರದ ಮಹಾದೇವ ನಾಯಕ ಅವರ ಒಂದು ಎಕರೆ ಏಲಕ್ಕಿ ಬಾಳೆ ಬೆಳೆ ಸಂಪೂರ್ಣ ನಾಶವಾಗಿದ್ದು, ಸಂಕಷ್ಟಕ್ಕೊಳಗಾದ ರೈತರು ಮತ್ತು ಸಾರ್ವಜನಿಕರು ಸರ್ಕಾರದ ತುರ್ತು ಪರಿಹಾರಕ್ಕಾಗಿ ಕಾಯುತ್ತಿದ್ದಾರೆ.





### ಧರಾಶಾಹಿಯಾದ ಮರಗಳು; ರಸ್ತೆ ಸಂಚಾರ ಸ್ಥಗಿತ,

ಮಳೆಯ ಪ್ರಮಾಣ ಸಾಧಾರಣವಾಗಿದ್ದರೂ ಗಾಳಿಯ ವೇಗ ಹೆಚ್ಚಾಗಿದ್ದರಿಂದ ತುಂಬಸೋಗೆ ಗ್ರಾಮದಿಂದ ಇಟ್ನ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿದ್ದ ವಿದ್ಯುತ್ ಕಂಬ ಮುರಿದು ಬಿದ್ದಿದೆ. ಪರಿಣಾಮವಾಗಿ ಈ ಮಾರ್ಗದ ರಸ್ತೆ ಸಂಚಾರ ಸಂಪೂರ್ಣ ಬಂದ್ ಆಗಿದೆ. ಇದೇ ವೇಳೆ ಆ ಸಮೀಪದಲ್ಲೇ ಇದ್ದ ಬೃಹತ್ ಮರವೊಂದಕ್ಕೆ ಸಿಡಿಲು ಬಡಿದು ನೆಲಕ್ಕಪ್ಪಳಿಸಿದೆ. ಇನ್ನು ಬಿಡುಗಲು ಸಮೀಪದ ಕೆಮ್ಮಣ್ಣುಗುಂಡಿ ಬಳಿ ನಾಲ್ಕೈದು ದೊಡ್ಡ ಮರಗಳು ರಸ್ತೆಗೆ ಉರುಳಿಬಿದ್ದಿದ್ದರಿಂದ, ಮುಂಜಾನೆಯ ಅವಧಿಯಲ್ಲಿ ಸರಗೂರು–ಎಚ್.ಡಿ.ಕೋಟೆ ಮುಖ್ಯ ಮಾರ್ಗದಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ನಂತರ ಅಕ್ಕಪಕ್ಕದ ಗ್ರಾಮಸ್ಥರು ಸ್ಥಳಕ್ಕೆ ಧಾವಿಸಿ ಶ್ರಮದಾನದ ಮೂಲಕ ಮರಗಳನ್ನು ಕತ್ತರಿಸಿ ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

## ಅಕ್ರಮ ತ್ಯಾಜ್ಯ ತಡೆಗೆ ಮನವಿ

ಗುಂಡ್ಲುಪೇಟೆ : ತಾಲೂಕಿನ ಮೂಲಕ ಕೇರಳದ ಮೆಡಿವೇಸ್ಟ್ ಹಾಗೂ ಇನ್ನಿತರ ಅಪಾಯಕಾರಿ ತ್ಯಾಜ್ಯ ಅಕ್ರಮವಾಗಿ ನಮ್ಮ ರಾಜ್ಯಕ್ಕೆ ರವಾನೆಯಾಗುತ್ತಿರುವುದನ್ನು ತಡೆಯಬೇಕು ಎಂದು ಜಾರಕಿಹೊಳಿ ಬ್ರಿಗೇಡ್ ನ ಪದಾಧಿಕಾರಿಗಳು ತಹಸೀಲ್ದಾರ್ ಎಂ.ಎಸ್.ತನ್ಮಯ್ ರಿಗೆ ಮನವಿ ಸಲ್ಲಿಸಿದರು.

ತಾಲೂಕಿನಿಂದ ಹೆಚ್ಚಿನ ಪ್ರಮಾಣದಲ್ಲಿ ಕೇರಳಕ್ಕೆ ತರಕಾರಿ, ನೇಂದ್ರ ಬಾಳೆ ಇತರೆ ಕಡೆಗಳಿಂದ ಆಹಾರ ಪದಾರ್ಥಗಳು ಸರಬರಾಜಾಗುತ್ತದೆ. ಆದರೆ ಕೇರಳದಿಂದ ನಮ್ಮಲ್ಲಿಗೆ ಮೆಡಿವೇಸ್ಟ್ ಹಾಗೂ ಇನ್ನಿತರ ಅಪಾಯಕಾರಿ ತ್ಯಾಜ್ಯ ತಂದು ಹಾಕಲಾಗುತ್ತಿದೆ. ಇದಕ್ಕೆ ಕೆಲವು ಇಲಾಖೆ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ. ಆದ್ದರಿಂದ ಅಕ್ರಮ ಚಟುವಟಿಕೆ ತಡೆಗಟ್ಟಬೇಕು ಜತೆಗೆ ಅಕ್ರಮದಲ್ಲಿ ಶಾಮೀ ಲಾಗಿ ಕಾರ್ಯ ನಿರ್ವಹಿಸುತ್ತಿರುವವರ ಮೇಲೆ ಸೂಕ್ತ ಕ್ರಮವ ಹಿಸಬೇಕು ಎಂದು ತಹಸೀಲ್ದಾರರಲ್ಲಿ ಮನವಿ ಮಾಡಲಾಯಿತು. ಜಾರಕಿಹೊಳಿ ಬ್ರಿಗೇಡ್ ನ ಪದಾಧಿಕಾರಿಗಳಾದ ಗೋವಿ ನಾಯಕ್, ರಮೇಶ್, ಗಿರೀಶ್, ರವಿಶೇಖರ್(ಬಾಂಡ್), ಧನುಷ್‌ಗೌಡ, ಸೀನ, ಹರ್ಷ ಹಾಜರಿದ್ದರು.



## ಮೋದಿ ಬಡವರಿಗೆ ಹೊರೆ ಹೊರಿಸಲು ಬಂದಿದ್ದಾರೆ

ಚಾಮರಾಜನಗರ, ಬಡವರಿಗೆ ಒಳ್ಳೆಯದು ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಬಂದಿಲ್ಲ, ಬಡವರ ರಕ್ತ ಹೀರಿ ಸರ್ಕಾರ ಹಣ ಮಾಡುವಂತೆ ಕಾಣುತ್ತಿದೆ ಎಂದು ಸಚಿವ ಕೆ.ವೆಂಕಟೇಶ್ ಕಿಡಿಕಾರಿದರು.

ಚಾಮರಾಜನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇಂಧನ ಬೆಲೆ ಏರಿಕೆ ವಿರುದ್ಧ ಅಸಮಾಧಾನ ಹೊರ ಹಾಕಿದರು. ಪ್ರಧಾನಿ ಮೋದಿ ಜನಸಾಮಾನ್ಯರ ಮೇಲೆ ಬೆಲೆ ಏರಿಕೆ ಹೊರೆ ಹಾಕಿದ್ದಾರೆ, ಈ ರೀತಿ ಬೆಲೆ ಏರಿಸಿದರೆ ಜನರು ಹೇಗೆ ಬದುಕಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಗ ಯುದ್ಧ ಇದೆ ಎನ್ನುತ್ತಿದ್ದಾರೆ, ಈ ಹಿಂದೆ ಬೆಲೆ ಏರಿಕೆ ಮಾಡಿದ್ದರಲ್ಲಾ... ಆಗ ಯುದ್ಧ ಎಲ್ಲಿತ್ತು. ಅಚ್ಚೇ ದಿನ್ ಎಂದು ಭಾಷಣ ಮಾಡುತ್ತಾರೆ. ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡುವುದು ಅಚ್ಚೇ ದಿನಗಳಾ?, ಜನರಿಗೆ ಹೊರೆ ಹೊರಿಸಲು ಮೋದಿ ಬಂದಿದ್ದಾರೆ ಎಂದರು. ಇದೇ ವೇಳೆ, ಮತದಾನ ಪರಿಷ್ಕರಣೆ ಕುರಿತು ಮಾತನಾಡಿ, ಮತದಾನ ಪರಿಷ್ಕರಣೆ



ನಡೆಸಲಿ ನಾವು ಯಾರೂ ಬೇಡ ಎನ್ನಲ್ಲ. ಆದರೆ, ವಸ್ತುನಿಷ್ಠವಾಗಿರಲಿ. ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮತದಾರರನ್ನು ಈ ಬಾರಿ ಕೈ ಬಿಟ್ಟಿದ್ದಾರೆ. ಬರೀ ಒಂದೂವರೆ ಸಾವಿರ ಮತಗಳ ಅಂತರದಿಂದ ಸಾಕಷ್ಟು ಟಿಎಂಸಿ ಅಭ್ಯರ್ಥಿಗಳು ಸೋತಿದ್ದಾರೆ ಎಂದರು.

ಹಿಜಾಬ್? ವಿವಾದ, ಸಮಸ್ಯೆಯನ್ನು ನಾವು ಹುಟ್ಟುಹಾಕಿಲ್ಲ, ಈ ಸಮಸ್ಯೆಯನ್ನು ಆಚೆಗೆ ತಂದಿದ್ದೇ ಬಿಜೆಪಿಯವರು, ಯಾವ ಕಾಲದಿಂದ ಹಿಜಾಬ್ ಇದೆ, ಈಗೇನು ಹೊಸದಾಗಿ ಬಂದಿದೆಯಾ..?, ಸಾವಿರಾರು ವರ್ಷಗಳ ಪದ್ಧತಿಯನ್ನು ಬಿಜೆಪಿ ಅವರು ಬದಲಾವಣೆ ಮಾಡಿ ಎಂದರೆ ಈಗ ಬದಲಾವಣೆ ಮಾಡಲು ಆಗತ್ತಾ.? ಆದಕ್ಕಾಗಿ ನಾವು ಹಿಜಾಬ್ ಮೇಲಿನ ನಿಷೇಧವನ್ನು ತೆಗೆದು ಹಾಕಿದ್ದೇವೆ ಎಂದು ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡರು.

### ಚಾ.ನಗರದ ವಿವಿಧ ವಾರ್ಡ್‌ಗಳಿಗೆ ಸಚಿವ ವೆಂಕಟೇಶ್ ಭೇಟಿ

ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್? ಅವರಿಂದು ಚಾಮರಾಜನಗರ ಜಿಲ್ಲಾಕೇಂದ್ರದ ವಿವಿಧ ವಾರ್ಡ್?ಗಳಿಗೆ ಭೇಟಿ ಕೊಟ್ಟು ಕುಡಿಯುವ ನೀರಿನ ಪೂರೈಕೆ, ಸಮಸ್ಯೆ ಬಗ್ಗೆ ಪರಿಶೀಲನೆ ನಡೆಸಿದರು. ನಗರದ ಸೋಮವಾರಪೇಟೆ, ಬೀಡಿ ಕಾಲೋನಿ, ಗಾಳಿಪುರ ಸೇರಿ ವಿವಿಧ ಬಡಾವಣೆಗಳಿಗೆ ಭೇಟಿ ಕೊಟ್ಟು ನೀರಿನ ಪೂರೈಕೆ ಬಗ್ಗೆ ನಿವಾಸಿಗಳಿಂದಲೇ ಮಾಹಿತಿ ಪಡೆದರು. ಕುಡಿಯುವ ನೀರಿನ ಸಮಸ್ಯೆ ಆಗದಂತೆ ಮುನ್ನೆಚರಿಕೆ ವಹಿಸಿ, ಅಗತ್ಯವಿದ್ದರೇ ಟ್ಯಾಂಕರ್?ನಲ್ಲಿ ನೀರು ಪೂರೈಸಿ, ಸಮಸ್ಯೆ ಕಂಡುಬಂದ ಕೂಡಲೇ ಪರಿಹರಿಸಿ ಉದಾಸೀನ ಬೇಡ ಎಂದರು.

## ಟೌನ್‌ಶಿಪ್, ನಿಮಾನ್ಸ್ ಜಾಗ ಬದಲಿಸದಿದ್ದರೆ ಹೋರಾಟ

ಮೈಸೂರು: ಬಿಡದಿ ಹೋಬಳಿಯಲ್ಲಿ ಬಿಡದಿ ಟೌನ್‌ಷಿಪ್‌ಗಾಗಿ 9640 ಎಕರೆ ಭೂಸ್ವಾಧೀನ ನಿರ್ಧಾರ, ಮೈಸೂರು ತಾಲ್ಲೂಕಿನ ಗುಡುಮಾದನಹಳ್ಳಿಯಲ್ಲಿ ನಿಮಾನ್ಸ್ ನಿರ್ಮಾಣ ಪ್ರಸ್ತಾವ ಸರ್ಕಾರ ಕೂಡಲೇ ಕೈಬಿಡಬೇಕು. ಇಲ್ಲದಿದ್ದರೆ ರಾಜ್ಯ ರೈತ ಸಂಘ ರಾಜ್ಯಾದ್ಯಂತ ಹೋರಾಟ ನಡೆಸಲಿದೆ ಎಂದು ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬಿಡದಿ ಹೋಬಳಿಯ ಬೈರಮಂಗಳ, ಕೆ.ಜಿ. ಗೊಲ್ಲರ ಪಾಳ್ಯ, ಅರಳಾಳುಸಂದ್ರ, ಬನ್ನಿಗಿರಿ, ಹೊಸೂರು, ಮಂಡಲಹಳ್ಳಿ, ಕೆಂಪಯ್ಯನಪಾಳ್ಯ, ಒಡೆಯರ ಹಳ್ಳಿ ಗ್ರಾಮಗಳ ಫಲವತ್ತಾದ ಸುಮಾರು 9640 ಎಕರೆ ಜಮೀನು ವಶಕ್ಕೆ ಸರ್ಕಾರ ಮುಂದಾಗಿದೆ. ಇದೇ ರೀತಿ ಮೈಸೂರು ತಾಲ್ಲೂಕಿನ ಗುಡುಮಾದನಹಳ್ಳಿಯಲ್ಲಿಯೂ ನಿಮಾನ್ಸ್ ನಿರ್ಮಾಣಕ್ಕೆ ಮುಂದಾಗುವ ಮೂಲಕ ರೈತರನ್ನು ಒಕ್ಕಲೆಬ್ಬಿಸ ಹೊರಟಿರುವುದು ಸರಿಯಲ್ಲ. ಹೀಗಾಗಿ ಈ ಕುರಿತು ಚರ್ಚಿಸಲು ಮೇ 18 ರಂದು ಬೆಂಗಳೂರಿನಲ್ಲಿ ಸಂಯುಕ್ತ ಹೋರಾಟ– ಕರ್ನಾಟಕದ ಕೋರ್ ಸಮಿತಿ ಸಭೆ ನಡೆಯಲಿದ್ದು, ಹೋರಾಟದ ರೂಪುರೇಷೆ ನಿರ್ಧರಿಸಲಾಗುವುದೆಂದರು.

ಬಿಡದಿ ಜಮೀನಿಗೆ ವರ್ಷಪೂರ್ತಿ ನೀರಾವರಿ



ಸೌಲಭ್ಯವಿದೆ. ಇಲ್ಲಿ ತೆಂಗು, ಅಡಕೆ, ಮಾವು ಮೊದಲಾದ ತೋಟಗಾರಿಕೆ ಬೆಳೆಗಳಿವೆ. ಇಲ್ಲಿಂದಲೇ ಬೆಂಗಳೂರು ನಗರಕ್ಕೆ ತರಕಾರಿ, ಹಣ್ಣು, ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಸರಬರಾಜಾಗುತ್ತಿದೆ. ಹೀಗಾಗಿ ಭೂಸ್ವಾಧೀನ ವಿರೋಧಿಸಿ ಕಳೆದ 438 ದಿನಗಳಿಂದಲೂ ರೈತರು ಬೈರಮಂಗಲದಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸುತ್ತಿದ್ದಾರೆ. ಆದರೂ ಸರ್ಕಾರ ರಿಯಲ್ ಎಸ್ಟೇಟ್ ದಂಧೆಗೆ ಮಣಿದು ಇದನ್ನು ನಿರ್ಲಕ್ಷಿಸಿದೆ ಎಂದು ಕಿಡಿಕಾರಿದರು. ಒಂದು ವೇಳೆ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದಲ್ಲಿ ರಾಜ್ಯದಾದ್ಯಂತ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಇನ್ನಿತರ ಪದಾಧಿಕಾರಿಗಳಾದ ಹೊಸಕೋಟೆ ಬಸವರಾಜು, ನೇತ್ರಾವತಿ, ಪಿ ಮರಂಕಯ್ಯ, ಮಂಡಕಳ್ಳಿ ಮಹೇಶ್ ಇದ್ದರು.

### ಶಿಲ್ಪಿ ಕೃಷ್ಣ ನಾಯಕ್ ಪರಿಶೀಲನೆ

## ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸ್ಥಳಕ್ಕೆ ಭೇಟಿ

ಮಡಿಕೇರಿ:–ನಗರದಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ಸಂವಿಧಾನ ಶಿಲ್ಪಿ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪನೆಯ ಸ್ಥಳಕ್ಕೆ ಪ್ರತಿಮೆ ನಿರ್ಮಾಣ ಶಿಲ್ಪಿ ಕೃಷ್ಣ ನಾಯಕ್ ಅವರು ಶನಿವಾರ ಭೇಟಿ ನೀಡಿ ಪರಿಶೀಲಿಸಿದರು.

ಸುಮಾರು 2 ರಿಂದ 3 ಸೆಂಟ್ ಜಾಗದಲ್ಲಿ ಕಾಮಗಾರಿ ಈಗಾಗಲೇ ಆರಂಭವಾಗಿದ್ದು, 9 ಅಡಿ ಎತ್ತರದ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಸ್ಥಾಪಿಸುವ ಬಗ್ಗೆ ಪ್ರತಿಮೆ ನಿರ್ಮಾಣ ಸಮಿತಿ ಸದಸ್ಯರ ಜೊತೆ ಚರ್ಚಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಸ್.ಸಿ.ಸತೀಶ್ ಮಾತನಾಡಿ ಶಾಸಕರು, ನಗರಸಭೆ ಅಧ್ಯಕ್ಷರು ಮತ್ತು ಸದಸ್ಯರ ಒಮ್ಮತದ ಸಹಕಾರದಿಂದ ನಗರದಲ್ಲಿ ಹಲವಾರು ವರ್ಷಗಳಿಂದ ಬೇಡಿಕೆಯಂತೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪನೆಗೆ ಈಗಾಗಲೇ ಕಾಮಗಾರಿ ಆರಂಭವಾಗಿದೆ. ಸುಮಾರು 44 ಲಕ್ಷ ರೂ. ವೆಚ್ಚದಲ್ಲಿ ಡಾ.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಮತ್ತು



ಉದ್ಯಾನವನ ನಿರ್ಮಾಣವಾಗಲಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಸ್ಥಾಯಿ ಸಮಿತಿ ಅಧ್ಯಕ್ಷರಾದ ಶಾರದ ನಾಗರಾಜ್, ನಗರಸಭೆ ಮಾಜಿ ಸದಸ್ಯರಾದ ವೀಣಾಕ್ಷಿ, ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿಯ ಅಧ್ಯಕ್ಷರಾದ ಜೋಯಪ್ಪ ಹಾನಗಲ್, ಉಪಾಧ್ಯಕ್ಷರಾದ ಮಂಜುನಾಥ್, ಖಜಾಂಚಿ ಪ್ರೇಮ ಕೃಷ್ಣಪ್ಪ, ಸಮಿತಿ ಸದಸ್ಯರಾದ ಎಚ್.ಎಲ್.ದಿವಾಕರ್, ಪ್ರೇಮ್ ಕುಮಾರ್, ದೀಪಕ್ ಪೊನ್ನಪ್ಪ, ಗಣೇಶ್ ಅಶೋಕ್‌ಪುರ, ವಿನಯ್, ಸುದರ್ಶನ್, ಇತರರು ಇದ್ದರು.

## ಸಂಕ್ಷಿಪ್ತ ಸುದ್ದಿ

### ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ರಾಮನಗರ:** ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2026–27ನೇ ಸಾಲಿನ ಸಿ.ಇ.ಟಿ/ನೀಟ್‌ನಲ್ಲಿ ಆಯ್ಕೆಯಾದ ವೈದ್ಯಕೀಯ (ಎಂ.ಬಿ.ಬಿ.ಎಸ್) ಬಿ.ಡಿ.ಎಸ್. ಬಿ.ಇ/ಬಿ.ಟೆಕ್, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್ ಮತ್ತು ಆಯುಷ್, ಬ್ಯಾಚುಲರ್ ಆಫ್ ಟೆಕ್ನೋಲಾಜಿಸ್ ಫಾರ್ಮಸಿ, ಅಗ್ರಿಕಲ್ಚರ್ ಸೈನ್ಸ್, ವೆಟರ್ನನರಿ ಕೋರ್ಸ್, ಫಾರ್ಮಾ ಸೈನ್ಸ್ ಈ ಪದವಿ ಕೋರ್ಸುಗಳಲ್ಲಿ ಆಯ್ಕೆಯಾದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆಯಡಿ ಸಾಲ ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹರು ಆನ್‌ಲೈನ್ ವೆಬ್‌ಸೈಟ್ https://kmdconline.karnataka.gov.in ಮೂಲಕ ಮೇ 30ರೊಳಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಕೊಠಡಿ ಸಂಖ್ಯೆ: 404, 3ನೇ ಮಹಡಿ, ಜಿಲ್ಲಾಧಿಕಾರಿಗಳ ನೂತನ ಕಚೇರಿ ಸಂಕೀರ್ಣ, ರಾಮನಗರ–562159 ಈ ಕಚೇರಿ ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ)ದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅರ್ಜಿ ಆಹ್ವಾನ

**ರಾಮನಗರ:** 2026–27ನೇ ಸಾಲಿಗೆ ಮಾಗಡಿ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಐದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಹಾಗೂ ಜೋಡಿಘಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯಲ್ಲಿ 1 ರಿಂದ 5ನೇ ತರಗತಿವರೆಗೆ ದಾಖಲಾತಿ ಪ್ರಾರಂಭವಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಸಮಾಜ ಕಲ್ಯಾಣ ಇಲಾಖಾ ವೆಬ್‌ಸೈಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ವೆಬ್‌ಸೈಟ್ https://sw.kar.nic.in ಮೂಲಕ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ವಿದ್ಯಾರ್ಥಿ ನಿಲಯದ ವಾರ್ಡನ್ / ಸಮಾಜ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರು (ಗ್ರೇಡ್–2), ಸಮಾಜ ಕಲ್ಯಾಣ ಇಲಾಖೆ, ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಇವರನ್ನು ಸಂಪರ್ಕಿಸುವಂತೆ ಮಾಗಡಿ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೇಡ್–2) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿವಿಧ ಡಿಪ್ಲೊಮ ಪ್ರವೇಶ ಕೋರ್ಸುಗಳಿಗೆ ಅರ್ಜಿ ಆಹ್ವಾನ

**ಮಂಡ್ಯ:** ನಾಗಮಂಗಲ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯ 2026–27 ನೇ ಸಾಲಿನ ವಿವಿಧ ಕೋರ್ಸುಗಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನಿಷ್ಟ ಶೇ.35 ಅಂಕಗಳದೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಪ್ರವೇಶಕ್ಕೆ ಮೆರಿಟ್ ಹಾಗೂ ರೋಸ್ಟರ್‌ಗನುಗುಣವಾಗಿ ಆಫ್‌ಲೈನ್ ಮೂಲಕ ಪ್ರವೇಶ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ. ಸಂ. 9448711158, 7349171064, 9741116546, 9449340268, 9632766446 ಅನ್ನು ಸಂಪರ್ಕಿಸಬಹುದು ಎಂದು ನಾಗಮಂಗಲ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕಾಣೆಯಾದವರ ಪತ್ತೆಗಾಗಿ




**ಮಂಡ್ಯ:** ಮಳವಳ್ಳಿ ತಾಲ್ಲೂಕಿನ ಜಡಗನಪುರ ಗ್ರಾಮದ ಕೆ. ರಮೇಶ್ (46) ಎಂಬುವವರು ಕಾಣೆಯಾಗಿದ್ದಾರೆ ಎಂದು ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯು 5. 6 ಅಡಿ ಎತ್ತರ ,ಗೋದಿ ಮೈ ಬಣ್ಣ, ಸಾಧಾರಣ ಮೈಕಟ್ಟು, ಬಿಳಿ ಬಣ್ಣದ ಶರ್ಟ್ ಮತ್ತು ನೀಲಿ ಬಣ್ಣದ ಪ್ಯಾಂಟ್ ಅನ್ನು ಧರಿಸಿರುತ್ತಾರೆ.

ವ್ಯಕ್ತಿಯ ಸುಳಿವು ಸಿಕ್ಕಲ್ಲಿ ದೂ.ಸಂ: 08231–242244 ಅನ್ನು ಸಂಪರ್ಕಿಸಬಹುದು ಎಂದು ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯ ಸಬ್ ಇನ್ಸ್ ಪೆಕ್ಟರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರುನಾಡ ಜಾನಪದ ಕಲಾ ಮಹೋತ್ಸವ ಯಶಸ್ವಿ

## ಎಬಿಸಿಡಿ ಡ್ಯಾನ್ಸ್ ಅಕಾಡೆಮಿಯ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಮಾರಂಭ

ರಾಮನಗರ: ಜಿಲ್ಲೆಯ ಪ್ರತಿಷ್ಠಿತ ಎಬಿಸಿಡಿ ಡ್ಯಾನ್ಸ್ ಅಕಾಡೆಮಿಯ ವಾರ್ಷಿಕೋತ್ಸವದ ಅಂಗವಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರುನಾಡ ಜಾನಪದ ಕಲಾ ಮಹೋತ್ಸವ 2026 ಮತ್ತು ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ಏರ್ಪಡಿಸಲಾಗಿದ್ದ ಈ ಸಮಾರಂಭವನ ನು ಉದ್ಘಾಟಿಸಿದ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಮಾತನಾಡಿ, ಕಲೆ, ಸಾಹಿತ್ಯ , ಸಂಸ್ಕೃತಿ, ಜಾನಪದ ನಮ್ಮ ಸಂಪತ್ತು. ಅದನ್ನು ಉಳಿಸಿ ಬೆಳೆಸಲು ಇಂತಹ ವೇದಿಕೆಗಳು ಅಗತ್ಯವಿದೆ. ಪ್ರತಿಯೊಂದು ಮಗುವಿನಲ್ಲೂ ಪ್ರತಿಭೆ ಇದೆ. ಅದನ್ನು ಗುರುತಿಸುವ ಕೆಲಸ ಆಗಬೇಕಿದೆ. ಪೋ 'ಕರು ಮಕ್ಕಳಲ್ಲಿನ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು. ಮಕ್ಕಳಿಗೆ ಮತ್ತ'ಷ್ಟ ತರಬೇತಿ ನೀಡಿ ಕಲಾ ಸಾಧಕರನ್ನಾಗಿ ತಯಾರು ಮಾಡಬೇಕು ಎಂದರು.

ರಾಜ್ಯ ವೈಜ್ಞಾನಿಕ ಸಂಶೋಧನಾ ಮಂಡಳಿ ಅಧ್ಯಕ್ಷ ಹುಲಿಕಲ್ ನಟರಾಜ್ ಮಾತನಾಡಿ, ಕಲೆ ಸಾಧಕನ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ. ಅದು ಪುಕ್ಕಟೆ ಸಿಗುವ ವಸ್ತು ಅಲ್ಲ. ಕಲೆ ಸಂಸ್ಕೃತಿ, ರೀತಿ ರಿವಾಜು ಕಲಿಸುತ್ತದೆ. ಪುರಾತನ



ಘಟನೆಗಳು ಮರುಕಳಿಸುವಂತೆ ಮಾಡುತ್ತದೆ. ಜನರನ್ನು ಮಾನಸಿಕವಾಗಿ ಸದೃಢವನ್ನಾಗಿಸುತ್ತದೆ ಎಂದು ತಿಳಿಸಿದರು.

ರಂಗಭೂಮಿ ಕಲೆಗೆ ಮನು' ಮತ್ತು ಮನು 'ನ ವ್ಯಕ್ತಿತ್ವ ಬದಲಾಯಿಸುವ ಶಕ್ತಿ ಇದೆ. ಕಲೆಗಳ ಪಾತ್ರ ಮನು'ನ ವ್ಯಕ್ತಿತ್ವವನ್ನೇ ಬದಲಾಯಿಸುತ್ತದೆ. ಈ ಮೊದಲು ಚಲನ ಚಿತ್ರ ಗೀತೆಗಳು ಸಂಸ್ಕೃತಿ ಕೊಡುತ್ತಿತ್ತು. ಈಗ ಹೊಡಿಬಡಿ ಕೊಲ್ಲು ಸಂಸ್ಕೃತಿ ಕೊಡುತ್ತಿದೆ. ನಾವೆಲ್ಲರು ಕಲೆಯನ್ನು ಪ್ರೀತಿಸಿ, ಆರಾಧಿಸಿ, ಆಚರಿಸೋಣ ಎಂದು ಹೇಳಿದರು.

ಶ್ರೀ ರೇವಣಸಿದ್ದೇಶ್ವರ ಸ್ವಾಮಿ ದಾಸೋಹ ಮಠದ ಶ್ರೀ ರಾಜಶೇಕರ ಶಿವಾಚಾರ್ಯ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸತೀಶ್, ಕರುನಾಡ ಸೇನೆ ರಾಜ್ಯ ಉಪಾಧ್ಯಕ್ಷ ಜಗದೀಶ್ ಮಾತನಾಡಿದರು.

ಈ ಸಂದರ್ಭದಲ್ಲಿ ಕಲಾಜ್ಯೋತಿ ಜಾನಪದ ರತ್ನ ಪ್ರಶಸ್ತಿಯನ್ನು ಅಂತರಾಷ್ಟ್ರೀಯ ಜಾನಪದ ಕಲಾವಿದ ಎಸ್.ಪ್ರದೀಪ್ , ಡೊಳ್ಳು ಕುಣಿತ ಕಲಾವಿದ ರಮೇಶ್ , ಪೂಜಾ ಕುಣಿತ ಕಲಾವಿದ ಪಾರ್ಥಸಾರಥಿ, ತಂಬೂರಿ ಕಲಾವಿದ ತಂಬೂರಿ ಶಿವಣ್ಣ, ತಮಟೆ ಕಲಾವಿದ ಮಲ್ಲೇಶ್ , ಕೋಲಾಟ ಕಲಾವಿದ ಜಿ.ಚನ್ನಪ್ಪ, ಭರತನಾಟ್ಯ ಕಲಾವಿದ ವಿದುಷಿ ಹೇಮಾ, ಯಕ್ಷಗಾನ ಕಲಾವಿದೆ ಪಂಚಮಿ, ಗಾಯಕ ಕೆಂಗಲ್ ವಿನಯ್ ಕುಮಾರ್ , ರಂಗಭೂಮಿ ಕಲಾವಿದ ಎಚ್.ವಿ.ಮೂರ್ತಿ ಅವರಿಗೆ ಪ್ರದಾನ ಮಾಡಲಾಯಿತು.

ಪತ್ರಕರ್ತರಾದ ಸು.ತಾ.ರಾಮೇಗೌಡ, ಚೆಲುವರಾಜು, ರುದ್ರೇಶ್ , ಕೆ.ಅರುಣ್ , ಕರುನಾಡ ಸೇನೆ ರಾಜ್ಯ ಉಪಾಧ್ಯಕ್ಷ ಜಗದೀಶ್ , ಕನ್ನಡಪರ ಹೋರಾಟಗಾರ ಗೋವಿಂದರಾಜು, ಆರ್ ಬಿಎಲ್ ಮಾಲೀಕ ಲೋಕೇಶ್ , ಭರತನಾಟ್ಯ ಕಲಾವಿದೆ ಕಾವ್ಯಶ್ರೀ, ಗಾಯಕ ರಘುನಂದನ್ , ರೇಣುಕಾ ಟಿಫಾನಿಸ್ ಮಾಲೀಕ ನಾಗರಾಜ್ ಅವರಿಗೆ ಕಲಾ ಜ್ಯೋತಿ ಕನ್ನಡರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪದ್ಮಶ್ರೀ ಪುರಸ್ಕೃತ ಹಾಸನ ರಘು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ. ಬಿ. ಚೇತನ್ ಕುಮಾರ್, ನಗರಸಭೆ ಮಾಜಿ ಅಧ್ಯಕ್ಷ ರವಿ ಕುಮಾರ್, ಹಿಂದುಳಿದ ವರ್ಗಗಳ ಒಕ್ಕೂಟ ಜಿಲ್ಲಾಧ್ಯಕ್ಷ ರೈಡ್ ನಾಗರಾಜ್, ಯುವ ಕಾಂಗ್ರೆಸ್ ಮುಖಂಡ ಗುರುಪ್ರಸಾದ್, ಕರವೇ ಜಿಲ್ಲಾಧ್ಯಕ್ಷ ಎಂಎನ್ ಆರ್ ರಾಜು, ಡ್ಯಾನ್ಸ್ ಮಾಸ್ಟರ್ ರವಿಕುಮಾರ್, ಎಂಐ ಲೈಫ್ ಸ್ಟೈಲ್ ಸಿಟಿಸಿ ಹೇಮಂತ್ ಕುಮಾರ್ , ಕಲಾಜ್ಯೋತಿ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಎಸ್.ರೇಣುಕಾಪ್ರಸಾದ್, ನಂದಗೋಕುಲ ವೃದ್ಧಾಶ್ರಮ ಸಂಸ್ಥಾಪಕ ಡಾ.ಎನ್.ವಿ.ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

# ಡಾ. ರವಿ ಅವರಿಗೆ ಅವ್ವ ದತ್ತಿನಿಧಿ ಪ್ರಶಸ್ತಿ

**ರಾಮನಗರ:** ಜಾನಪದ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ ಜಾನಪದ ಲೋಕದ ಕ್ಯೂರೇಟರ್ ಡಾ. ರವಿ ಯು.ಎಂ. ಅವರು ಕೇರಳ ರಾಜ್ಯದ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ್ ನೀಡುವ ದತ್ತಿನಿಧಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಕಳೆದ ಐದು ವರ್ಷಗಳಿಂದ ಪತ್ರಿಕೆಗಳಿಗೆ ಜಾನಪದ ಕಲಾವಿದರ ಜೀವನ, ಸಾಧನೆ, ವರದಿಗಾರಿಕೆ ಹಾಗೂ ಪರಿಚಯ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. 10 ಸಾವಿರ ರೂ. ಗೌರವ ಧನ ಒಳಗೊಂಡ ಈ ವರ್ಷದ ಪ್ರಶಸ್ತಿಯನ್ನು ಮೇ 16ರಂದು ಕಾಸರಗೋಡಿನ ಕುಡಾಲ್ ಮೇರ್ಕಳ ಸುಬ್ಬಯ್ಯ ಕಟ್ಟೆ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಪ್ರದಾನ ಮಾಡಿ ಗೌರವಿಸಲಾಯಿತು.

ಡಾ. ರವಿ ಯು.ಎಂ. ಅವರು ಜನಪದ ಕಲಾವಿದ ಹಾಗೂ ಅಕಾಡೆಮಿಕ್ ವಿದ್ವಾಂಸರಾಗಿ ಮಾತ್ರ ಉಳಿಯದೆ, ಜನಪದ ಕಲಾವಿದರ ಬದುಕು ಮತ್ತು ಸಾಧನೆಯನ್ನು ಅಕ್ಷರ ರೂಪಕ್ಕಿಳಿಸಿದ ಸಕ್ರಿಯ ವರದಿಗಾರರಾಗಿದ್ದಾರೆ. ಇವರು ಆರುನೂರಕ್ಕೂ ಹೆಚ್ಚು ಜನಪದ ಕಲಾವಿದರನ್ನು ವಿವಿಧ ಲೇಖನಗಳ ಮೂಲಕ ನಾಡಿಗೆ ಪರಿಚಯಿಸಿದ್ದಾರೆ.

ವಿಶೇಷವಾಗಿ ಕರ್ನಾಟಕ ಜಾನಪದ ಪರಿಷತ್ತು ಪ್ರಕಟಿಸುವ ಜಾನಪದ ಜಗತ್ತು' ಪತ್ರಿಕೆಗೆ ಹಿರಿಯ ಜನಪದ ಕಲಾವಿದರ ಜೀವನದ ಕುರಿತು ವರದಿಗಳನ್ನು ಸಿದ್ಧಪಡಿಸಿ ಪ್ರಕಟಿಸಿದ್ದಾರೆ.

ಪತ್ರಿಕೆಗಳಲ್ಲಿ ಕಲಾವಿದರ ಸಾಧನೆಗಳ ಕುರಿತು ನಿರಂತರ ಲೇಖನಗಳನ್ನು ಬರೆಯುವ ಮೂಲಕ ತೆರೆಯ ಮರೆಯಲ್ಲಿರುವ ಅಪ್ರತಿಮ ಪ್ರತಿಭೆಗಳಿಗೆ ಸಾರ್ವಜನಿಕ ವೇದಿಕೆ ಕಲ್ಪಿಸುವಲ್ಲಿ ಇವರ ಲೇಖನಿ ಶ್ರಮಿಸಿದೆ. 500ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಕಲಾವಿದರ ಸಾಧನೆಯನ್ನು ಪರಿಚಯಿಸಿ, ಅವರಿಗೆ ಪ್ರಚಾರ ಮತ್ತು ಪ್ರಸಾರ ದೊರಕಿಸಿಕೊಡುವ ಮೂಲಕ ಪತ್ರಿಕೋದ್ಯಮ ಮತ್ತು ಸಂಶೋಧನೆಯನ್ನು ಸಮನ್ವಯ ಗೊಳಿಸಿದ್ದಾರೆ.

# ಭತ್ತಕ್ಕೆ 4000 ಬೆಂಬಲ ಬೆಲೆ ನೀಡಲು ಆಗ್ರಹ

**ಕೆ.ಆರ್.ನಗರ:** ಕೇಂದ್ರ ಸರ್ಕಾರವು ಭತ್ತದ ಬೆಳೆಗೆ ಪ್ರತಿ ಕ್ವಿಂಟಲ್‌ಗೆ 4000 ಬೆಂಬಲ ಬೆಲೆಯನ್ನು ನಿಗದಿ ಮಾಡಿ ರೈತರ ನೆರವಿಗೆ ಧಾವಿಸಬೇಕೆಂದು ಬಿಜೆಪಿಯ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಿ.ಕೆ. ಬಾಲಮನೋಹರ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಕೇಂದ್ರ ಸರ್ಕಾರವು ರೈತರ ಆದಾಯವನ್ನು ದ್ವಿಗುಣಗೊಳಿಸುವ ಭರವಸೆ ನೀಡಿದ್ದು, ಅದರಂತೆ ಹಲವು ಬೆಳೆಗಳಿಗೆ ಉತ್ತಮ ಬೆಂಬಲ ಬೆಲೆ ನೀಡಲಾಗಿದೆ. ಇದರಿಂದ ಕೆಲವು ಬೆಳೆಗಳ ರೈತರಿಗೆ ಅನುಕೂಲವಾಗಿದ್ದರೂ, ಭತ್ತ ಬೆಳೆಯುವ ರೈತರು ನಿರಾಸೆಗೆ ಒಳಗಾಗಿದ್ದಾರೆ ಎಂದು ಹೇಳಿದ್ದಾರೆ.


ಒಂದು ಎಕರೆ ಭತ್ತದ ಬೆಳೆ ಬೆಳೆಯಲು ಬೀಜ, ಬದು ಕಟ್ಟುವಿಕೆ, ಉಳುಮೆ, ನಾಟಿ, ಗೊಬ್ಬರ, ಔಷಧಿ, ಕಳೆ ತೆಗೆಯುವಿಕೆ, ಕಟಾವು ಸೇರಿದಂತೆ ವಿವಿಧ ಹಂತಗಳಲ್ಲಿ ಸುಮಾರು



55,000 ರಿಂದ 60,000 ವರೆಗೆ ವೆಚ್ಚವಾಗುತ್ತದೆ. ಸರಾಸರಿ ಒಂದು ಎಕರೆಗಿಂತ 30 ಕ್ವಿಂಟಲ್ ಉತ್ಪಾದನೆ ಸಿಗುತ್ತದೆ.

ಪ್ರಸ್ತುತ ಬೆಂಬಲ ಬೆಲೆಯಂತೆ ಒಟ್ಟು ಆದಾಯ 65,000 ರಿಂದ 70,000 ಮಾತ್ರವಾಗುತ್ತಿದ್ದು, ರೈತರಿಗೆ 5,000 ರಿಂದ 10,000 ವರೆಗೆ ಮಾತ್ರ ಲಾಭ ಉಳಿಯುತ್ತಿದೆ. ಇದು ಸಾಕಷ್ಟು ಅಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಆದ್ದರಿಂದ ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ



3800 ರಿಂದ 4000ರವರೆಗೆ ಬೆಂಬಲ ಬೆಲೆಯನ್ನು ಹೆಚ್ಚಿಸುವ ಮೂಲಕ ರೈತರ ಆರ್ಥಿಕ ಸ್ಥಿತಿ ಸುಧಾರಿಸಲು ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ, ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರು ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಈ ಬೇಡಿಕೆಯನ್ನು ಈಡೇರಿಸಬೇಕು ಎಂದು ಸಿ.ಕೆ. ಬಾಲಮನೋಹರ ಒತ್ತಾಯಿಸಿದರು.

# ಚಾ.ನಗರದಲ್ಲಿ ಮೇ.22 ರಂದು ಬಸವೇಶ್ವರರ ಜಯಂತೋತ್ಸವ

## ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮರಿಸ್ವಾಮಿ ಮನವಿ

**ಚಾಮರಾಜನಗರ:** ಜಿಲ್ಲಾ ಮಟ್ಟದ ಬಸವ ಜಯಂತೋತ್ಸವ ಮೇ 22 ರಂದು ಚಾ.ನಗರದಲ್ಲಿ ಅದ್ದೂರಿಯಾಗಿ ಆಚರಣೆಯಾಗಲಿದೆ. ಪ್ರತಿ ಹಳ್ಳಿಹಳ್ಳಿಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಬಸವ ಭಕ್ತರು, ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹಾಗೂ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಮನವಿ ಮಾಡಿದರು.

ತಾಲೂಕಿನ ಚಂದಕವಾಡಿ ಹೋಬಳಿಯ ವ್ಯಾಪ್ತಿಯ ಗ್ರಾಮಗಳಲ್ಲಿ ಪ್ರಚಾರ ನಡೆಸಿ, ಗ್ರಾಮದ ಮುಖಂಡರು, ಯಜಮಾನರು ಹಾಗೂ ಯುವಕರನ್ನು ಭೇಟಿ ಮಾಡಿ, ಪೋಸ್ಟರ್ ಹಾಗೂ ಕರಪತ್ರಗಳನ್ನು ನೀಡುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಜೊತೆಗೆ ಮೆರವಣಿಗೆಗೆ ಮೆರಗು ನೀಡುವ ಪಲ್ಲಕ್ಕಿ, ನಂದಿಧ್ವಜ, ಭಜನೆ ತಂಡಗಳು ಬರುವ ಜೊತೆಗೆ ವಿಶೇಷವಾಗಿ ಮಹಿಳೆಯರು ಮೆರವಣಿಗೆ ಹಾಗೂ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಚಾ.ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠ ಹಾಗೂ ಬಸವ ಬಳಗಗಳ ಒಕ್ಕೂಟದ ಸಹಯೊಗದಲ್ಲಿ ಮೇ



22ರ ಶುಕ್ರವಾರ ಬಸವ ಜಯಂತೋತ್ಸವ ನಡೆಯಲಿದೆ. ಶ್ರೀಮಠದಲ್ಲಿ ಅಂದು ಬೆಳಗ್ಗೆಯಿಂದಲೇ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಬೆಳಗ್ಗೆ ಉಪಹಾರ, ಮಧ್ಯಾಹ್ನ ಊಟ ಮತ್ತು ವಚನ ಗಾಯನ, ಪ್ರವಚನ ಕಾರ್ಯಕ್ರಮ ಇರುತ್ತದೆ. ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಶ್ರೀ ಬಸವೇಶ್ವರರ ಪುತ್ಥಳಿಗೆ ಸುತ್ತೂರು ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮೀಜಿ ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಈ ಕಾರ್ಯಕ್ರಮಕ್ಕೆ ಉಸ್ತುವಾರಿ ಸಚಿವರು, ಶಾಸಕರು, ಸಂಸದರು, ಮಾಜಿ ಶಾಸಕರು, ಹಾಗು ಜಿಲ್ಲೆಯ ಎಲ್ಲಾ ಮಠಾಧೀಶರು ಭಾಗವಸಲಿದ್ದಾರೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಮೂಲಕ ಜಯಂತೋತ್ಸವ ಮೆರವಣಿಗೆಯನ್ನು ಯಶಸ್ವಿಗೊಳಿಸಿಕೊಡಬೇಕೆಂದು ಮರಿಸ್ವಾಮಿ ಮನವಿ ಮಾಡಿದರು.

ಒಕ್ಕೂಟದ ಪ್ರಚಾರ ಸಮಿತಿಯ ಅಧ್ಯಕ್ಷ ಅಲೂರು ಪ್ರದೀಪ್ ಮಾತನಾಡಿ, ಜಿಲ್ಲೆಯಲ್ಲಿ ಬಸವ ಬಳಗಗಳ ಒಕ್ಕೂಟದಿಂದ ಜಿಲ್ಲೆಯ ಮೊದಲ ಬಾರಿ ಅದ್ದೂರಿಯಾಗಿ ಬಸವ ಜಯಂತಿಯನ್ನು ಆಚರಣೆ ಮಾಡಲಾಗುತ್ತಿದೆ. ಪೂಜ್ಯ ಸುತ್ತೂರುಶ್ರೀಗಳು ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣ ಸಮಾನತೆಗೆ ಹೋರಾಟ ಮಾಡಿದ ಮಹಪುರುಷ, ಅವರ ವಚನಗಳು ಇಂದಿಗೂ ಉತ್ತಮ ಸಮಾಜ ನಿರ್ಮಾಣಕ್ಕೆ ದಾರಿ ದೀಪವಾಗಿದೆ. ಬಸವಣ್ಣನವರ ಸಂದೇಶ ಹೆಚ್ಚು ಪ್ರಚಾರ ಪಡೆದುಕೊಳ್ಳುವ ಅವಶ್ಯಕತೆ ಇದೆ. ಹೀಗಾಗಿ ಸಮಾಜದ ಬಂಧುಗಳು ಹಾಗೂ ಬಸವ ಶರಣರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಮನವಿ ಮಾಡಿದರು. ಚಂದಕವಾಡಿ ಹೋಬಳಿಯ ಕೋಡಿಮೋಳೆ, ಚಂದಕವಾಡಿ, ಹೆಬ್ಬಸೂರು, ಅಯ್ಯಜನಪುರ , ನಾಗವಳ್ಳಿ, ನಲ್ಲೂರು, ಜ್ಯೋತಿಗೌಡನಪುರ, ಕಾಗಲವಾಡಿ, ಆಲೂರು, ದೊಡ್ಡರಾಯಪೇಟೆ ಗ್ರಾಮಗಳಲ್ಲಿ ಬಸವ ಜಯಂತೋತ್ಸವ ಕಾರ್ಯಕ್ರಮದ ಬಗ್ಗೆ ಕರಪತ್ರಗಳನ್ನು ನೀಡಿ ಆಹ್ವಾನ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಹಾಸಭಾದ ಅಧ್ಯಕ್ಷ ಮೂಡ್ಲುಪುರ ನಂದೀಶ್, ತಾಲೂಕು ಅಧ್ಯಕ್ಷ ಬಾಲಚಂದ್ರಮೂರ್ತಿ, ಒಕ್ಕೂಟದ ಕಾರ್ಯದರ್ಶಿ ದೊಡ್ಡರಾಯಪೇಟೆ ಗಿರೀಶ್, ಮುಖಂಡರಾದ ಕೆ.ವೀರಭದ್ರಸ್ವಾಮಿ, ಜಿ.ಪಂ. ಮಾಜಿ ಸದಸ್ಯ ಸದಾಶಿವಮೂರ್ತಿ, ಶ್ರೀಕಂಠಸ್ವಾಮಿ, ಜ್ಯೋತಿಗೌಡನಪುರ ದೊರೆಸ್ವಾಮಿ, ಚಂದಕವಾಡಿ ರಾಜೇಂದ್ರ, ಯಡಿಯೂರು ಪ್ರಕಾಶ್, ಶ್ರೀಕಂಠಮೂರ್ತಿ, ವಕೀಲ ಪ್ರಥ್ವಿರಾಜ್, ಶಿವನಲಾಂಕರಪ್ಪ, ಪಿ. ಶೇಖರಪ್ಪ, ಅಲೂರು ರಮೇಶ್ ಬಾಬು, ಅಲೂರು ಬಾಬು, ವಕೀಲ ಪ್ರಥ್ವಿ, ಮೊದಲಾದವರು ಇದ್ದರು.

# ಅನಧಿಕೃತ ವ್ಯಕ್ತಿಗಳನ್ನು ನಿರ್ಬಂಧಿಸುವಂತೆ ಪತ್ರಬರಹಗಾರರ ಮನವಿ

**ಕೆ.ಆರ್.ಪೇಟೆ:** ಪಟ್ಟಣದ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಅನಧಿಕೃತ ವ್ಯಕ್ತಿಗಳು ಮತ್ತು ದಲ್ಲಾಳಿಗಳು ಕಾನೂನು ಬಾಹಿರವಾಗಿ ದಸ್ತಾವೇಜುಗಳನ್ನು ತಯಾರಿಸಿ ನೊಂದಾಯಿಸುತ್ತಿದ್ದು ಇದನ್ನು ನಿರ್ಭದಿಸುವಂತೆ ಕೋರಿ ತಾಲೂಕಿನ ಪತ್ರ ಬರಹಗಾರರ ಸಂಘದ ಸದಸ್ಯರು ಶಾಸಕ ಹೆಚ್.ಟಿ.ಮಂಜು ಅವರಿಗೆ ಮನವಿ ಪತ್ರ ಅರ್ಪಿಸಿ ಆಗ್ರಹಿಸಿದರು.

ಸಂಘದ ಸದಸ್ಯರ ಮನವಿಯ ಮೇರೆಗೆ ಪಟ್ಟಣದ ಉಪ ನೊಂದಣಾಧಿಕಾರಿಗಳ ಕಛೇರಿಗೆ ಆಗಮಿಸಿದ ಶಾಸಕ ಹೆಚ್.ಟಿ.ಮಂಜು ಅವರಿಗೆ ಮನವಿ ಪತ್ರ ಅರ್ಪಿಸಿದ ಸದಸ್ಯರು ನೊಂದಾಯಿತ ದಸ್ತಾವೇಜು ಬರಹಗಾರರ ಸಮಸ್ಯೆಗಳನ್ನು ಶಾಸಕರ ಮುಂದೆ ಹೇಳಿಕೊಂಡರು.

ಪಟ್ಟಣದ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಾವೇರಿ–2 ಯೋಜನೆ ಜಾರಿಗೆ ಬಂದಾಗಿನಿಂದ ಕೆಲವು ಡಿ.ಟಿ.ಪಿ ಹಾಗೂ ಸೈಬರ್ ಸೆಂಟರ್ ಆಪರೇಟರುಗಳು ಅಧಿಕೃತ ಪತ್ರ ಬರಹಗಾರರ ಲೈಸೆನ್ಸ್ ಹೊಂದದಿದ್ದರೂ ಕಾನೂನು ಬಾಹಿರವಾಗಿ ಸಾರ್ವಜನಿಕರ ಆಸ್ತಿ ಪಾಸ್ತಿಗಳ ನೊಂದಣಿ ದಸ್ತಾವೇಜು ತಯಾರಿಸಿ ಮುಗ್ದ ರೈತರು ಮತ್ತು ಸಾರ್ವಜನಿಕರ ಸುಲಿಗೆ ಮಾಡುತ್ತಿದ್ದಾರೆ. ಅನಧಿಕೃತ ದಸ್ತಾವೇಜು ತಯಾರಿಸುವವರಿಗೆ ದಸ್ತಾವೇಜು ಬರಹದ ಬಗ್ಗೆ ಯಾವುದೇ ಅನುಭವ ಮತ್ತು ಬರವಣಿಗೆ ಕೌಶಲ್ಯ ಇರುವುದಿಲ್ಲ. ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡಿ ಶ್ರೀ ಸಾಮಾನ್ಯರಿಂದ ಮನಸೋ



ಇಚ್ಚೆ ಹಣ ವಸೂಲಿ ಮಾಡುತ್ತಿದ್ದಾರೆ. ಇದು ಸ್ಪಷ್ಟವಾಗಿ ಭಾರತೀಯ ನೊಂದಣಿ ಕಾಯ್ದೆ–1908 ರ ಸೆಕ್ಷನ್ 80 ಉಲ್ಲಂಘನೆ. ಪರವಾನಿಗೆಯಲ್ಲದ ಅನಧಿಕೃತ ದಸ್ತಾವೇಜು ಬರಹಗಾರರಿಗೆ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಪುರಸ್ಕಾರ ದೊರಕುತ್ತಿರುವುದರಿಂದ ಅಧಿಕೃತ ಪರವಾನಿಗೆ ಹೊಂದಿದ ಪತ್ರ ಬರಹಗಾರರ ವೃತ್ತಿಗೆ ಭಾರೀ ಹೊಡೆತ ಬಿದ್ದಿದೆ. ನೊಂದಾಯಿತ ಬರಹಗಾರರ ಬಗ್ಗೆ ಕಾಳಜಿ ವಹಿಸಿ ಅನಧಿಕೃತ ವ್ಯಕ್ತಿಗಳು ದಸ್ತಾವೇಜು ನೊಂದಣಿ ಮಾಡಿಸಲು ಕಛೇರಿಗೆ ಬರದಂತೆ ನಿರ್ಭಂಧಿಸಬೇಕು ಹಾಗೂ ನೊಂದಣಿಗೆ ದಸ್ತಾವೇಜುಗಳನ್ನು ಹಾಜರು ಪಡಿಸಿದ ಸಮಯದಲ್ಲಿ ಭಾರತೀಯ ನೊಂದಣಿ ಕಾಯ್ದೆ 1908 ರ ಸೆಕ್ಷನ್ 80 ಬಿ ನ ಅಡಿಯಲ್ಲಿ ದಸ್ತಾವೇಜು ಲಿಖಿತದ ಅರ್ಹತೆಯನ್ನು ಪರಿಸೀಲಿಸಿ ನೊಂದಣಿಗೆ ಸ್ವೀಕರಿಸಲು ಉಪ ನೊಂದಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಪತ್ರ ಬರಹಗಾರರು ಮನವಿ ಪತ್ರ ನೀಡಿ ಶಾಸಕರನ್ನು ಆಗ್ರಹಿಸಿದರು.

ಸಂಘದ ಸದಸ್ಯರ ಮನವಿ ಪತ್ರ ಸ್ವೀಕರಿಸಿದ ಶಾಸಕ ಹೆಚ್.ಟಿ.ಮಂಜು ಈ ಕುರಿತು ಉಪ ನೊಂದಣಾಧಿಕಾರಿಗಳ ಜೊತೆ ಮಾಹಿತಿ ಪಡೆದು ಸೂಕ್ತ ಕ್ರಮ ವಹಿಸುವ ಭರವಸೆ ನೀಡಿದರು.


ತಾಲೂಕು ಪತ್ರ ಬರಹಗಾರರ ಸಂಘದ ಅಧ್ಯಕ್ಷ ಪಿ.ಎಸ್.ಶಿವಲಿಂಗೇಗೌಡ, ಉಪಾಧ್ಯಕ್ಷ ಕೆ.ಎಸ್.ನಾಗರಾಜು, ಕಾರ್ಯದರ್ಶಿ ಕೆ.ಆರ್. ಹರೀಶ್ ಕುಮಾರ್, ಸಹಕಾರ್ಯದರ್ಶಿ ಟಿ.ನರಸಿಂಹಮೂರ್ತಿ, ಶಂಕರ್ ನಾಗ್, ಮುರುಗೇಶ್, ಕೆ.ಸಿ.ವೆಂಕಟರಾಮು ಸೇರಿದಂತೆ ಸಂಘದ ಪದಾಧಿಕಾರಿಗಳಿದ್ದರು.

# ಜನಗಣತಿ–2026ರ ಮನೆಪಟ್ಟಿ ಕಾರ್ಯ ಯಶಸ್ವಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಂದ ಮೇಲ್ವಿಚಾರಕರು, ಗಣತಿದಾರರಿಗೆ ಸನ್ಮಾನ

**ಚಾಮರಾಜನಗರ:** ಜನಗಣತಿ–2026ರ ಅಂಗವಾಗಿ ಮೊದಲ ಹಂತದಲ್ಲಿ ಮನೆಪಟ್ಟಿ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ ಗಣತಿದಾರರು ಹಾಗೂ ಮೇಲ್ವಿಚಾರಕರನ್ನು ಜಿಲ್ಲಾಧಿಕಾರಿ ಶ್ರೀರೂಪ ಅವರು ನಗರದಲ್ಲಿಂದು ಸನ್ಮಾನಿಸಿದರು.

ನಗರದ ಸಿ.ಡಿ.ಎಸ್. ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಾಮರಾಜನಗರ ತಾಲೂಕಿನ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮನೆಪಟ್ಟಿ ಕಾರ್ಯಕ್ಕೆ ನಗರ, ಸ್ಥಳೀಯ ಸಂಸ್ಥೆ ಹಾಗೂ ಕಂದಾಯ ಇಲಾಖೆಯಿಂದ ನಿಯೋಜಿಸಿದ್ದ ಗಣತಿದಾರರು ಹಾಗೂ ಮೇಲ್ವಿಚಾರಕರನ್ನು ಜಿಲ್ಲಾಧಿಕಾರಿಯವರು ಶಾಲು ಹೊದಿಸಿ, ಹಾರ ತುರಾಯಿ, ಫಲತಾಂಬೂಲಗಳೊಂದಿಗೆ ಆತ್ಮೀಯವಾಗಿ ಗೌರವಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು 2026ರ ಜನಗಣತಿಯ ಮೊದಲ ಹಂತದ ಮನೆಪಟ್ಟಿ ಕಾರ್ಯವನ್ನು ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪೂರ್ಣಗೊಳಿಸಲಾಗಿದೆ. ನಿಗದಿತ ಅವಧಿಗಿಂತ 15 ದಿನಗಳ ಮೊದಲೇ ಮನೆಪಟ್ಟಿ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ ಗಣತಿದಾರರು ಹಾಗೂ ಮೇಲ್ವಿಚಾರಕರನ್ನು ಆಯಾ ತಾಲೂಕುಗಳಲ್ಲಿಯೇ ಗೌರವಿಸಲಾಗುತ್ತಿದೆ. 2027ರ ಫೆಬ್ರವರಿಯಲ್ಲಿ ಆರಂಭವಾಗುವ ಜನಗಣತಿ 2ನೇ ಹಂತದಲ್ಲಿಯೂ ಇದೇ ಮಾದರಿಯ





ಕಾರ್ಯನಿರ್ವಹಣೆಗೆ ಗಣತಿದಾರರನ್ನು ಹುರಿದುಂಬಿಸಲಾಗುತ್ತಿದೆ ಎಂದರು.

ಜನಗಣತಿ ಆರಂಭದ ದಿನಗಳಲ್ಲಿ ಮನೆಪಟ್ಟಿ ಕಾರ್ಯದಲ್ಲಿ ಚಾಮರಾಜನಗರ ಜಿಲ್ಲೆ 30ನೇ ಸ್ಥಾನದಲ್ಲಿತ್ತು. ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಜನಗಣತಿ ಪರಿಣಾಮಕಾರಿ ಕಾರ್ಯನಿರ್ವಹಣೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿತ್ತು. ಪ್ರಸ್ತುತ ಜನಗಣತಿಯ ಮನೆಪಟ್ಟಿ ಕಾರ್ಯನಿರ್ವಹಣೆಯಲ್ಲಿ ನಮ್ಮ ಚಾಮರಾಜನಗರ ಜಿಲ್ಲೆ ಎಂಟನೇ ಸ್ಥಾನ ಪಡೆದಿದೆ. ಇದಕ್ಕಾಗಿ ಗಣತಿ ಕಾರ್ಯದಲ್ಲಿ ಪಾಲ್ಗೊಂಡ ಎಲ್ಲಾ ಗಣತಿದಾರರನ್ನು ಜಿಲ್ಲಾಧಿಕಾರಿಯವರು ಅಭಿನಂದಿಸಿದರು.

ನಗರ, ಸ್ಥಳಿಯ ಸಂಸ್ಥೆಗಳಿಂದ ನಿಯೋಜಿತರಾಗಿದ್ದ ಮೇಲ್ವಿಚಾರಕರಾದ ಎನ್. ಸೋಮಶೇಖರ್, ತ್ರಿವೇಣಿ, ಎಂ. ನಂಜುಂಡಸ್ವಾಮಿ, ಗಣತಿದಾರರಾದ ಡಿ.ವಿ. ರಂಗಪ್ಪ, ಶ್ರೀಶೈಲ, ಅಮಿತ ಭಾನು, ರೇಣುಕಾ, ಎಂ. ಕುಮಾರ, ಶಿವಣ್ಣ, ನಟರಾಜು, ಕಿಶೋರ್ ಹಾಗೂ ಕಂದಾಯ ಇಲಾಖೆಯ ಎಂ. ರಾಜೇಂದ್ರ, ಪಿ.ವಿ. ಲಕ್ಷ್ಮೀ, ಎಚ್.ಎಂ. ಮಂಜುನಾಥ್, ಸಿದ್ದಲಿಂಗಮೂರ್ತಿ, ಆರ್. ವಿನೋದ್, ಸಿ. ಶ್ರೀಲಕ್ಷ್ಮೀ ಅವರನ್ನು ಜಿಲ್ಲಾಧಿಕಾರಿ ಶ್ರೀರೂಪ ಅವರು ಸನ್ಮಾನಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವೆಂಕಟೇಶ್, ತಹಶೀಲ್ದಾರ್ ಗಿರಿಜಾ, ನಗರಸಭೆಯ ಸಮುದಾಯ ಸಂಘಟನಾಧಿಕಾರಿ ವೆಂಕಟ್‌ನಾಯಕ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಉಡುಗೊರೆ ಹೊರೆಯಾಗದಿರಲಿ





ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಮನದ ಮಾತು...

ವೈಶಾಖ ಮಾಸ ಬಂತೆಂದರೆ ಸಾಕು ಈ ಬೇಸಿಗೆಯ ಉರಿಬಿಸಿಲಿನ ಮಧ್ಯೆಯೇ ಸಾಲು ಸಾಲಾಗಿ ಸಮಾರಂಭಗಳು ಶುರುವಾಗುತ್ತವೆ. ಅದರಲ್ಲೂ ಈ ಬಾರಿ ಅಧಿಕ ಮಾಸ ಬಂದಿರುವುದರಿಂದ, ಅಧಿಕ ಮಾಸ ಆರಂಭವಾಗುವ ಮುನ್ನವೇ ಮುಗಿಸಿಬಿಡಬೇಕೆಂಬ ಆತುರದಲ್ಲಿ ಮದುವೆಗಳು, ಮುಂಜಿಗಳು, ಗೃಹಪ್ರವೇಶ, ವಾಸ್ತು, ಶಾಂತಿ ಹೀಗೆ ಅನೇಕ ಶುಭಕಾರ್ಯಗಳು ಮನೆಮನೆಗೂ ಜಾತ್ರೆಯಂತೆ ಕಂಗೊಳಿಸುತ್ತಿವೆ.

ಕಾರ್ಯಕ್ರಮ ಎಂಬ ಪದ ಕೇಳಿದ ತಕ್ಷಣ ಕಣ್ಣೆದುರಿಗೆ ಮೂಡುವುದು ಸಂಭ್ರಮದ ಚಿತ್ರಣ ಜಗಮಗಿಸುವ ದೀಪಗಳು, ಹೂವಿನ ತೋರಣಗಳು, ಬಣ್ಣ ಬಣ್ಣದ ವಸ್ತ್ರಗಳು, ಝುಳಪಿಸುವ ಒಡವೆಗಳು, ಸುಗಂಧ ಹರಡುವ ಭೋಜನದ ಪದಾರ್ಥಗಳು. ಅದರ ಜೊತೆಗೆ ಇನ್ನೊಂದು ಮುಖ್ಯವಾದ ಅಂಶ ಉಡುಗೊರೆ!

**ನಿಜವಾದ ಅರ್ಥದಲ್ಲಿ ಉಡುಗೊರೆ ಎಂದರೆ ಏನು**

ನಮ್ಮ ಪ್ರೀತಿಪಾತ್ರರಿಗೆ ನಮ್ಮ ಹೃದಯದ ತುಣುಕಿನಂತೆ ನೀಡುವ ಪುಟ್ಟ ಕಾಣಿಕೆ. ಅದು ನೆನಪಿನಲ್ಲಿ ಉಳಿಯುವಂತಿರಬಹುದು, ಇಲ್ಲವೇ ಉಪಯೋಗಕ್ಕೆ ಬರುವಂತಿರಬಹುದು. ಆದರೆ ದಿನಗಳು ಕಳೆದಂತೆ ಈ ಉಡುಗೊರೆ ಎಂಬ ಪದ ಪ್ರೀತಿಯ ಸಂಕೇತವಾಗಿರುವುದಕ್ಕಿಂತ, ಕಿರಿಕಿರಿಯ ತಲೆನೋವಾಗಿಬಿಟ್ಟಿದೆ.

ಒಂದು ಸಮಾರಂಭ ಹಮ್ಮಿಕೊಂಡರೆ ಸಾಕು ಯಾರಿಗೆ ಏನು ಮರಳಿ ಕೊಡಬೇಕು ಎಂಬ ಲೆಕ್ಕಾಚಾರ ಶುರುವಾಗುತ್ತದೆ. ಅವರ ಸ್ಥಾನಮಾನ, ಸಂಬಂಧ, ಆರ್ಥಿಕ ಸ್ಥಿತಿ ಎಲ್ಲವನ್ನೂ ತೂಕಮಾಪನದ ತಕ್ಕಡಿಯಲ್ಲಿ ಇಟ್ಟಂತೆ ಅಳೆದು ನೋಡಲಾಗುತ್ತದೆ. ಕೆಲವರು ಕೊಟ್ಟ ಸೀರೆಯ ಬಗ್ಗೆ, ಕೆಲವರು ಕೊಟ್ಟ ಪಾತ್ರೆಯ ಬಗ್ಗೆ, ಕೆಲವರು ಕೊಟ್ಟ ಶರ್ಟ್‌ಪೀಸ್ ಬಗ್ಗೆ ಹಿಂದೆ ಕುಳಿತು ನಡೆಯುವ ವಿಮರ್ಶೆಗಳು ವಾರ್ತಾ ಬಿಗ್ ಬುಲೆಟ್ಟಿನಂತೆ ತೀಕ್ಷ್ಣ

ಅಯ್ಯೋ ಮಗನ ಮದುವೆಯಲ್ಲಿ ಇಂಥ ಸೀರೆ ಕೊಟ್ಟಾರಲ್ಲ! ಮಚ್ಚರದಾನಿಯ ಇದ್ದಂಗ ಅದ!

ನಮ್ಮ ಮನೆ ಕೆಲಸದವಳೂ ಇದಕ್ಕಿಂತ ಚಂದ ಸೀರೆ ಉಡುತ್ತಾಳೆ! ಎಂಬ ಮಾತುಗಳು ನಗುಮುಖದ ಹಿಂದೆ ಮಚ್ಚಿಟ್ಟ ಕಟುವಾದ ಮುಳ್ಳುಗಳಂತೆ ಇರಿಸುತ್ತವೆ.

ಸಮಾರಂಭಗಳಿಗೆ ಹೋಗುವುದು ಯಾರಿಗೆ ಇಷ್ಟವಿಲ್ಲ ಹೇಳಿ
ಅವರು ಬಹಳ ಬೇಕಾದವರು ಹೋಗಲೇಬೇಕು
ಹೋಗಲಿಲ್ಲ ಅಂದ್ರೆ ತಪ್ಪಾಗುತ್ತದೆ
ನಮ್ಮ ಖಾಸ ಬಳಗ

ಹೀಗೆ ಹೇಳುತ್ತಾ ನಾವು ಸಿದ್ಧರಾಗುತ್ತೇವೆ. ಹೊಸ ಸೀರೆ, ಹೊಸ ಆಭರಣ, ಬ್ಲೌಸ್ ಸರಿಹೊಂದದಿದ್ದರೆ ಹೊಲಿಗೆ ಬಿಚ್ಚುವ ಗೋಜು ಇವೆಲ್ಲ ಹೆಣ್ಣುಮಕ್ಕಳ ಸಡಗರದ ಭಾಗವೇ ಸರಿ. ಕೆಲವರು ಹಿಂದಿನ ಸಮಾರಂಭದಲ್ಲಿ ಹಾಕಿದ ಸೀರೆಯನ್ನು ಮತ್ತೆ ಹಾಕಬಾರದೆಂಬ ಒತ್ತಡದಲ್ಲೇ ಬದುಕುತ್ತಾರೆ. ಬಣ್ಣ ಬಣ್ಣದ ಉಡುಪುಗಳನ್ನು ಧರಿಸಿ, ಅಲಂಕಾರ ಮಾಡಿಕೊಂಡು, ಪ್ರೀತಿಪಾತ್ರರ ಸಮಾರಂಭಕ್ಕೆ ತೆರಳುವುದು ಅವರಿಗೊಂದು ಹಬ್ಬ.

ಅಲ್ಲಿ ಭೇಟಿಯಾಗುವ ಬಂಧುಗಳು, ಯೋಗಕ್ಷೇಮ ವಿಚಾರಿಸುವ ಮಾತುಗಳು, ಬಾಲ್ಯದ ನೆನಪುಗಳು,ಆ ಸಮಾರಂಭದಲ್ಲಿ ಒಂದಿಷ್ಟು ಪ್ರೀತಿಯ ಮಧುರ ಬಾಂಧವ್ಯಗಳು, ಅವರಿವರನು ಮತ್ತೆ ತಡಕಾಡುವ ಕಣ್ಣುಗಳು. ಯಾರದೋ ಮಗನಿಗೆ ಯಾರದೋ ಮಗಳ ಜೊತೆ ಬ್ರಹ್ಮಗಂಟು ಹಾಕುವ ಕಾಕು... ಮಾಮಿಗಳು...ಹೀಗೆ ಒಂದು ಸಮಾರಂಭವು ಎಲ್ಲರು ಲವಲವಿಕೆಯಿಂದ ಸಂಪನ್ನಗೊಳಿಸುತ್ತಾರೆ. ನಾವು ಹೋಗದಿದ್ರೆ ಹೆಂಗೆ ಅಂತ ಕೇಳುವ ನಿಜ ಅರ್ಥದಲ್ಲಿ ಹೋಗಬೇಕು ಎನ್ನುವ ತುಡಿತ ಮತ್ತು ಜೀವನ ಪ್ರೀತಿ ಇರುತ್ತದೆ ವಿನಹ ಯಾರು ಹೋಗದಿದ್ದರೂ ಯಾವ ಸಮಾರಂಭವು ನಿಲ್ಲುವುದಿಲ್ಲ!! ಆಗುವ ಮದುವೆಗಳು ಆಗುತ್ತವೆ,ಆದರೆ ಅದರಲ್ಲಿ ನಮ್ಮದೊಂದಿಷ್ಟು ಬಡಿವಾರವನ್ನು ತೋರಿಸಿಕೊಳ್ಳುತ್ತಾ ತಪ್ಪಿಸಲಾರದ ಪರಿಸ್ಥಿತಿಯಲ್ಲಿ ಬಂದೇವು ಎಂದು ಹೇಳಿಕೊಳ್ಳುತ್ತಾ ಒಂದು ಸುಖವನ್ನು ಕಾಣುತ್ತೇವೆ.ಇವೆಲ್ಲ ಸಮಾರಂಭಗಳಿಗೆ ಜೀವ ತುಂಬುತ್ತವೆ. ಮನುಷ್ಯ ಸಂಘಜೀವಿ. ಒಂದಿಷ್ಟು ಬದಲಾವಣೆ, ಒಂದಿಷ್ಟು ಜನಸಂಗಮ ಮನಸ್ಸಿಗೆ ಹೊಸ ಚೈತನ್ಯ ತುಂಬುತ್ತದೆ.ಅಲ್ಲಿಯ ಆಹಾರ ಊಟ ಉಪಚಾರ ಸವಿದು, ಬಂದವರ ಬಾರದವರ ಯೋಗ ಕ್ಷೇಮವನ್ನು ಕೇಳಿ ಅವರಿವರ ಬಾಯಿಯಿಂದ ಎಲ್ಲರ ವಿಷಯಗಳನ್ನು ತಿಳಿದು ತಿಳಿಸುವದು ಒಂದು ಜನಗಣತಿ ಸಮೀಕ್ಷೆಯೇ ಸರಿ.

ಆದರೆ ಇದೇ ಸಮಾರಂಭಗಳಲ್ಲಿ ಉಡುಗೊರೆ ಎಂಬುದು ಕೆಲವೊಮ್ಮೆ ಬಂಡೆಯಷ್ಟು ಭಾರವಾಗಿಬಿಡುತ್ತದೆ. ಬಂದ ಪ್ರತಿಯೊಬ್ಬರಿಗೂ ಏನಾದರೂ ಕೊಡಲೇಬೇಕು ಎಂಬ ಒತ್ತಡ. ಕೆಲವೊಮ್ಮೆ ಕಡಿಮೆ ಬೆಲೆಯ ವಸ್ತುಗಳನ್ನು ಗುಡ್ಡಗಟ್ಟಿಯಾಗಿ ತಂದು ಹಂಚಿಬಿಡುತ್ತಾರೆ. ಆಗ ಲಾಭವಾಗುವುದು ವ್ಯಾಪಾರಿಗೇ ಹೊರತು ಸಂಬಂಧಗಳಿಗೆ ಅಲ್ಲ.

ಹೋದವರೂ ಹಿಂದೆ ತಾವು ಕೊಟ್ಟಿದ್ದನ್ನು ನೆನಪಿಸಿಕೊಂಡೇ ಉಡುಗೊರೆ ಆರಿಸುತ್ತಾರೆ. ಅವರು ನಮಗೆ ಇಷ್ಟು ಕೊಟ್ಟಿದ್ದರು ನಾವು ಕಡಿಮೆ ಕೊಡಬಾರದು ಎಂಬ ಭಾವನಾ ಲೆಕ್ಕಾಚಾರ ಶುರುವಾಗುತ್ತದೆ. ನಂತರ ಆ ಉಡುಗೊರೆಯ ವಿಮರ್ಶೆ ಮಹಾಭಾರತದ ಸಭೆಯ ಚರ್ಚೆಯಂತೆ ಮುಂದುವರಿಯುತ್ತದೆ.

**ನೋಡ್ರಿ ಎಂಥ ಸೀರೆ ಕೊಟ್ಟಾರೆ!**

ಆ ಶರ್ಟ್‌ಪೀಸ್‌ಗೆ ಅರಿಶಿನದ ಕಲೆ ಹೋಗಲೇ ಇಲ್ಲ!
ನನ್ನ ಮಗಳಿಗೆ ಇಂಥ ರಬ್ಬ ಬಣ್ಣದ ಸೀರೆ ಕೊಡ್ತಾರಾ
" ಆ ಧೋತರ ಜೋಡಿ ಇಟ್ಟಲ್ಲೇ ಮಡಚಿ ಕಟಗರಿಸಿ ಬಿದ್ದಾವ"

ಹೀಗೆ ಮಾತುಗಳು ಕಾದಂಬರಿಯ ವಿಮರ್ಶೆಗಿಂತ ಸ್ವಾರಸ್ಯಕರ.ಈ ಸನ್ಮಾನ ಪತ್ರಗಳು

ಇನ್ನು ಉಡುಗೊರೆ ಪಡೆದವರ ಕಥೆಯೂ ಕಡಿಮೆಯಿಲ್ಲ. ಅನೇಕ ಸಮಾರಂಭಗಳನ್ನು ಕಂಡ ಗಡಿಯಾರದ ಪೆಟ್ಟಿಗೆಗಳು, ಕೈಯಿಂದ ಕೈಗೆ ಬದಲಾದ ಸೀರೆಗಳು., ಒಂದು ಮನೆಯಿಂದ ಇನ್ನೊಂದು ಮನೆಗೆ ಸುತ್ತಾಡುವ ಬ್ಲೌಸ್‌ಪೀಸ್‌ಗಳು ಇವೆಲ್ಲ ಸಂಬಂಧಗಳಿಗಿಂತ ವಸ್ತುಗಳ ಸಂಚಾರವೇ ಹೆಚ್ಚಾಗಿದೆ ಎಂಬುದನ್ನು ತೋರಿಸುತ್ತವೆ. ಮೊಬೈಲ್ ನೆಟ್‌ವರ್ಕ್‌ಗಿಂತ ವೇಗವಾಗಿ ಈ ಉಡುಗೊರೆಗಳು ಕೈ ಬದಲಾಯಿಸುತ್ತವೆ.

ಅವರ ಮದುವೆಗೆ ನಾನು ಚಂದದ ಸೀರೆ ಕೊಟ್ಟಿದ್ದೆ ಅವರು ಏನು ಕೊಟ್ಟಿದ್ದಾರೆ ನೋಡಿ!

ಮಗ–ಸೊಸೆ ಇಬ್ಬರೂ ದುಡಿಯುತ್ತಾರೆ ಅಂದ್ರೂ ಇಂಥ ಉಡುಗೊರೆ!

ಎಂಬ ಟಿಪ್ಪಣಿಗಳಲ್ಲಿ ಕೆಲವರು ಕಂದಾಯ ಅಧಿಕಾರಿಗಳಿಗಿಂತ ಹೆಚ್ಚಾಗಿ ಇತರರ ಆಸ್ತಿ–ಅಂತಸ್ತನ್ನೇ ಲೆಕ್ಕ ಹಾಕುತ್ತಾರೆ.



ಆದರೆ ನಿಜವಾದ ಅರ್ಥದಲ್ಲಿ ಉಡುಗೊರೆ ಎಂದರೆ ಪ್ರೀತಿಯ ಸಂಕೇತ. ಅದು ನೆನಪಿನಲ್ಲಿ ಉಳಿಯಬೇಕು ಅಥವಾ ಉಪಯೋಗಕ್ಕೆ ಬರಬೇಕು. ಇಲ್ಲದಿದ್ದರೆ ಅದು ಉಡುಗೊರೆಯಲ್ಲ, ಗುಜರಿಗೆ ಹೋಗುವ ವಸ್ತು ಮಾತ್ರ.

ಮಧ್ಯಮ ವರ್ಗದ ಜನರಿಗೆ ಹತ್ತಾರು ಮದುವೆಗಳಿಗೆ ಹೋಗಿ ಒಳ್ಳೆಯ ಉಡುಗೊರೆ ಕೊಡುವುದು ಸುಲಭವಲ್ಲ. ಪ್ರಯಾಣದ ಖರ್ಚು, ಬಟ್ಟೆ, ಇತರೆ ವೆಚ್ಚಗಳು ಎಲ್ಲವೂ ಸೇರಿ ಭಾರವಾಗುತ್ತವೆ. ಇನ್ನು ಸಮಾರಂಭ ಮಾಡುವವರ ಪರಿಸ್ಥಿತಿ ಇನ್ನೂ ಕಷ್ಟ. ಮನೆ ಕಟ್ಟಿದ ಸಾಲ, ಮದುವೆಯ ಖರ್ಚು, ಊಟೋಪಚಾರ, ಅಲಂಕಾರ ಇವೆಲ್ಲದ ನಡುವೆ ಮರಳಿ ಉಡುಗೊರೆ ನೀಡುವುದು ಕೆಲವೊಮ್ಮೆ ಕೈಮೀರಿದ ಹೊರೆ ಆಗಿಬಿಡುತ್ತದೆ.

ಮನೆ ಕಟ್ಟುವವನ ಗೋಡೆಯೊಳಗೆ ಅವನ ಬೆವರ ಹನಿಗಳು ಅಡಗಿರುತ್ತವೆ. ಮಗಳನ್ನು ಮದುವೆ ಮಾಡುವ ತಂದೆಯ ನಗುವಿನ ಹಿಂದೆ ಅವನ ನಿದ್ದೆರಹಿತ ರಾತ್ರಿಗಳು ಅಡಗಿರುತ್ತವೆ ಸಾಲದ ಹೊರೆಗಳು ಇರುತ್ತವೆ. ಅನ್ನ ಹಾಕಿಸುವವನ ಕೈಯಲ್ಲಿ ಕೇವಲ ಆಹಾರವಲ್ಲ, ಅವನ ಮಾನ, ಪ್ರೀತಿ ಮತ್ತು ಪರಿಶ್ರಮ ಕೂಡ ಬೆರೆತಿರುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಅನ್ನಹೇ ಪರಬ್ರಹ್ಮ ಎಂದು ಹೇಳುತ್ತಾರೆ. ಅಂತಹ ಅನ್ನವನ್ನು ಉಂಡು, ಅದರ ಲೆಕ್ಕ ಹಾಕಿ ಮಾತಾಡುವುದು ಬಹಳ ಅನುಚಿತ.

ಉಡುಗೊರೆ ಲೆಕ್ಕದಲ್ಲಿ ಬಂದ ಅತಿಥಿಗಳನ್ನು ಎಂದಿಗೂ ಅಳೆಯಬಾರದು. ಸಮಾರಂಭಗಳು ಸಂತೋಷದ ಸಹಿಬಾಗಿತ್ವ ಆಗಬೇಕು ವಿನಃ ತೋರಿಕೆಯ ಸಂಧಾನಗಳು ಖಂಡಿತ ಅಲ್ಲ.

ಇಂದು ಹಲವಾರು ಮಧ್ಯಮ ವರ್ಗದ ಕುಟುಂಬಗಳು ಏನು ಹೇಳ್ತಾರೋ ಎಂಬ ಸಮಾಜದ ಭಯಕ್ಕೆ ಸಾಲ ಮಾಡಿ ಉಡುಗೊರೆ ಕೊಡುವ ಪರಿಸ್ಥಿತಿಗೆ ತಲುಪಿವೆ. ಮಕ್ಕಳ ಶಾಲಾ ಶುಲ್ಕ ಕಟ್ಟಲು ಲೆಕ್ಕ ಹಾಕುವ ಕೈಗಳು, ತಿಂಗಳ ಖರ್ಚನ್ನು ಜೋಪಾನ ಮಾಡುವ ಮನಸ್ಸುಗಳು, ಒಂದು ಸಮಾರಂಭಕ್ಕೆ ಹೋಗುವಾಗ ಮಾತ್ರ ಖಾಲಿ ಕೈಯಲ್ಲಿ ಹೋದರೆ ಹೇಗೆ ಎಂಬ ಸಂಕೋಚಕ್ಕೆ ನಲುಗಿ ಸಾಲದ ಬಾಗಿಲು ತಟ್ಟುತ್ತವೆ. ಆದರೆ ನಿಜವಾಗಿ ನೋಡಿದರೆ ಸಾಲ ಮಾಡಿ ಕೊಟ್ಟ ಉಡುಗೊರೆಯಲ್ಲಿ ಪ್ರೀತಿಯ ಸುವಾಸನೆಗಿಂತ ಆತಂಕದ ಬೆವರೇ ಹೆಚ್ಚು ಇರುತ್ತದೆ. ಉಡುಗೊರೆಯ ಭಾರದಲಿ ಬಂದವರ ಮಾನವನ್ನಾಗಲಿ, ಆತ್ಮೀಯತೆಯನ್ನಾಗಲಿ ಅಳೆಯಬಾರದು. ಕೆಲವರ ಕೈಯಲ್ಲಿ ದುಬಾರಿ ಪೆಟ್ಟಿಗೆ ಇರಬಹುದು, ಇನ್ನೂ ಕೆಲವರ ಕೈಯಲ್ಲಿ ಕೇವಲ ಅಕ್ಷತೆ, ಆಶೀರ್ವಾದ ಮತ್ತು ಹೃದಯಪೂರ್ವಕ ನಗು ಇರಬಹುದು; ಆದರೆ ಎರಡರ ಹಿಂದೆ ಇರುವ ಮನಸ್ಸಿನ ಮೌಲ್ಯವನ್ನು ಯಾವ ತಕ್ಕಡಿಯೂ ಅಳೆಯಲು ಸಾಧ್ಯವಿಲ್ಲ. ಪ್ರೀತಿ, ಗೌರವ, ಸಮಯ, ಹಿತವಾದ ಮಾತು ಇವು ಬೆಲೆ ಕಟ್ಟಲಾಗದ ಉಡುಗೊರೆಗಳು. ಹಣ ಕೊಟ್ಟು ತಂದ ವಸ್ತುಗಳು ಕಾಲದೊಂದಿಗೆ ಮಸುಕಾಗಬಹುದು; ಆದರೆ ಹೃದಯದಿಂದ ನೀಡಿದ ಸೌಹಾರ್ದ ಮಾತ್ರ ಜೀವಮಾನವಿಡೀ ಮನಸ್ಸಿನಲ್ಲಿ ದೀಪದಂತೆ ಬೆಳಗುತ್ತಿರುತ್ತದೆ.

ತೀರಾ ಹತ್ತಿರದವರನ್ನು ಬಿಟ್ಟು ಉಡುಗೊರೆ ಕೊಡುವುದು–ಪಡೆಯುವುದು ಎರಡನ್ನೂ ನಿಲ್ಲಿಸಿದರೆ ಎಷ್ಟು ಒಳ್ಳೆಯದು! ನಾವು ಯಾರಿಗಾದರೂ ಕೊಡಬಹುದಾದ ಅತ್ಯಮೂಲ್ಯ ಉಡುಗೊರೆ ಎಂದರೆ ನಮ್ಮ ಸಮಯ. ನಮ್ಮ ವ್ಯಸ್ತ ಬದುಕಿನ ಮಧ್ಯೆಯೂ ಸಮಯ ತೆಗೆದು ಅವರ ಸಂತೋಷದಲ್ಲಿ ಭಾಗಿಯಾಗುವುದು ಅದೇ ನಿಜವಾದ ಕಾಣಿಕೆ. ಪ್ರೀತಿಯಿಂದ ಸ್ವಾಗತಿಸುವ ನಗುಮುಖ, ಬಂದಿದ್ದಕ್ಕೆ ಧನ್ಯವಾದ ಎಂಬ ಹೃದಯದ ಮಾತು, ಪ್ರೀತಿಯಿಂದ ಬಡಿಸಿದ ಒಂದು ಊಟ ಇವೆಲ್ಲ ಸಾವಿರ ರೂಪಾಯಿಯ ಉಡುಗೊರೆಯಿಗಿಂತ ಮಿಗಿಲಾದವು. ಹಾಗೆಯೇ ದೂರದ ಊರಿನಿಂದ ಪ್ರಯಾಣ ಮಾಡಿ ಸಮಾರಂಭಕ್ಕೆ ಬರುವ ಅತಿಥಿಯ ಉಪಸ್ಥಿತಿಯೇ ಅಮೂಲ್ಯ ಉಡುಗೊರೆ.

ಸಮಾರಂಭಗಳು ಸ್ನೇಹಸಮ್ಮೇಳನವಾಗಬೇಕು; ಬಣ್ಣದ ಪೆಟ್ಟಿಗೆಗಳಲ್ಲಿ ಸಿಲುಕಿದ ಲೆಕ್ಕಾಚಾರದ ಸಂಬಂಧಗಳಾಗಬಾರದು. ಉಡುಗೊರೆಗಳ ಹೆಸರಿನಲ್ಲಿ ಮಾನವೀಯತೆ ಕುಸಿಯಬಾರದು.

ಯಾವ ಸಮಾರಂಭಗಳೂ ತಮ್ಮ ಸಂಪತ್ತಿನ ತೋರಿಕೆಯಾಗಲಿ, ಧರಸಿದ ಆಭರಣಗಳ ಪ್ರದರ್ಶನವಾಗಲಿ ಆಗಬಾರದು. ಇರುವ ಸಂಪತ್ತನ್ನು ಸಂಭ್ರಮಿಸುವ ಗುಣವಿರಲಿ ವಿನಃ ಇನ್ನೊಬ್ಬರಿಗೆ ತೋರಿಸಿ ಮೆರೆಯುವ ಸಾಧನಗಳಾಗದಿರಲಿ. ನಿಮ್ಮ ಹತ್ತಿರ ಒಳ್ಳೆಯ ಸೀರೆ, ಆಭರಣ ಇದೆ ಎಂದು ಜಂಬದಿಂದ ಎಲ್ಲರೆದುರೂ ಬೀಗಿದರೆ ಖಂಡಿತ ಅದು ಹೆಚ್ಚುಗಾರಿಕೆ ಅಲ್ಲ, ನೀವು ಧನಿಕರೆಂದು ಇನ್ನೊಬ್ಬರಿಗೆ ಸಂಪತ್ತು ಹಂಚುತಿಲ್ಲ ಅಂದ ಮೇಲೆ ಗರ್ವ ಯಾವದರ ಬಗ್ಗೆ.... ಅದನ್ನು ನೀವೇ ಅನುಭವಿಸುವ ಸುಖದ ಸೊರೆಯನು ಇನ್ನೋರ್ವರ ಮುಂದೆ ಭ್ರಮಣವೆ. ಹಾಗೆಯೇ ನಮ್ಮ ಬಳಿ ಅವು ಇಲ್ಲವೆಂದು ಕೀಳರಿಮೆಯೂ ಬೇಡ. ನಾವು ಉಣ್ಣುವ ಅನ್ನ ನಮ್ಮ ದುಡಿಮೆಯಾಗಿರುವರೆಗೆ ನಾವು ಸದಾ ಅಭಿಮಾನದಿಂದ ಬದುಕಬೇಕು.

ಕಾಡಿನಲ್ಲಿದ್ದರೂ ರಾಮ, ರಾಮನೇ ಆಗಿದ್ದ. ಪರ್ಣಕುಟೀರದಲ್ಲಿದ್ದರೂ ಅಯೋಧ್ಯೆಯ ಅರಮನೆಗಿಂತ ಹೆಚ್ಚು ಸಂತಸದಿಂದ ಬದುಕಿದ್ದ. ಸಂತೋಷವು ಬಂಗಾರದ ಆಭರಣಗಳಲ್ಲಿ ಅಲ್ಲ; ಮನಸ್ಸಿನ ಸಮಾಧಾನದಲ್ಲಿ ಇದೆ. ಸಂಬಂಧಗಳ ಬೆಲೆ ಉಡುಗೊರೆಯ ಪೆಟ್ಟಿಗೆಯಲ್ಲಿ ಅಲ್ಲ; ಪ್ರೀತಿಯಿಂದ ನೆನೆಸುವ ಹೃದಯಗಳಲ್ಲಿ ಇದೆ. ನೀವು ಯಾರಿಗಾದರೂ ಕೊಡುವ ಬಹುಮೂಲ್ಯ ಉಡುಗೊರೆ ಎಂದರೆ ಅದು ನಿಮ್ಮ ಸಮಯ!!

# ಬೇಬಿ ಕಾರ್ನ್ ಮಂಚೂರಿಯನ್






**ಬೇಕಾಗುವ ಸಾಮಗ್ರಿಗಳು**

ಬೇಬಿ ಕಾರ್ನ್ 7, ಟೊಮೆಟೊ ಸಾಸ್, ಚಿಲ್ಲಿ ಸಾಸ್
ಹಿ ಕಾಳು ಮೆಣಸಿನಪುಡಿ, ಸೋಯಾಸಾಸ್, ಎಣ್ಣೆ
ಈರುಳ್ಳಿ, ಮೊಟ್ಟೆ, ಕಾರ್ನ್ ಫ್ಲೋರ್, ವಿನಿಗರ್
ಹಿ ಉಪ್ಪು, ಶುಂಠಿ, ಬೆಳ್ಳುಳ್ಳಿ, ತಣ್ಣೀರು
ಹಿ ಸಕ್ಕರೆ, ಈರುಳ್ಳಿ ಹೂ, ಮೈದಾ ಹಿಟ್ಟು

**ಮಾಡುವ ವಿಧಾನ:**

ಬೌಲಿಗೆ ಬೇಬಿ ಕಾರ್ನ್ ಹಾಕಿ. ಇದಕ್ಕೆ ಮೈದಾ ಹಿಟ್ಟು, ಸೋಯಾ ಸಾಸ್, ಚಿಲ್ಲಿ ಸಾಸ್ ಮತ್ತು ಅಗತ್ಯಕ್ಕೆ ತಕ್ಕಷ್ಟು ನೀರು ಹಾಖಿ ಕಲಸಿ ನಂತರ ಕಾದ ಎಣ್ಣೆಯಲ್ಲಿ ಒಂದೊಂಧಾಗಿ ಕರಿಯಿರಿ. ಪ್ಯಾನಿಗೆ ಎಣ್ಣೆ ಹಾಕಿ ಕಾಯಿಸಿ. ಇದಕ್ಕೆ ಶುಂಠಿ ತುರಿ, ಬೆಳ್ಳುಳ್ಳಿ ತುರಿ, ಸಣ್ಣಗೆ ಹೆಚ್ಚಿದ ದಪ್ಪ ಮೆಣಸಿನಕಾಯಿ, ಈರುಳ್ಳಿ ಹಾಖಿ ಬಾಡಿಸಿ ಕೊಳ್ಳಿ. ನಂತರ ನೀರು, ಟೊಮೆಟೊ ಸಾಸ್, ಸೋತಾಸಾಸ್, ವಿನಿಗರ್ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಬೇಯಿಸಿ. ಇದಕ್ಕೆ ಕರಿದಿಟ್ಟುಕೊಂಡ ಬೇಬಿಕಾರ್ನ್ ಹಾಕಿ. ಜೊತೆಗೆ ಸಕ್ಕರೆ, ಕಾಳು ಮೆಣಸಿನ ಪುಡಿ, ಕಾರ್ನ್‌ಫ್ಲೊ?ಲೀರ್ ಮತ್ತು ಅಗತ್ಯವಿರುವಷ್ಟು ನೀರು ಹಾಕಿ ಹದವಾಗಿ ಬೇಯಿಸಿ. ಕೊನೆಯಲ್ಲಿ ಈರುಳ್ಳಿ ಹೂ ಹಾಕಿದರೆ ಬೇಬಿ ಕಾರ್ನ್ ಮಂಚೂರಿಯನ್ ರೆಡಿ.

# ಸಮಯದ ಕೈಗೊಂಬೆಗಳು



ಸ್ನೇಹಾ ಆನಂದ್

ಸ್ನೇಹ ಲೋಕ



ಒಳ್ಳೆಯ ಆರೋಗ್ಯ, ಒಳ್ಳೆಯ ಆಹಾರ, ಒಳ್ಳೆಯ ಪತಿ, ಪತ್ನಿ, ಮಕ್ಕಳು, ಒಳ್ಳೆಯ ಮನೆ, ಒಳ್ಳೆಯ ಬಂಧು ಬಾಂಧವರು, ಒಳ್ಳೆಯ ಆತ್ಮೀಯ ಸ್ನೇಹಿತರು ಇಷ್ಟೂ ಒಬ್ಬ ವ್ಯಕ್ತಿಗೆ ಸಿಕ್ಕರೆ ಇನ್ನೇನು ಬೇಕು ಅಲ್ವಾ ಜೀವನಕ್ಕೆ! ಅಂದರೆ ದೇವರ ಕೃಪೆ ನಮ್ಮ ಮೇಲಿದೆ ಅಂತ ಅರ್ಥ!

ಹೀಗಿದ್ದ ಮೇಲೆ ನಮ್ಮ ಮನಸ್ಸನ್ನು ಯಾವುದೋ ಒಂದು ವಿಷಯಕ್ಕೆ ಕಲ್ಮಶಗೊಳಿಸಿಕೊಂಡು ನಾವು ಕಷ್ಟ ಅನುಭವಿಸಿ ಇನ್ನೊಬ್ಬರಿಗೂ ಕಷ್ಟ ಕೊಡುವುದರಲ್ಲಿ ಅರ್ಥವೇ ಇಲ್ಲ!

ಮಹಾಭಾರತದಲ್ಲಿ ಕೃಷ್ಣ ಎಷ್ಟೋ ಕೆಟ್ಟ ಜನರನ್ನೂ ಉದ್ಧರಿಸಿ ಅವರಿಗೆ ಒಳ್ಳೆಯ ಮುಕ್ತಿ ಕೊಟ್ಟ, ಶ್ರೀ ರಾಮನಂತೂ ಕ್ಷಮಯಾಧರಿತ್ರಿ ಎನಿಸಿಕೊಂಡ, ದೇವರಲ್ಲಿ ಕ್ಷಮಿಸುವ ಗುಣ ತುಂಬಾ ಇದೆ ಹೀಗಾಗಿ ಇಷ್ಟರ ಮಟ್ಟಿಗಾದರೂ ಇದ್ದೇವೆ, ಅಕಸ್ಮಾತ್ ಭಗವಂತ ಯಾವುದಕ್ಕೂ ಕ್ಷಮೆಯೇ ಕೊಟ್ಟಿಲ್ಲವೆಂದರೆ ಕ್ಷಣ ಕ್ಷಣಕ್ಕೂ ಒಂದಲ್ಲ ಒಂದು ತಪ್ಪು ಮಾಡುವ ನಮ್ಮ ಗತಿ ಏನಾಗುತಿತ್ತು ಅಲ್ಲವೇ!

ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಳ್ಳೆಯ, ಕೆಟ್ಟ ಎರಡೂ ಗುಣಗಳು ಇದ್ದೇ ಇರುತ್ತವೆ, ಯಾರೂ ಸತ್ಯ ಹರಿಶ್ಚಂದ್ರರಲ್ಲ ಈಗೀನ ಕಾಲದಲ್ಲಿ, ಪರಿಸ್ಥಿತಿಗೆ ತಕ್ಕ ಹಾಗೆ ಮಾತನಾಡುವ ಗುಣ ಎಲ್ಲರಲ್ಲೂ ಇರುತ್ತದೆ,ಎಲ್ಲರೂ ತಮ್ಮನ್ನು ತಾವು ವಹಿಸಿಕೊಂಡು ಬರುವವರೆ!

ಜನರ ಜಾಸ್ತಿ ನಿಂದನೆಗೆ ಒಳಗಾದವರು ಅತಿ ಕೆಟ್ಟ ಪರಿಸ್ಥಿತಿ ಹೊಂದದವರು ಒಂದೊಂದು ಬಾರಿ ಅತಿ ಕೆಟ್ಟವರನ್ನಾಗಿ ಬದಲಾಯಿಸಿ ಬಿಡುತ್ತದೆ!

ಯಾರೂ ತಮ್ಮ ಜೀವನದಲ್ಲಿ ಕಳ್ಳನಾಗಲು ಬಯಸುವುದಿಲ್ಲ, ಅದರಂತೆ ಭಿಕ್ಷುಕನಾಗುವುದು ಅನಿವಾರ್ಯತೆಯಿಂದಲೇ, ಆದರೆ ಅವರಿಗೆ ಒದಗಿದ ಪರಿಸ್ಥಿತಿಯಿಂದ ಕಳ್ಳನಾಗಿಯೋ, ಭಿಕ್ಷುಕನಾಗಿಯೋ ಪರಿವರ್ತನೆ ಹೊಂದಿ ಅದನ್ನೇ ಅಭ್ಯಾಸ ಮಾಡಿಕೊಂಡು ತಮ್ಮ ವ್ಯಕ್ತಿತ್ವವನ್ನು ಹೀನ ಸ್ಥಿತಿಗೆ ತಂದುಕೊಂಡು ಬಿಡುತ್ತಾರೆ!

ಕೊಲೆ ಮಾಡಿದ ಪ್ರತಿಯೊಬ್ಬರೂ ಕೆಟ್ಟವರೇ ಎನ್ನುವುದು ತಪ್ಪು, ಏಕೆಂದರೆ ಆ ಸಮಯದಲ್ಲಿ ಬಹುಶಃ ತಮ್ಮನ್ನು ರಕ್ಷಿಸಿಕೊಳ್ಳಲು ಕೊಲೆ ಮಾಡಿ ಕೊಲೆಗಾರನಾಗಿರಬಹುದು ಅಲ್ಲವೇ! ಆಯಾಯ ಪರಿಸ್ಥಿತಿಗೆ ತಲೆಬಾಗಲೇ ಬೇಕಾಗುತ್ತದೆ, ಇದರಿಂದ ಅದರ ಪರಿಣಾಮ ವಿಪರೀತಕ್ಕೆ ಹೋಗಬಹುದು!

ಹೀಗಾಗಿ ಪರಿಸ್ಥಿತಿಗಳು ವ್ಯಕ್ತಿಯ ಒಳ್ಳೆಯತನವನ್ನೂ ದುರುಪಯೋಗ ಪಡಿಸಿಕೊಂಡು ಬಿಡುತ್ತದೆ, ಕೆಟ್ಟ ಉದ್ದೇಶ ಯಾರಿಗೂ ಇರುವುದಿಲ್ಲ

ಮತ್ಸರ , ಹೊಟ್ಟೆ ಕಿಚ್ಚು ಜಾಸ್ತಿಯಾದರೆ ಉದ್ದೇಶಗಳು ನಕಾರಾತ್ಮಕವಾಗಿ ಬದಲಾಗುತ್ತವೆ!

ತಾಯಿ ತನ್ನ ಮಕ್ಕಳಿಗಾಗಿ ತನ್ನ ಜೀವನದ ಮುಕ್ಕಾಲು ಭಾಗವನ್ನೇ ಮುಡುಪಿಟ್ಟು ಬಿಡುತ್ತಾಳೆಯಾದರೂ ಕೂಡ ಮಕ್ಕಳು ಅವಳಿಗೆ ಆಸರೆ ನೀಡಿಲ್ಲವೆಂದರೂ ಆಕೆ ಮಕ್ಕಳನ್ನು ಶಪಿಸುವುದಿಲ್ಲ, ಅನಿವಾರ್ಯವಾಗಿ ಸಿಟ್ಟಿನಿಂದ ಬೈಯುತ್ತಾಳೆ ಅಷ್ಟೇ!

ಅದರಂತೆ ದೇವರು ಕೂಡ ಯಾರನ್ನೂ ಶಪಿಸುವುದಿಲ್ಲ , ಕಾರಣ ನಾವೆಲ್ಲ ಆತನ ಮಕ್ಕಳೇ ತಾನೆ, ತನ್ನ ಮಕ್ಕಳಲ್ಲಿ ಇರುವ ಕೆಟ್ಟ ಗುಣಕ್ಕೆ ಚಿಕ್ಕ ಪುಟ್ಟ ಶಿಕ್ಷೆ ಕೊಟ್ಟು ನಮ್ಮ ತಪ್ಪಿನ ಅರಿವು ಮೂಡಿಸಿ ತಿದ್ದುತ್ತಾನೆ ಅಷ್ಟೇ, ಹೀಗಾಗಿ ಚಿಕ್ಕ ಪುಟ್ಟ ಕಷ್ಟಗಳು ನಮ್ಮನ್ನು ಸ್ವಲ್ಪ ದಿನದ ಮಟ್ಟಿಗೆ ಕಾಡಿ ಕಾಣೆಯಾಗುತ್ತವೆ!

ಆದರೆ ಒಳ್ಳೆಯ ಕರ್ಮದಿಂದ ಹುಟ್ಟಿದವರು ಮಾತ್ರ ಯಾವ ತಪ್ಪಿಗೂ ಶಿಕ್ಷೆ ಅನುಭವಿಸದೇ ಸುಖವಾಗಿ ಜನಿಸಿ, ಸಂತೃಪ್ತಿಯಿಂದ ಬಾಳಿ, ನೆಮ್ಮದಿಯಿಂದಲೇ ಜೀವನದ ಅಂತ್ಯವನ್ನು ಕಾಣುತ್ತಾರೆ, ಅಂಥಹ ಸಾವನ್ನು ಸುಖದ ಸಾವು ಎಂದು ಕರೆಯುತ್ತೇವೆ!

ನಿಜ ಹೇಳಬೇಕೆಂದರೆ ಜನನ ಒಳ್ಳೆಯ ರೀತಿಯಲ್ಲಿಯೇ ಆಗಿರಬಹುದು ಆದರೆ ಮರಣ ಮಾತ್ರ ಸುಖದಿಂದ ಬರುವುದು ಅಷ್ಟು ಸುಲಭವಲ್ಲ ಅದಕ್ಕೆ ನಮ್ಮ ಜನ್ಮಜನ್ಮಾಂತರದ ರಹಸ್ಯದ ಹಿನ್ನಲೆ ಇರುತ್ತದೆ!

ಅದು ನಮಗೂ ಕೂಡ ತಿಳಿಯದು, ನಾವು ಈ ಜನ್ಮದಲ್ಲಿ ಮಾಡಿದ ಪಾಪ ಪುಣ್ಯ ಕರ್ಮವನ್ನಷ್ಟೇ ಅಲ್ಪಸ್ವಲ್ಪ ಎಣಿಸಬಹುದು ಜನ್ಮಾಂತರಗಳ ರಹಸ್ಯದ ಕೋಟೆಯನ್ನು ಭೇದಿಸಲು ಸಾಧ್ಯವಿಲ್ಲ ಹೀಗಾಗಿ ನಮ್ಮ ಸಾವು ಯಾವ್ಯಾವದೋ ರೀತಿಯಲ್ಲಿ ಬರೆದಿರುತ್ತದೆ, ಆ ಸಮಯಕ್ಕೆ ಸರಿಯಾಗಿ ಹಣೆಬರಹವು ನಮ್ಮನ್ನು ಆ ಸ್ಥಳಕ್ಕೆ ಹೋಗುವಂತೆ ಪ್ರೇರೆಪಿಸುತ್ತದೆ ಹಾಗು ಅಲ್ಲಿಯೇ ನಮ್ಮ ದೇಹವನ್ನು ಅಂತ್ಯಗೊಳಿಸಿ ಆತ್ಮವನ್ನು ಬಿಡುಗಡೆಗೊಳಿಸಿ ಕರ್ಮದ ಅನುಸಾರ ಮತ್ತೊಂದು ಯಾವುದೋ ದೇಹವನ್ನು ಸೇರುವಂತೆ ಮಾಡುತ್ತದೆ, ನಮ್ಮ ಜೀವನದ ಅಂತ್ಯ ಕೊನೆಯವರೆಗೂ ನಿಗೂಢ, ಮೇಲ್ಸ್ತರ ಯಲ್ಲಿ ಮಾತ್ರ ಜೀವನ ತುಂಬಾ ಸರಳವಾಗಿ ಕಾಣಿಸುತ್ತದೆ ಅಷ್ಟೇ, ಆದರೆ ಯಾವ ಸಮಯದಲ್ಲಿ ಏನಾಗುತ್ತದೆ ಎಂದು ಯಾರೂ ಹೇಳರು,ಹೀಗಾಗಿ ಜೀವಿತ ಇರುವವರೆಗೂ ನಾವು ಸಮಯದ ಕೈಗೊಂಬೆಯೇ ಸರಿ!

# "ಅಜೇಯ ಚೇತನ ಅಲೆಕ್ಸಾಂಡರ್ ಕರೆಲಿನ್"






ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 22

ಜಗತ್ತಿನಲ್ಲಿ ಎಂತಹ ಕಠಿಣ ಸವಾಲು ಎದುರಾದರೂ ಕಠಿಣ ಶ್ರಮ ಮತ್ತು ಅಚಲ ನಿರ್ಧಾರದಿಂದ ಇತಿಹಾಸ ಸೃಷ್ಟಿಸಬಹುದು ಎಂಬುದಕ್ಕೆ ರಷ್ಯಾದ ದಂತಕಥೆ ಅಲೆಕ್ಸಾಂಡರ್ ಕರೆಲಿನ್ ಅತ್ಯುತ್ತಮ ಉದಾಹರಣೆ.

ಸೈಬೀರಿಯಾದ ಅತ್ಯಂತ ತೀವ್ರ ಚಳಿಯ ಪ್ರದೇಶದಲ್ಲಿ ಜನಿಸಿದ ಕರೆಲಿನ್‌ಗೆ ಯಶಸ್ಸು ಸುಲಭವಾಗಿ ಸಿಗಲಿಲ್ಲ. ಆರಂಭಿಕ ದಿನಗಳಲ್ಲಿ ತರಬೇತಿ ಪಡೆಯುವಾಗ ಅವರ ಕಾಲು ತೀವ್ರವಾಗಿ ಮುರಿದುಹೋಗಿತ್ತು. ಇನ್ನು ಮುಂದೆ ಅವರು ಕುಸ್ತಿ ಆಡಲು ಸಾಧ್ಯವೇ ಇಲ್ಲ ಎಂದು ವೈದ್ಯರು ಹೇಳಿದ್ದರು. ಹೆತ್ತ ತಾಯಿಯೂ ಹೆದರಿ ಅವರ ಕುಸ್ತಿಯ ಉಡುಪನ್ನು ಸುಟ್ಟುಹಾಕಿದ್ದರು. ಆದರೆ, ಕರೆಲಿನ್ ಸೋಲೊಪ್ಪಲಿಲ್ಲ. ಮುರಿದ ಕಾಲಿನೊಂದಿಗೇ ಅವರು ಹಿಮದಲ್ಲಿ ಕಿಲೋಮೀಟರ್‌ಗಟ್ಟಲೆ ಓಡುತ್ತಾ, ನದಿಯಲ್ಲಿ ದೋಣಿ ನಡೆಸುತ್ತಾ ತಮ್ಮ ದೈಹಿಕ ಸಾಮರ್ಥ್ಯವನ್ನು ಜಗತ್ತೇ ಬೆರಗಾಗುವಂತೆ ಮರುರೂಪಿಸಿಕೊಂಡರು.

ಅವರ ಈ ಅಪ್ರತಿಮ ಪರಿಶ್ರಮದ ಫಲವಾಗಿ, ಅವರು ಗ್ರೀಕೋ–ರೋಮನ್ ಕುಸ್ತಿ ರಂಗದಲ್ಲಿ ಸತತ 13 ವರ್ಷಗಳ ಕಾಲ ಅಜೇಯರಾಗಿ ಮುನ್ನಡೆದರು. ತಮ್ಮ ವೃತ್ತಿಜೀವನದಲ್ಲಿ 887 ಪಂದ್ಯಗಳನ್ನು ಗೆದ್ದು, ಕೇವಲ 2 ಪಂದ್ಯಗಳಲ್ಲಿ ಮಾತ್ರ ಸೋತರು. ಸತತ 3 ಒಲಿಂಪಿಕ್ ಚಿನ್ನದ ಪದಕ ಹಾಗೂ 9 ಬಾರಿ ವಿಶ್ವ ಚಾಂಪಿಯನ್‌ಶಿಪ್ ಗೆದ್ದು ಇತಿಹಾಸ ಬರೆದರು. 130 ಕೆಜಿಯ ದೈತ್ಯ ಎದುರಾಳಿಯನ್ನೂ ತಲೆಕೆಳಗಾಗಿ ಎತ್ತಿ ಎಸೆಯುವ ಅವರ ಕರೆಲಿನ್ ಲಿಫ್ಟ್ ತಂತ್ರ ಕ್ರೀಡಾಲೋಕದ ಅದ್ಭುತ ಸಾಧನೆಯಾಗಿದೆ.

ಸೋಲುಗಳು ಮತ್ತು ದೈಹಿಕ ನೋವುಗಳು ನಮ್ಮನ್ನು ಜಗ್ಗಿಸಲು ಬಂದಾಗ,ಅವುಗಳನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಹೇಗೆ ಎದ್ದು ನಿಲ್ಲಬೇಕು ಎಂಬುದನ್ನು ಕರೆಲಿನ್ ಬದುಕು ಕಲಿಸುತ್ತದೆ. ನೆನಪಿಡಿ, ಅಸಾಧ್ಯ ಎಂಬುದು ಕೇವಲ ಒಂದು ಪದವಷ್ಟೇ ಹೊರತು ಅದೃಶ್ಯ ಗೋಡೆಯಲ್ಲ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,